ಕರ್ಮವೀರ

6/1/1947
to
5/1/1948

ಬೆಲೆ : ಎರಡು ಆಣೆ

ಕರ್ಮವೀರ

KARMAVEER
WEEKLY
HUBLI
JAN. 6
194

ಅಖಿಲ ... ಕರ್ನಾಟಕದಲ್ಲಿ ... ವಾರಪತ್ರಿಕೆ
Editor H. B. Purohit M.A.
ಸೋಮವಾರ, ತಾರೀಖು ೬-೧-
ಸಂಚಿಕೆ ೩೮

...ಟನಾಮು ಪ್ರಜಾರಾಜ್ಯದ ಸ್ವಾತಂತ್ರ್ಯ ಯುದ್ಧ

...ರ ಹುಟ್ಟು, ಬೆಳವಣಿಗೆ: ಫ್ರೆಂಚ ಸ್ವಾರ್ಥ ...ತ್ತು ರಾಷ್ಟ್ರೀಯ ಆಕಾಂಕ್ಷೆಗಳ ತಿಕ್ಕಾಟ



ಇಂಡೋಚೀನದ ಸ್ವಾತಂತ್ರ್ಯಪ್ರಿಯರಿಗೂ ಫ್ರೆಂಚ ಸಾಮ್ರಾಜ್ಯವಾದಿಗಳಿಗೂ ... ಘನಘೋರ ಕದನವೀಗ ಪರಮಾವಧಿಗೆ ಮುಟ್ಟಿದೆ. "ಇಂಡೋಚೀನದ ... ನಾಮು' ಪ್ರಜಾರಾಜ್ಯ ಗಂಡಾಂತರದಲ್ಲಿದೆ. ಆದುದರಿಂದ ಹಿಂದುಸ್ಥಾನದ ... ಸಹಾನುಭೂತಿ ತೋರಬೇಕು" ಎಂದು ಹಿಂದೀ ಮುಂದಾಳು... ಹಿಂದುಸ್ಥಾನಕ್ಕೆ ಬಂದಿರುವ 'ವೇಟನಾಮು' ಪ್ರತಿನಿಧಿಗಳು ಬಿನ್ನವಿಸಿ... ಡಿದ್ದಾರೆ.

ಇಂಡೋನೇಶಿಯಾದ ಸ್ವಾತಂತ್ರ್ಯ ಯುದ್ಧ ಅನೇಕ ... ಇದು ಮಂ... ...ಗರಿಗೆ ಚಿರಪರಿಚಿತವಾದುದು. ಇಂಡೋಚೀನದ ಸುದ್ದಿಗಳಿ... ಬಡ ಪ್ರಾಂತವನ್ನು ...ಮಿಸಿವೆ. ಆದರ ಅಲ್ಪ ಪರಿಚಯವನ್ನು ಇಲ್ಲಿ ಒದಗಿಸಲಾಗಿದೆ.

...ತ ಸಾಮ್ರಾಜ್ಯವಾದ

...ದ ದಕ್ಷಿಣಕ್ಕೆ, ಸಯಾಮು (ಥಾಯಲಂಡ) ...ಕ್ಕೆ ದಕ್ಷಿಣ ಚೀನ ಸಮುದ್ರದಲ್ಲಿರುವ ಇಂಡೋ-ಚೀನಿ ಅರ್ಧದ್ವೀಪ ಫ್ರೆಂಚರ ...ದಲ್ಲಿನ ಸಾಮ್ರಾಜ್ಯದ ಬಹುದೊಡ್ಡ... ಹಿಂದುಸ್ಥಾನದಲ್ಲಿರುವ ಮೂರೂವರೆ ... ಸಂಖ್ಯೆಯ ತುಣುಕುಗಳನ್ನು ಬಿಟ್ಟರೆ ಏಶಿಯಾಟಿಕ ಸಾಮ್ರಾಜ್ಯ ಇದೇ ಎನ್ನ... ೨,೮೬,೦೦೦ ಚೌ. ಮೈಲು ವಿಸ್ತೀ... ಇಂದು ಎರಡೂವರೆ ಕೋಟಿ ಪ್ರಜೆ... ನಿವಾಸಸ್ಥಾನವಾದ ಈ ಭೂಭಾಗದಲ್ಲಿ ...ರ ಪಸ್ತಕ್ಷೇಪ ... ರಷ್ಟು ಬೇಗನೆ ...ವಾಗಿತ್ತು. ... ಕೋಚಿನ್-ಚೀನ ... ಲಾವೋಸ ಮತ್ತು ಟೋಂ... ... ಭಾಗಗಳಾಗಿ ವಿಂಗ... ...ವ ಇಂ... ಚೀನದ ಪೂರ್ವ ತೀರದ ...ಯನ್ನಂ ರಾ... ರಾಜನಿಂದ ಫ್ರೆಂಚರು ... ಕೋಚೀನ್-ಚೀನ ಭೂಭಾಗವನ್ನು ...ಯೂ ೦ ಸು ಅಲ್ಲಿ ತಮ್ಮ ...ರಡೂ ... ಸ್ಥಾಪಿಸಿಕೊಂಡರು. ಆ... ...ಮುದ್ದು ತವ... ಅಸ್ತಂಗತವಾಗುವ ... ಎದ್ದು ... ಅವರ ಪ್ರಭು... ...ಗಳ, ... ಕಾಂಬೋ... ...ಹೋಡೆಗೆ ... ತಮ್ಮ... ಹೊಡೆದ... ಅನ್ನಂ... ... ಹೊಟ್ಟೆ... ...ನವೇ... ...ತು. ...ನೇರವಾದ ... ...ಡ ಭೂಭಾಗಗಳ ಮೇಲಿನ ...ನ್ನು ೧೯೪೫ರ ವರೆಗೂ ಯಥಾ...ಗಿಸುತ್ತ ಬಂದರು. ಅನ್ನಂ ಮತ್ತು ...ಗಳಲ್ಲಿ ಇಬ್ಬರು ಅರಸರಿದ್ದರು.

ಈ ಪತ್ರಿಕೆಯನ್ನು ಕರ್ನಾಟಕ ಮುದ್ರಣ ... ಶಿಕ್ಷಣ ಟ್ರಸ್ಟದ ... ಯವರಿಂದ ಮುದ್ರಿತವ...

ಆಕ್ರಮಣ

...ರಲ್ಲಿ ಫ್ರಾನ್ಸಿನ ಪತನವಾದ ನಂತರ ...ಪೋಲಿಯನ್ ಸಾಮ್ರಾಜ್ಯವಾದಿ ರಾಷ್ಟ್ರ ... ಕುಂದಿದಂತೆ ಇಂಡೋಚೀನದ ... ನಾಮುಶೇಷವಾಯಿತು. ೧೯೪೦...

...ಮಾರ್ಜನದಲ್ಲಿ ಜಪಾನಿಗ... ಲ. ಕೊನೆಗೆ ಸಯಾಮಕ್ಕೆ ಕೆಲ ಭೂಭಾಗವನ್ನು ...ನ ...ವಾಗಿ ಬಿಟ್ಟುಕೊಟ್ಟಾಗ ಮತ್ತು ಅದೇ ... ಯಲ್ಲಿ ಜಪಾನಿ ಸೈನ್ಯಗಳ ಪ್ರವೇಶಕ್ಕೆ ಅದು ಅನುಮತಿ ಕೊಟ್ಟಾಗ ಆ ಫ್ರೆಂಚ ಪ್ರತಿಷ್ಠೆಯ ಸರ್ವನಾಶವೂ ಆಯಿತು. ಅಂದಿನ ವರೆಗೂ ನೂರಕ್ಕೆಂಭತ್ತರಷ್ಟು ಇಂಡೋಚೀನಿ ಜನರು ಫ್ರೆಂಚ ಆಳಿಕೆಯಲ್ಲಿ ಸಂತುಷ್ಟರಾಗಿದ್ದಂತೆ ಕಂಡು ಬರುತ್ತಿದ್ದರೆಂದು ...ಜ ವರ್ಷದಿಂದ ಇಂಡೋಚೀನದಲ್ಲಿದ್ದು ಯುದ್ಧ ಕಾಲವನ್ನು ಕೂಡ ಅಲ್ಲೆ ಕಳೆದ ಲೋಸಾ... ಗ್ರೋಬಲೆಂಬ ಮಿಶನರಿ ಮಹಿಳೆ ಬರೆಯುತ್ತಾಳೆ. ಆದರೆ ಒಳಗೊಳಗೆ ಧಾರ್ಮಿಕ ... ಮೊದಲಾದ ಹಲವು ಸೋಗುಗಳನ್ನು ಹಾಕಿಕೊಂಡು ರಾಜಕೀಯ ಜಾಗೃತಿ ತಲೆಯೆತ್ತುತ್ತಲೆ ಇತ್ತು. ಕಮ್ಯುನಿಸ್ಟ್, ರಾಜಪಕ್ಷಪಾತಿ ಮತ್ತು ಕಾಡಿಸ್ಟ ಎಂಬ ರಾಜಕೀಯ ... ಪಕ್ಷಗಳು ರಾಷ್ಟ್ರೀಯತೆಯನ್ನು ... ಎಚ್ಚರಗೊಳಿಸುತ್ತಿದ್ದವು. ಅಲ್ಲಲ್ಲಿ ದಂಗೆಗಳು ಏಳುತ್ತಲೂ ಇದ್ದವು; "ಕಮ್ಯುನಿಸ್ಟ್" ಚಟುವಟಿಕೆಗಳೆಂದು ಹೆಸರಿಟ್ಟು ಅವುಗಳನ್ನು ಫ್ರೆಂಚರು ನಿರ್ದಯವಾಗಿ ಬಗ್ಗುಬಡಿಯುತ್ತಲೂ ಇದ್ದರು.

ಫ್ರೆಂಚರ ಗೆಳೆಯರಾಗಿ ಜಪಾನಿಗಳು ಬಂದಿದ್ದರೂ ಹೆಸರಿಗೆ ಫ್ರೆಂಚರೇ ಆಡಳಿತೆ ನಡೆಸಿದ್ದರೂ ಜಪಾನರ "ಏಶಿಯನರಿಗಾಗಿ ಏಶಿಯಾ" ಎಂಬ ಕೂಗು ಇಂಡೋಚೀನಿ ರಾಜಕೀಯ ಜಾಗೃತಿಯನ್ನು ಉತ್ತೇಜಿತಗೊಳಿಸದಿರಲಿಲ್ಲ. ಮೇಲೆ ಹೇಳಿದ ಮೂರೂ ರಾಜಕೀಯ ಪಕ್ಷಗಳು ಆ ಕಾಲದಲ್ಲಿ ಬೆಳೆದುವಲ್ಲದೆ ಒಂದು ಜಪಾನಿ ಪಕ್ಷಪಾತಿ ಪಕ್ಷವೂ ಚೀನ ಪಕ್ಷಪಾತಿಯಾದ ಯುವಕ ಪಕ್ಷವೂ ಉದಯಿಸಿದವು. ಕೊನೆಗೆ "ವೇಟಮಿನ್ಹ" ಎಂಬ ಸಂಯುಕ್ತ ಪಕ್ಷವೂ ಸ್ಥಾಪಿಸಲ್ಪಟ್ಟಿತು. ಈ ಪಕ್ಷವೇ ಇಂದಿನ ವೇಟನಾಮು ಪ್ರಜಾರಾಜ್ಯ ಸರಕಾರದ ತಂದೆ.

೧೯೪೫ ಮಾರ್ಚ ... ಕ್ಕೆ ಜಪಾನಿಗಳು ಇಂಡೋಚೀನವ... ಯಾಗಿ ಆಕ್ರಮಿಸಿ ಫ್ರೆಂಚರನ್ನೆಲ್ಲ ಸೆರೆಹಿಡಿದು, ಅನ್ನಮ್ ರಾಜ್ಯದ ಅರಸರಾದ ಬಾವ-ಡಾಯಿಯವರ ಕೆಳಗೆ ಟೋಂಕಿನ್ ಅನ್ನಂ, ಕೋ... ಗಳನ್ನೆಲ್ಲ ಒಳಗೊಂಡ ಕೈಗೊಂಬೆ "... ..." ವನ್ನು ಸ್ಥಾಪಿಸಿದಾಗ ಹೆಚ್ಚು ... ಎಲ್ಲ ಇಂಡೋಚೀನಿಯರೂ ಒಂದೇ ಆಡಳಿತೆಯ ಕೆಳಗೆ, ಜಪಾನಿಗಳ ಮೇಲ್ವಿಚಾರಣೆಯಲ್ಲಿಯೆ ಇರಲೊಲ್ಲದೇಕೆ, ಒಂದಾದರು. ಕಾಂಬೋಡಿಯ ಮತ್ತು ಲಾವೋಸ ರಾಜ್ಯ ಫ್ರೆಂಚರಿಂದ ಸ್ವತಂತ್ರ್ಯವಾಗಿದ್ದೇವೆಂದು ಸಾರಿಬಿಟ್ಟವು.

"ಕಾಕಾ" ಹೋ-ಚಿ ಮಿನ್ಹ

೧೯೪೫ ರಲ್ಲಿ ಜಪಾನಿಗಳ ಅಕಸ್ಮಾತ್ ಅಧಃಪಾತವಾದಾಗ, ಇಂಡೋನೇಶಿಯಾದಲ್ಲಿ ಹೇಗೋ ಹಾಗೆಯೆ, ಇಂಡೋಚೀನದಲ್ಲೂ ದೊಡ್ಡ ಗೊಂದಲವೆದ್ದಿತು. ಜಪಾನಿಗಳ ಬೆಂಬಲವಿಲ್ಲದ ಚಕ್ರವರ್ತಿಯ ಕೈಕಾಲು ಆಲುಗದಾಯಿತು; ಯಾವ ಪಕ್ಷವೂ ಅಧಿಕಾರವನ್ನು ಸೆಳೆದುಕೊಳ್ಳುವಷ್ಟು ಪ್ರಬಲವಾಗಿದ್ದಿಲ್ಲ. ಆಗ ಕಮ್ಯುನಿಸ್ಟ್, ಕಾಡಿಸ್ಟ ಮತ್ತು ಯುವಕ ಚಳವಳಿಗಳ ಸಂಯುಕ್ತೀಕರಣದಿಂದ ಹುಟ್ಟಿದ ವೇಟಮಿನ್ಹ ಪಕ್ಷ ಹೋ-ಚಿ-ಮಿನ್ಹರ ಅಧ್ಯಕ್ಷತೆಯಲ್ಲಿ ವೇಟನಾಮು ಪ್ರಜಾರಾಜ್ಯವನ್ನು ಸ್ಥಾಪಿಸಿತು. ಇಂದು ಇಂಡೋಚೀನೀಯರು ತಮ್ಮನ್ನು ವೇಟನಾಮಿಗಳೆಂದು ಕರೆದುಕೊಳ್ಳುತ್ತಾರೆ.

"ಕಾಕಾ" ಎಂದು ವೇಟನಾಮಿಗಳು ಮಮತೆಯಿಂದ ಕರೆಯುವ ಅಧ್ಯಕ್ಷ ಹೋ-ಚಿ ಮಿನ್ಹರು "ಇಪ್ಪತ್ತು ಹೆಸರುಗಳ" ರಹಸ್ಯ ಪುರುಷ. ೫೦ ವಯಸ್ಸಿನ ಹೋ-ಚಿ ಯವರು ಸಾಮ್ಯವಾದಿಗಳು. ಗುಪ್ತ ಚಟುವಟಿಕೆಗಳಿಗಾಗಿ ಅವರು ಇಟ್ಟುಕೊಂಡ ಹಲವು ಸಾಂಕೇತಿಕ ನಾಮಗಳಲ್ಲಿ "ನಾಗುಯೆನ್-ಐ-ಕೋಕ" (ಸ್ವದೇಶಾಭಿಮಾನಿ) ಎಂಬುದು ಬಹಳ ಪ್ರಚಲಿತವಾಗಿದೆ. ಚೀನದಲ್ಲಿ ಕಮ್ಯುನಿಸ್ಟ್ ಚಟುವಟಿಕೆಗಳಿಗಾಗಿ ಹಲವಾರಿ ಸೆರೆಮನೆಯನ್ನು ಕಂಡ ಹೋ-ಚಿ ... ವರ್ಷ ರಶಿಯಾದಲ್ಲಿಯೂ ಕ್ರಾಂತಿಕಾರಿ ಗತ್ತುಗಾರಿಕೆಯನ್ನು ಅಭ್ಯಸಿಸಿದರೆಂದು ಹೇಳುತ್ತಾರೆ. ೧೯೪೫ ರಲ್ಲಿ ಇವರು ಸ್ವದೇಶಕ್ಕೆ ಮರಳಿದ ನಂತರ ಇಂಡೋಚೀನಿಯರಲ್ಲಿ ಬಹುಸಂಖ್ಯಾಕರನ್ನು ಒಟ್ಟುಗೂಡಿಸಲು ಸಮರ್ಥರಾಗಿದ್ದಾರೆ.

ಹಳೆ ಒಡೆಯರ ಪುನರಾಗಮನ

ಸಂಧಿ ಶರ್ತುಗಳಿಗನುಸಾರವಾಗಿ ಇಂಡೋಚೀನದಲ್ಲಿದ್ದ ಜಪಾನಿಗಳ ನಿಶ್ಶಸ್ತ್ರೀಕರಣದ ಹೊಣೆ ಉತ್ತರದಲ್ಲಿ ಚೀನೀಯರ ಮತ್ತು ದಕ್ಷಿಣದಲ್ಲಿ ಬ್ರಿಟಿಶರ ಮೇಲೆ ಬಿತ್ತು. ಮತ್ತು ಹಳೆಯ ಅರಸರಾಗಿದ್ದ ಫ್ರೆಂಚರಾದರೂ ಇಂಡೋಚೀನ... ವಿಷಯದಲ್ಲಿದ್ದ ತಮ್ಮ "ಪವಿತ್ರ ಕರ್ತವ್ಯ"ವ... ಪೂರೈಸಲು ಡಚ್ಚರು ಇಂಡೋನೇಶಿಯ... ಬಂದಂತೆ ಬಂದೇ ಬಂದರು. ದಕ್ಷಿಣದಲ್ಲಿ ... ಸೈನ್ಯಗಳು ಬಂದೊದಗಿದಾಗ ... ಪ್ರಬಲ ... ಪಡೆಗಳೂ ಹಿಂದಿನ ರಾಜಧಾನಿಯಾದ ಸೈಗಾವದ ಸಮೀಪದಲ್ಲಿ ಬಂದಿಳಿದವು. ಆದರೆ ಇಲ್ಲಿ ಇಂಡೋನೇಶಿಯಾದ ನಾಟಕವೇ ಇದ್ದಕಿದ್ದಂತೆ ಪುನರಾವರ್ತಿಸಲ್ಪಡಲಿಲ್ಲ. ಉತ್ತರದಲ್ಲಿ ... ದಿದ್ದ ಚೀನಿಯರು ಸ್ಥಳೀಯ ಪರಿಸ್ಥಿತಿ... ವೆಗೆ ಹೋಗದೆ ಬರಿ ಜಪಾನಿಗಳ ನಿ... ನ್ನಷ್ಟೆ ಮಾಡುವವೆಂದರು. ಇದರಿಂದ ವೇಟನಾಮು ಪ್ರಜಾರಾಜ್ಯ ಉತ್ತರ ಇಂಡೋಚೀನದಲ್ಲಿ ... ವಾಗಿ ಬೇರೂರಿತ್ತು. ಇಂಡೋಚೀನಿ ಪ್ರ... ರಾಜ್ಯ ಜಪಾನದ ದಾನವಾಗಿರದೆ ಸ್ವಯಂಭು... ಗಿತ್ತೆಂದೂ ಆದರ ಮುಖಂಡರನೇಕರು ಜಪಾನದ ವಿರುದ್ಧ ಮಿತ್ರರ ಸಹಾಯದಿಂದ ಕೊ... ಯುದ್ಧ ಮಾಡಿದವರೆಂದೂ ಮರೆಯಕೂಡದು... ಸೈಗಾವದ ಸಮೀಪದಲ್ಲಿ ಫ್ರೆಂಚರು ... ತಮ್ಮ ಹಳೆಯ ರಾಜ್ಯವನ್ನು ವಶಪಡಿಸಿಕೊಳ್ಳ... ಳಸಿದಾಗ ಅವರಿಗೆ ಪ್ರಬಲ ವಿರೋಧ ಪ್ರಾಪ್ತವಾಯಿತು. ಅವರ ಬಲ... ದುರಿಸಲಾರದೆ ರಾ... ಸರಿದು ಸೈಗಾವವನ್ನು ... ರ ವಿರುದ್ಧ ಎಲ್ಲೆಲ್ಲ ... ಪ್ರಜ್ವಲಿಸತೊಡಗಿತು. ... ಮುನ್ನುಗ್ಗಿದಂತೆ ಉತ್ತರದ... ಕರ ಜೀವನ ಅಸಹನೀ... ರಾಜ್ಯದ ರಾಜಧಾನಿಯ...

(೧೩

ಗಾಂಧೀಜಿ, ಜಿನ್ನಾರಿಗೆ ಹೊಸ ವೈಸರಾಯರ ಕರೆ

ಹೊಸ ವಾಯಿಸರಾಯರು ಬಂದಿದ್ದಾರೆ, ಹಳಬರು ಹೊರಟುಹೋಗಿದ್ದಾರೆ. ಲಾರ್ಡ ವೇವೆಲ್ಲರು ಮೂರೂವರೆ ವರ್ಷದ ತಮ್ಮ ಅಧಿಕಾರವನ್ನು ಬಿಟ್ಟುಕೊಡುವಾಗ ಭಾರವಾದ ಹೃದಯದೊಡನೆ ಬೀಳ್ಕೊಡುವ ಸಂದೇಶವನ್ನು ಬೀರಿದರು. ಹಿಂದುಸ್ಥಾನಕ್ಕೆ ಉತ್ತರೋತ್ತರವಾಗಲೆಂದು ಅವರು ಕೋರಿ "ನಾ ಮಾಡಿದ ತಪ್ಪುತಡಿಗಳು ನನಗೆ ಗೊತ್ತಿವೆ. ಆದರೆ ಹಿಂದೀಯರ ಹಿತಕ್ಕಾಗಿ ಹಾಗು ಹಿಂದುಸ್ಥಾನಕ್ಕೆ 'ಸ್ವರಾಜ್ಯ' ದೊರೆಯಬೇಕೆಂಬ' ಉದ್ದೇಶದಿಂದಲೆ ನಾನು ಶ್ರಮಿಸಿರುವೆನೆಂಬದನ್ನು ನೀವು ಗಮನಿಸುವಿರೆಂದು ಆಶಿಸುವೆ" ಎಂದು ಒಂದು ಬಗೆಯಲ್ಲಿ ಅಪರಾಧಸ್ವೀಕಾರ ಮಾಡಿದರೆಂದೇ ಹೇಳಬೇಕು. ಅಸ್ತಂಗತ ವಾಯಿಸರಾಯರ ಸದಾಶಯವನ್ನು ಯಾರೂ ಅಲ್ಲಗಳೆಯಲಾರರು. ಆದರೆ ಈ ದುರ್ದೈವಿ ದೇಶಕ್ಕೆ ಬಂದ ಅನೇಕ ಬ್ರಿಟಿಶ ಪ್ರತಿನಿಧಿಗಳಂತೆ ಅವರೂ ಜನತೆಯ ನಿರೀಕ್ಷೆಯನ್ನು ಪೂರೈಸಲಿಲ್ಲ. ಮಾತ್ರವಲ್ಲ ಈ ಬಾರಿ ಬ್ರಿಟಿಶ ಸರಕಾರದ ವಿಶ್ವಾಸವನ್ನು ಕೂಡ ಕಳೆದುಕೊಂಡರೆಂಬಲ್ಲಿ ಸಂದೇಹವಿಲ್ಲ. ಬ್ರಿಟಿಶ ಸರಕಾರ ಈ ಸ್ಥಿತಿಯಲ್ಲಿ ಅವರನ್ನು ಹಿಂದೆ ಕರೆಸಿಕೊಳ್ಳಲು ಯಾವ ಮತಭೇದ ಕಾರಣವಾಗಿದ್ದರೂ ಮತಭೇದವಿದ್ದುದನ್ನು ಯಾರೂ ನಿರಾಕರಿಸಿಲ್ಲ. ಹಿಂದಿ ಜನತೆಯ ದೃಷ್ಟಿಯಿಂದ ಅವರು ಪ್ರತಿಯೊಂದು ಬಿಕ್ಕಟ್ಟಿನ ಪ್ರಸಂಗದಲ್ಲಿ ಪ್ರಮಾದ ಮಾಡಿ ಹಿಂದೀ ರಾಜಕಾರಣವನ್ನು ಹದಗೆಡಿಸಿಟ್ಟರು. ೧೯೪೨ ರಲ್ಲಿ ಕ್ರಿಪ್ಸ ಕೊಡುಗೆಯ ಕಾಲಕ್ಕೆ ಸೇನಾಪತಿ ವೇವೆಲ್ಲರು ವಹಿಸಿದ ಅಡ್ಡಗಾಲಿನ ಧೋರಣೆಯನ್ನು ಮರೆಯಲು ಹಿಂದೀಯರು ಸಿದ್ಧರಿದ್ದರು. ಮುಂದೆ ಸಿಮಲಾ ಪರಿಷತ್ತಿನಲ್ಲಿ ಅವರು ಲೀಗಿನ ಹಟಮಾರಿತನಕ್ಕೆ ಬೆದರಿ, ಗಟ್ಟಿಗ ಧೋರಣೆಯನ್ನನುಸರಿಸಲು ತಪ್ಪಿದ್ದಕ್ಕೂ ದೇಶ ಅಷ್ಟು ರೋಸಿಕೊಳ್ಳಲಿಲ್ಲ. ಆದರೆ ಮಂತ್ರಿತ್ರಯ ಶಿಷ್ಟಮಂಡಲ ಮತ್ತು ಅನಂತರದ ಒಂಭತ್ತು ತಿಂಗಳಲ್ಲಿ ಅವರು ಮಾಡಿದ——ದುರುದ್ದೇಶ ರಹಿತವಾದುದೇ ಇರಲೊಲ್ಲದೇಕೆ—ಪ್ರಮಾದಗಳು ಈ ದೇಶದ ಮುಂದಿನ ವೈಸರಾಯನಿಗೆ ಮಾತ್ರವೇ ಏಕೆ, ಇದರ ಭವಿತವ್ಯದ ಕರ್ಣಧಾರರಿಗಾಗಿ ಕೂಡ ಶರಶಯ್ಯೆಯನ್ನು ನಿರ್ಮಿಸಿಟ್ಟವೆಯೆಂಬುದು ಈಗಾಗಲೇ ನಿಚ್ಚಳವಾಗಿಬಿಟ್ಟಿದೆ. ಲೀಗ್ ಸದಸ್ಯರನ್ನು ನಡುಗಾಲ ಸರಕಾರದಲ್ಲಿ ಸೇರಿಸಿಕೊಳ್ಳುವಾಗ ಘಟನಾಸಮಿತಿಯಲ್ಲಿ ಸಹಕಾರದ ಲಿಖಿತ ವಾಗ್ದಾನವನ್ನು ದೊರಕಿಸಿಕೊಳ್ಳದಿದ್ದುದು ಮತ್ತು ಮುಂದೆ ಈ ತಪ್ಪನ್ನು ಸರಿಪಡಿಸಲು ಡಿಸೆಂಬರ ೬ ರ ಹೇಳಿಕೆ ಹೊರಡಿಸುವ ಇನ್ನೊಂದು ತಪ್ಪು ಮಾಡಲು ಬ್ರಿಟಿಶ ಸರಕಾರವನ್ನು ಪ್ರೇರೇಪಿಸಿದ್ದು, ಇವೆರಡು ಹಿಂದುಸ್ಥಾನದ ಭವಿತವ್ಯವನ್ನೂ ಹಿಂದೀ-ಬ್ರಿಟಿಶ ಸಂಬಂಧದ ಭವಿತವ್ಯವನ್ನೂ ಸೇರಿಯೇ ವಿಕೃತಗೊಳಿಸದಿರವು. ಹಿಂದುಸ್ಥಾನದ ಪಾಲಿಗೆ, ನಿವಾರಣೀಯವಾಗಿದ್ದ ವಿಚ್ಛೇದವನ್ನು ಅನಿವಾರ್ಯವಾಗಿ ಮಾಡಲು-ಸದ್ಯಕ್ಕಂತೂ ಹಾಗೆಯೇ ತೋರುತ್ತದೆ—ಅವರ ಕ್ರಮಗಳು ಕಾರಣವಾದವು. "ಯಶಸ್ವಿ ಹಿನ್ನಡೆ" ಗಳ ಸೇನಾಪತಿ ವೇವೆಲ್ಲರು ತಮ್ಮ ವರ್ಣದ [illegible]ಗಳ ದುಷ್ಪ್ರೇರಣೆಯನ್ನು ನಂಬಿ ಮುಸ್ಲಿಂಲೀಗಿನ ಕಾಲ್ಪನಿಕ ದಾಳಿಯ ಮುಂದೆ ಬಾರಿಬಾರಿಗೂ "ಯಶಸ್ವಿ ಹಿನ್ನಡೆ" ಯನ್ನು ಸಾಧಿಸಿ ಆ ದಾರಿಯನ್ನು ನಿಜವಾಗಿಯೆ ಮಾಡಿಟ್ಟಿದ್ದಾರೆ. ಬ್ರಿಟಿಶ ಸರಕಾರವೂ ಈಗ ವೇವೆಲ್ಲರೂ ಇದರ ಬಗ್ಗೆ ಪರಿತಪಿಸುತ್ತಿರಬಹುದೆಂದು ತೋರುತ್ತದೆ.

ಹೊಸ ವಾಯಿಸರಾಯರ ಕಾರ್ಯ

—ಇದೀಗ ಇನ್ನು ಹದಿನಾಲ್ಕು ತಿಂಗಳೊಳಗೆ ಬ್ರಿಟಿಶ ಅಧಿಕಾರವನ್ನು ಮುಕ್ತಾಯಗೊಳಿಸುವ ಕರ್ತವ್ಯವನ್ನು ಹೊತ್ತು ಬಂದ ಹೊಸ ವಾಯಿಸರಾಯ ಲಾರ್ಡ ಲುಯಿ ಮೌಂಟಬ್ಯಾಟನ್ನರಿಗಾಗಿ ಕಾದಿರುವ ಮುಳ್ಳಿನ ಹಾಸಿಗೆ. ಹಿಂದುಸ್ಥಾನದ ಪ್ರಥಮ ಬ್ರಿಟಿಶ ಸಾಮ್ರಾಜ್ಞಿಯಾಗಿದ್ದ ವಿಕ್ಟೋರಿಯಾ ರಾಣಿಯ ಮರಿಮಗನಾದ ಮೌಂಟಬ್ಯಾಟನ್ನರಿಗೆ ಆ ಸಾಮ್ರಾಜ್ಯಕ್ಕೆ ಉತ್ತರ ಪೂಜೆ ಮಾಡುವ ಪಾಳಿ ಬಂದುದು ವಿಧಿ ಸಂಕೇತವೋ ಕಾಕತಾಳೀಯವೊ ಹೇಳಲಾಗಲ್ಲ. ಆದರೆ ಎರಡು ಶತಮಾನಗಳಿಂದ ಶೇಖರಿಸಲ್ಪಟ್ಟ ಬ್ರಿಟಿಶ ಪಾತಕಗಳ ಫಲವಾಗಿ ಅವರ ಕಾರ್ಯ ಅತ್ಯಂತ ಕಠಿನವಾಗಿದೆಯೆಂಬಲ್ಲಿ ಸಂದೇಹವಿಲ್ಲ. ಅದನ್ನರಿತೇಯೋ ಏನೋ ಹೊಸ ದಿಲ್ಲಿಯಲ್ಲಿ ಆದ ಅವರ ಪ್ರತಿಜ್ಞಾವಿಧಿ (ತಾ. ೨೪) ಯ ಕಾಲಕ್ಕೆ ಹಿಂದಿನ ಪರಂಪರೆಯನ್ನು ಮುರಿದು ಮೌಂಟಬ್ಯಾಟನ್ನರು ಒಂದು ಚಿಕ್ಕ ಭಾಷಣ ಮಾಡಿದರು. "ಮುಂದಿನ ಕಾರ್ಯ ಅತ್ಯವಸರದ್ದಿದ್ದು ಹಿಂದುಸ್ಥಾನದಲ್ಲಿಯ ಪ್ರತಿಯೊಬ್ಬ ರಾಜಕೀಯ ಧುರೀಣನೂ ಇದರಂತೆ ಭಾವಿಸುವನೆಂದು ನಂಬಿನೇನೆ. ನಾನು ಅವರೊಡನೆ ನಿಕಟ ಸಂಬಂಧ ಬೆಳೆಸುವೆ. ಮುಂದಿನ ಕೆಲ ತಿಂಗಳ್ಲಲಿಯೆ ಬಿಕ್ಕಟ್ಟು ಬಗೆಹರಿಸುವ ಉಪಾಯವನ್ನು ನಾವು ಕಂಡುಹಿಡಿಯಬೇಕಾಗಿದೆ. ಅದು ಸಾಧಿಸುವವರೆಗೆ ವೈಮನಸ್ಸನ್ನು ಬೆಳೆಸಿ ನಿರಪರಾಧಿಗಳ ಪ್ರಾಣಾಹುತಿಗೆ ಕಾರಣವಾಗುವಂಥ ಮಾತುಕೃತಿಗಳಿಂದ ನಾವೆಲ್ಲರೂ ದೂರವಿರುವದು ಅವಶ್ಯವಿದೆ. ...... ನನ್ನ ಕಾರ್ಯ ಹಗುರಾಗಿಲ್ಲ. ಆ ಬಗ್ಗೆ ನನಗೆ ಭ್ರಮೆಯೂ ಇಲ್ಲ. ಆದಷ್ಟು ಜನರ ಆದಷ್ಟು ಸಹಕಾರ ನನಗೆ ಬೇಕಾಗಿದೆ. ಅದನ್ನು ನೀಡಬೇಕಾಗಿ ಹಿಂದುಸ್ಥಾನವನ್ನು ಪ್ರಾರ್ಥಿಸುತ್ತೇನೆ" ಎಂದರವರು.

ಬಿಕ್ಕಟ್ಟು ಬಗೆಹರಿಸುವ ಪ್ರಯತ್ನ—
ಸಂಸ್ಥಾನಿಕರ ದೇಶದ್ರೋಹಿ ಸಂಚುಗಳು

ವಾಯಿಸರಾಯರ ಹೇಳಿಕೆ ಸತ್ಯ. ಅವರ ಕಾರ್ಯ ಹಗುರಾಗಿಲ್ಲ; ಆಯಕಟ್ಟಿನ ಪಂಜಾಬದಲ್ಲಿ ನಡೆದ ಸಂಹಾರಕ್ರಿಯೆಯನ್ನು ಅವರು ದುರ್ಲಕ್ಷಿಸಲಾರರು ಅದೇ ಸಮಯ ಅವರು ಅತಿ ಜಟಿಲವಾದ ರಾಜಕೀಯ ಸಮಸ್ಯೆಯನ್ನು ಬಿಡಿಸಬೇಕಾಗಿದೆ. ವರ್ಷಗಟ್ಟಲೆಯ ಬ್ರಿಟಿಶ್ ಉತ್ತೇಜನದಿಂದ ಅಟ್ಟಕ್ಕೇರಿದ ಹಟಮಾರಿ ಅಲ್ಪಸಂಖ್ಯಾಕ ಗುಂಪೊಂದನ್ನು ಅವರು ಭೂಮಿಗೆ ತರಬೇಕಾಗಿದೆ. ಮತ್ತು ಬಹುಸಂಖ್ಯಾಕರ ಆಗ್ರಹಕ್ಕೊಳಗಾಗದೆ ಅದರ ಸಹಕಾರವನ್ನು ಗಳಿಸಬೇಕಾಗಿದೆ. ಸಾಧ್ಯವಿದ್ದರೆ ಹಿಂದುಸ್ಥಾನದ ಐಕ್ಯವನ್ನುಳಿಸಿಕೊಳ್ಳಲು ಅವರು ಎಲ್ಲ ಪ್ರಯತ್ನ ಮಾಡಬೇಕಾಗಿದೆ. ಏನೇ ಇದ್ದರೂ ಈ ಬರುವ ಹದಿನಾಲ್ಕು ತಿಂಗಳುಗಳಲ್ಲಿ ಅಖಿಲ ಹಿಂದುಸ್ಥಾನದ ಆಡಳಿತೆಯ ಹೊಣೆ ಹೊರಲು ಸಮರ್ಥವೂ ಉತ್ಸುಕವೂ ಆಗಿರುವ ಕೇಂದ್ರಾಧಿಕಾರವನ್ನೂ ಅವರು ರೂಪಿಸಿಕೊಳ್ಳಬೇಕಾಗಿದೆ. ಇದರಲ್ಲಿ ಅವರು ತಮ್ಮ ಕೈಕೆಳಗಿನವರಿಂದ ಅಡ್ಡಿಯನ್ನಲ್ಲದೆ ಮತ್ತಾವುದನ್ನೂ ನಿರೀಕ್ಷಿಸಲಾರರು. ಇಂಥವರಿಂದಲೇ ವೇವೆಲ್ಲರ ಹೆಸರು ಕೆಟ್ಟಿತು. ಈ ಅಸಾಧ್ಯ ಕಾರ್ಯವನ್ನು ಹೊಸ ವಾಯಿಸರಾಯರು ಸಾಧಿಸಿ ತೋರಬಲ್ಲರೆ? ಬ್ರಹ್ಮದೇಶದ ಅಸಾಧ್ಯ ಪರಿಸ್ಥಿತಿಯಲ್ಲಿ ವಿಜಯ ಸಂಪಾದಿಸಿದವರೆಂಬ ಕಾರಣದಿಂದಲೂ ಯುದ್ಧದಲ್ಲಿ ಕ್ರಾಂತಿಕಾರಕ ಗತ್ತುಗಾರಿಕೆಯನ್ನು ಪ್ರಯೋಗಿಸಿ ಗೆದ್ದಂತೆ ಹಿಂದೀ ಪರಿಸ್ಥಿತಿಯಲ್ಲಿ ಇಂದು ಅತ್ಯವಶ್ಯವಾದ ಕ್ರಾಂತಿಕಾರಿ ಉಪಾಯಗಳನ್ನು ಕೈಕೊಂಡು ಹಳೆಯ ಪದ್ಧತಿಗಳನ್ನು ಕಿತ್ತೊಗೆದಾರೆಂಬ ಆಶೆಯಿಂದಲೂ ಅವರಿಗೆ ಯಶಸ್ಸು ಸಿಕ್ಕೀತೆಂದು ನಂಬಬೇಕು ತಮ್ಮ ಮುಂದಿರುವ ಸಮಯ ಅತ್ಯಲ್ಪ, ಕಾರ್ಯ ಅಗಾಧವೆಂಬದನ್ನು ಮನಗಂಡು ಅವರು ಈಗಾಗಲೇ ಕಾರ್ಯ ಪ್ರವೃತ್ತರಾಗಿದ್ದಾರೆ. ಭವಿತವ್ಯವನ್ನು ಕುರಿತು ಅವರು ಕೇಂದ್ರ ಮಂತ್ರಿಮಂಡಲದ ಕಾಂಗ್ರೆಸ ಮತ್ತು ಲೀಗ ಸದಸ್ಯರೊಡನೆ ಮಾತುಕತೆ ನಡೆಸಿರುವರಲ್ಲದೆ ಗಾಂಧೀಜಿಗೂ ಜಿನ್ನಾರಿಗೂ ಚರ್ಚೆಗಾಗಿ ಅವಸರದ ಕರೆ ಕಳಿಸಿದ್ದಾರೆ. ಜಿನ್ನಾರು ಇಷ್ಟರಲ್ಲೆ ದಿಲ್ಲಿಯನ್ನು ತಲುಪುವರು. ಗಾಂಧೀಜಿಯೂ ತಾ. ೩೦ ರೊಳಗೆ ದಿಲ್ಲಿಗೆ ಬರುವರೆಂದು ಅಪೇಕ್ಷಿಸಲಾಗಿದೆ. ಅಧಿಕಾರವನ್ನು ವರ್ಗಾಯಿಸಲು ಪೂರ್ವಭಾವಿಯಾಗಿ ಕೇಂದ್ರದಲ್ಲಿ ಉಭಯಪಕ್ಷಗಳ ಸಂಯುಕ್ತ ಹೊಣೆಗಾರಿಕೆಯ ಮಂತ್ರಿಮಂಡಲವನ್ನು ಸ್ಥಾಪಿಸಲು ಅವರು ಯತ್ನಿಸಬಹುದು. ಅದು ಸಾಧಿಸಿದರೆ ಅರ್ಧ ಕೆಲಸ ಕೈಗೂಡಿದಂತೆ. ಆದರೆ ಮುಂದಿನ ತಿಂಗಳುಗಳಲ್ಲಿಡಬೇಕಾದ ಹೆಜ್ಜೆಯ ಬಗ್ಗೆ ಬ್ರಿಟಿಶ ಸರಕಾರದ ಒಳ ಅಂತರ್ಯವೇನೆಂಬದನ್ನು ಮಾತ್ರ ಅವರಿನ್ನೂ ಹೊರಗೆಡಹಿಲ್ಲ.

ನರೇಂದ್ರರ ಕುತಂತ್ರ

ಇತ್ತ ಪ್ರತಿಗಾಮಿ ಶಕ್ತಿಗಳ ಕುತಂತ್ರ ಯಥಾಪ್ರಕಾರ ಸಾಗಿದೆ. ಪಂಜಾಬ-ಗಡಿನಾಡುಗಳಲ್ಲಿ ಲೀಗಿನವರ ಹಿಂಸಾಚಾರ ಇನ್ನೂ ಸಾಗಿರುವದಲ್ಲದೆ ಸಿಂಧದಲ್ಲಿ ಬೇರೊಂದು ಗತ್ತು ಆರಂಭವಾಗಿದೆ. ಬ್ರಿಟಿಶರು ೧೯೪೮ ರ ಜೂನಿನಲ್ಲಿ ತೊಲಗಿದೊಡನೆ ಸಿಂಧ ಪ್ರಾಂತವನ್ನು ಸಾರ್ವಭೌಮ ಸ್ವತಂತ್ರ ರಾಷ್ಟ್ರವೆಂದು ಸಾರಲು ಯೋಜನೆಯೊಂದು ಜಿನ್ನಾರ ಅನುಮತಿಯಿಂದ ಸಿದ್ಧವಾಗುತಿರುವದಲ್ಲದೆ ಅದಕ್ಕಾಗಿ ಒಂದು ರಾಜ್ಯಘಟನೆಯನ್ನು ಸಿದ್ಧಗೊಳಿಸಲು ಸಿಂಧ ಶಾಸನ ಸಭೆಯ ಲೀಗ್ ಪಕ್ಷ ಸಮಿತಿಯೊಂದನ್ನು ನೇಮಿಸಿದೆ ಅಸ್ಸಾಮದ ಮೇಲೆ ಬಂಗಾಲದ ಮುಸ್ಲಿಮರ ಅಕ್ಷರಶಃ ದಾಳಿಯೊಂದನ್ನು ಯೋಜಿಸಲಾಗಿದ್ದು ಅಸ್ಸಾಮ ಸರಕಾರ ಅವರ ವಿರುದ್ಧ ಉಗ್ರೋಪಾಯ ಕೈಕೊಳ್ಳಬೇಕಾಗಿ ಬಂದಿದೆ. ಇವೆಲ್ಲ ಸಾಲದ್ದಕ್ಕೆ ನಮ್ಮ ದೇಶಭಕ್ತ ನರೇಂದ್ರರು ಕೆಲವರು ಪ್ರಾರಂಭಿಸಿರುವ ಹೊಸ ಸಂಚೊಂದು ಈಗ ಬೆಳಕಿಗೆ ಬರತೊಡಗಿದೆ. ಸಂಸ್ಥಾನಗಳಲ್ಲಿ ಬ್ರಿಟಿಶ ಸೈನ್ಯವನ್ನು ೧೯೪೮ ರ ನಂತರವೂ ಉಳಿಸಿಕೊಳ್ಳಲು ಬ್ರಿಟಿಶ ಸರಕಾರದೊಡನೆ ಸಂಧಾನ ನಡೆದಿದೆಯಲ್ಲದೆ ಬ್ರಿಟಿಶ್ ಮತ್ತು ಅಮೇರಿಕನ್ ಸರಕಾರಗಳೊಡನೆ ಒಪ್ಪಂದ ಮಾಡಿಕೊಳ್ಳಲು ಉಚ್ಚಮಟ್ಟದ ಸಂಧಾನ ಪ್ರಾರಂಭವಾಗಿದೆಯೆಂದು ಗೊತ್ತಾಗಿದೆ. ರಶಿಯಾಕ್ಕೆ ಹತ್ತಿಕೊಂಡ ಕಾಶ್ಮೀರ ಸಂಸ್ಥಾನ ತನ್ನ ರಕ್ಷಣೆಗೆ ಬ್ರಿಟಿಶ ಸೈನ್ಯವನ್ನಿಳಿಸಿಕೊಳ್ಳಲು ಈಗಾಗಲೆ ನಿರ್ಧರಿಸಿದೆಯಂತೆ ನೇಪಾಳಕ್ಕೆ ಅಮೇರಿಕೆ ಧನ ಸಹಾಯ ನೀಡಲೊಪ್ಪಿದೆ. ಕಾಮನವೆಲ್ತದ ಸಂರಕ್ಷಣೆಗಾಗಿ ಬ್ರಿಟನ್, ಅಮೇರಿಕೆ, ಆಸ್ಟ್ರೇಲಿಯಾಗಳು ಹಿಂದುಸ್ಥಾನದ ಸಮುದ್ರತೀರದ ಸಂಸ್ಥಾನಗಳೊಡನೆ ಒಪ್ಪಂದ ಮಾಡಿಕೊಳ್ಳಬಹುದಂತೆ. ಸಮುದ್ರತೀರದ ಸಂಸ್ಥಾನಗಳಲ್ಲಿ ಮಹತ್ವದ ಏಕಮಾತ್ರ ಸಂಸ್ಥಾನವಾದ ತಿರುವಾಂಕೂರಿನ ದಿವಾನರು ತಿರುವಾಂಕೂರು ಸ್ವತಂತ್ರವೆಂದು ಸಾರಿದ್ದಕ್ಕೂ ಇದಕ್ಕೂ ಚನ್ನಾಗಿ ತಳೆ ಬೀಳುತ್ತದೆ. ಅಮೇರಿಕನ್ ಉಪವಿದೇಶ ಮಂತ್ರಿ ಡೀನ ಅಚಿಸನ್ನರು, ಸ್ವಾತಂತ್ರ್ಯೋನ್ಮುಖ ಹಿಂದುಸ್ಥಾನದಲ್ಲಿ ಅನೇಕ ಅಂತರಿಕ ತೊಡಕುಗಳಿರುವದರಿಂದ ಅದರ ಸಮೀಪದಲ್ಲಿ ಪ್ರಜಾತಂತ್ರ ಸರಕಾರಗಳು ಕುಸಿದು ಬಿದ್ದರೆ ಅದರ ಮೇಲೂ ದುಷ್ಪರಿಣಾಮವಾದೀತೆಂದು ಹಿಂದುಸ್ಥಾನದ ಕಡೆ ಡಾಲರ ರಾಜತಂತ್ರದ ಕಟಾಕ್ಷವನ್ನು ತಿರುಗಿಸಿದ್ದಾರೆ. ಹಿಂದೀ ಸಂಸ್ಥಾನಿಕರನೇಕರಲ್ಲಿ ಬಹಳ ಉದಾತ್ತ ಪ್ರಜಾತಂತ್ರಿಗಳು ಅಚಿಸನ್ನರಿಗೆ ಸಿಕ್ಕಾರು! ತಮ್ಮ ನಿಕಟ ವೈರಿಗಳಿಗೆ ಸಂಸ್ಥಾನಗಳಲ್ಲಿ ಆಶ್ರಯ ಸಿಕ್ಕಿದರೆ ಮಾಸ್ಕೋದ ಭಾಗ್ಯವಿಧಾತರ ದೃಷ್ಟಿಯೂ ಇತ್ತ ಹೊರಳದಿರುವದೆ? ಅಂತೂ ಸಂಸ್ಥಾನಗಳು ಹಿಂದೀ ಸ್ವಾತಂತ್ರ್ಯಕಾಂಕ್ಷೆಯ ಬಗಲ ಮುಳ್ಳುಗಳಾಗಿಯೆ ಉಳಿಯಲು ಯತ್ನಿಸುವದು ನಿಶ್ಚಿತವೆಂದಾಯಿತು.

ಕಲಕತ್ತೆಯಲ್ಲಿ ಪುನಃ ಜಾತೀಯ ಗಲಭೆ ಆರಂಭವಾಗಿದ್ದು ತಾ. ೨೬ ಕ್ಕೆ ೧೧ ಜನರಿಗೆ ಸಾವು ೧೧೧ ಜನರಿಗೆ ಗಾಯವಾಗಿದೆ.

ಕೇಂದ್ರ ಶಾಸನಸಭೆ

ಗಲಭೆಗಳಲ್ಲಿ ಸೈನ್ಯದ ಗೋಳಿಬಾರು

ಮಹಮದ ಶೌಮುಸ್ತರ ಪ್ರಶ್ನೆಗಳಿಗೆ ... ದೀಯುಕ್ತ ಸಂರಕ್ಷಣಾ ಕಾರ್ಯದರ್ಶಿಗಳು ... ದಂಗೆಯಲ್ಲಿ ನವೆಂಬರ ೧೯೪೬ ರಲ್ಲಿ ಸೈನ್ಯದ ಗೋಳಿಬಾರಿನಿಂದ ೩೧೪ ಜನರು ಸತ್ತರು, ... ಜನರು ಗಾಯಗೊಂಡರೆಂದು ತಿಳಿಸಿದರು. ನೌಖಾಲಿ ತಿಪ್ಪೇರಾಗಳಲ್ಲಿ ಸೈನಿಕರ ಗುಂಡಿನಿಂದ ೨೦ ಜನರು ಸತ್ತರು, ೧೫ ಜನ ಗಾಯಗೊಂಡರು ಎಂದೂ ತಿಳಿಸಲಾಯಿತು (ತಾ. ೨೨)

ತಾ. ೨೦ ಕ್ಕೆ ಮುಂದಿಸಲ್ಪಟ್ಟ [illegible] ವೇದವಾದ ದಿಲ್ಲಿಗಳ ಬಾಡಿಗೆ ನಿಯಂತ್ರಣ ಮಸೂದೆ ತಾ. ೨೧ ಕ್ಕೆ ಸ್ವೀಕೃತವಾಯಿತು.

ಮುಂಗಡ ಪತ್ರಿಕೆಯ ಬಿಕ್ಕಟ್ಟು

ಮುಂಗಡ ಪತ್ರಿಕೆಯನ್ನು ಮುಂದಿಟ್ಟು ಹಣಕಾಸಿನ ಮಂತ್ರಿ ಲಿಯಾಕತ ಅಲ್ಲಿಖಾನರು ಸೂಚಿಸಿದ ಭಾರವಾದ ಕರಗಳಿಗೆ ಕಾಂಗ್ರೆಸ ... ಪ್ರಬಲ ವಿರೋಧವನ್ನೊಡ್ಡಿದ್ದರಿಂದ ಅಂಥದಲ್ಲಿ ಮಂತ್ರಿಮಂಡಲದಲ್ಲಿ ಬಿಕ್ಕಟ್ಟುಂಟಾಗುವದೆಂದು ಬಹಳ ಭಯಪಡಲಾಗಿತ್ತು ... ವಿರೋಧಕರಿಗೆ ಶಾಸನ ಸಭೆಯಲ್ಲಿ ಬಹುಮತವಿತ್ತು. ಕಳೆದವಾರ ಹಣಕಾಸಿನ ಮಂತ್ರಿಗಳು ಕೊಡಮಾಡಿದ ಸವಲತ್ತುಗಳು ಸಾಕಷ್ಟು ಸಂತೋಷವನ್ನುಂಟು ಮಾಡಲಿಲ್ಲ. ಆದರೆ ... ನ್ಯಾಯದಿಂದ ಈ ಬಿಕ್ಕಟ್ಟು ಈಗ ಬಗೆಹರಿದಿದೆ.

ತಾ. ೨೫ ಕ್ಕೆ ಹಣಕಾಸಿನ ಮಂತ್ರಿಗಳು ... ಕರಗಳಲ್ಲಿ ಕೆಲ ತಿದ್ದುಪಡಿಗಳನ್ನು ಮಾಡಲು ಒಪ್ಪಿದರು.

ವ್ಯಾಪಾರಿ ಲಾಭದ ಕರದಲ್ಲಿ ಕಳೆದವಾರ ... ಸಿಲೆಕ್ಟ ಸಮಿತಿ ಸೂಚಿಸಿದಂತೆ ಸಾರ್ವಜನಿಕ ಮತ್ತು ಖಾಸಗಿ ಕಂಪನಿಗಳಿಗೆ ನೂರಕ್ಕೆ ... ಮತ್ತು ೬ ರ ಕನಿಷ್ಠ ಲಾಭಕ್ಕೆ ಅವಕಾಶ ಕೊಡುವ ಬದಲು ಎಲ್ಲ ಕಂಪನಿಗಳಿಗೂ ಬಂಡವಲದ ಮೇಲೆ ನೂರಕ್ಕೆ ೬ ರಂತೆ ಲಾಭ ಬಿಟ್ಟು ಉಳಿದುದರ ಮೇಲೆಯೆ ಕರ ಹೇರಲಾಗುವದು ಕರದ ಪ್ರಮಾಣವನ್ನು ೧೦೦ ಕ್ಕೆ ೨೫ ರಿಂದ ರೂ ೧೬-೧೦-೮ ಗಿಳಿಸಲಾಗುವದು ಮೂಲಧನ ಲಾಭದ ಕರದಿಂದ ವೈಯಕ್ತಿಕ ಆಸ್ತಿಗಳನ್ನು ಹೊರತುಪಡಿಸಲಾಗುವದು.

ಇದರಿಂದ ಬಿಕ್ಕಟ್ಟು ಬಗೆಹರಿದು ಮಸೂದೆ ಸರಾಗವಾಗಿ ಪಾಸಾಗುವದೆಂದು ಗೊತ್ತಾಗಿದೆ.

ಕರ್ಮವೀರ ಹರಿಜನ ಪತ್ರಿಕೆ

ಈಸ್ಟ್ ಇಂಡೀಜ ಸಂಯುಕ್ತ ರಾಜ್ಯ ಮತ್ತು ಹಾಲಂಡ್ ಇವುಗಳ ಸಮಾನ ಸಾರ್ವಭೌಮತ್ವದ ಒಕ್ಕೂಟ ಸ್ಥಾಪಿಸುವಲ್ಲಿ ಇಂಡೋನೇಶಿಯಾ ಸಹ ಕರಿಸುವದು.

ಕೌತುಕದ ಸುದ್ದಿಗಳು

ಸರ್ ಸ್ಟಾಫೋರ್ಡ ಕ್ರಿಪ್ಸರು ಮೊನ್ನೆ ಗಾಂಧಿಯವರನ್ನು ಭೆಟ್ಟಿಯಾದಾಗ ಅವರ "ಕಣ್ಣುಚ್ಚಿ ಸ್ವೆಂಸಿರಿ" ತತ್ವಜ್ಞಾನ ಕ್ರಿಪ್ಸರಿಗೂ ಸೋಂಕಿದ್ದೇ ಬ್ರಿಟಿಶ ವಿದೇಶ ವ್ಯಾಪಾರದಲ್ಲಿ ಒದಗಿರುವ ತೊಡಕಿಗೆ ಕಾರಣವೆಂದು. ಪಾರ್ಲಮೆಂಟಿನಲ್ಲಿ ಒಬ್ಬ ಸದಸ್ಯರು ಆರೋಪಿಸಿದರು!

* * *

ಹಿಂದುಸ್ತಾನವನ್ನು ನಾಯಿ ಪಾಲು ಮಾಡುತ್ತಿರುವ ಈಗಿನ ಸರಕಾರದ ದುಷ್ಕರ್ಮವನ್ನು ನೋಡಿ ತಮ್ಮ ನೆತ್ತರು ಕುದಿಯುತ್ತದೆಂದು ಬ್ರಿಟಿಶ ಇವ್ಯಾಂಜಲಿಕಲ್ ಧರ್ಮ ಮಠಗಳ ಅಧ್ಯಕ್ಷರಾದ ರೆವರೆಂಡ ರಸೆಲ್ಲರು ಹೇಳಿದರು!

* * *

ಇಂಡೋಚೀನದ ಅಧ್ಯಕ್ಷ ಹೋ-ಚಿಮಿನ್ಹರು ಇದ್ದಾರೋ ಸತ್ತಿದ್ದಾರೋ ಗೊತ್ತಿಲ್ಲವೆಂದು ಫ್ರೆಂಚರು ಸುದ್ದಿ ಹಬ್ಬಿಸಿದ್ದಾರೆ. ಅವರು ಜೀವಂತ ಇದ್ದಾರೆಂದು ವೀಟನಾಮರು ಸಾರುತಿದ್ದಾರೆ!

ಹೊಸ ಹೊಸ ಕಾರ್ಯಕ್ರಮ

ಅಲಹಾಬಾದಿನಲ್ಲಿ ಕೂಡಿದ್ದ ಪ್ರಾಂ. ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳ ಪರಿಷತ್ತಿನಲ್ಲಿ ವಿಧಾಯಕ ಕಾರ್ಯದ ಸಂಬಂಧದಲ್ಲಿ ಸರ್ವಾನುಮತದಿಂದ ಸ್ವೀಕೃತವಾದ ಗೊತ್ತುವಳಿಗೆ ಕಾಂಗ್ರೆಸ್ ಕಾರ್ಯಸಮಿತಿಯು ತನ್ನ ಒಪ್ಪಿಗೆಯನ್ನು ಕೊಟ್ಟಿದೆ. ಹೀಗೆ ಮಾಡುವಾಗ ಕಾಂಗ್ರೆಸ ಕಾರ್ಯಸಮಿತಿಯು ಬದಲಾಗುತಿರುವ ತನ್ನ ಹೊಣೆಗಳನ್ನು ಅರಿತುಕೊಂಡಿದೆಂದು ಉಲ್ಲೇಖಿಸಲು ಸಂತೋಷಿಸುತ್ತೇವೆ. ಕೆಲ ತಿಂಗಳಗಳ ಹಿಂದೆ ಚರ್ಚಿಲ್ಲ ಸರಕಾರ ಪದಭ್ರಷ್ಟವಾಗಿ ಕೂಲಿಕಾರ ಸರಕಾರ ಬ್ರಿಟನ್ನದಲ್ಲಿ ಅಧಿಕಾರಾರೂಢವಾದಾಗ ಶಾಂತಿಕಾಲದಲ್ಲಿಯ ಚಟುವಟಿಕೆಗಳ ಅವಶ್ಯಕತೆಗಳ ಬಗ್ಗೆ ಬ್ರಿಟಿಶ್ ಜನರು ಎಷ್ಟೊಂ ದಕ್ಷರಾಗಿರುವರೆಂಬುದನ್ನು ನೋಡಿ ಇದೀ ಶ್ರೀ ಆಶ್ಚರ್ಯಚಕಿತವಾಯಿತು ಕಳೆದ ಸಂಚಿಕೆಯಲ್ಲಿ ಪ್ರಸಿದ್ಧಪಡಿಸಿದ ಕಾಂಗ್ರೆಸ ಕಾರ್ಯಸಮಿತಿಯವರು ಪಾಸುಮಾಡಿದ ವಿಧಾಯಕ ಕಾರ್ಯದ ಸಂಬಂಧದ ಗೊತ್ತುವಳಿ ಮತ್ತು ಅಲಹಾಬಾದ ಪರಿಷತ್ತಿನಲ್ಲಿ ಸೂಚಿತವಾದ ಶಿಫಾರಸುಗಳನ್ನು ಕಾರ್ಯಕಾರಿಮಾಡಲು ಪ್ರಾಂತಿಕ ಕಾಂಗ್ರೆಸ ಕಮೀ ...

ಬೀಬಿ ಅಮತುಸ್ ಸಲಾಮ

ಬೀಬಿ ಅಮತುಸ್ ಸಲಾಮ ಇವಳು ಅನೇಕ ದಳ... ವರ್ಷಗಳಿಂದ ಹಿಂದು ಮುಸಲ್ಮಾನರ ಐಕ್ಯಕ್ಕಾಗಿ ಪ್ರಯತ್ನಿಸುತಿರುವಳು. ಪಂಜಾಬದಲ್ಲಿ ಪತಿಯಾಳಾ ಸಂಸ್ಥಾನದಲ್ಲಿ ಪ್ರಸಿದ್ಧ ಮುಸಲ್ಮಾನ ಕುಟುಂಬಕ್ಕೆ ಅವಳು ಸೇರಿದವಳು. ಅವಳು ಜನ್ಮರ್ಜನಿಯ ಪ್ರಾಪ್ತವಾದ ಸುಖ ಸೌಕರ್ಯಗಳನ್ನೆಲ್ಲ ತ್ಯಜಿಸಿ ... ರಲ್ಲಿ ಗಾಂಧೀಜಿಯ ಆಶ್ರಮವನ್ನು ... ಅಂದಿನಿಂದ ಅವಳು ಗಾಂಧೀಜಿ ... ಧ್ಯೇಯಗಳಿಗನುಸಾರವಾಗಿ ತನ್ನ ... ನಡೆಸಲು ಪ್ರಯತ್ನಿಸುತಿರುವಳು. ... ಅವಳ ಮೇಲೆ ಬ್ರಹ್ಮಚರ್ಯ ...

ಇಂಡೋನೇಶಿಯಾದ ಒಪ್ಪಂದ

... ಡಿದೊಡನೆ ಆ ಸಮಸ್ಯೆಯನ್ನು ರಾಜಕೀಯರೀತಿಯಿಂದ ಬಿಡಿಸಬೇಕೆಂದು ಗೊತ್ತಾಯಿತು.

ಇತ್ತ ಕಮ್ಯುನಿಸ್ಟರು ಪ್ರತಿದಾಳಿಯ ಸಿದ್ಧತೆ ನಡೆಸಿದ್ದಾರೆ.

ಹಲವು ತಿಂಗಳುಗಳಿಂದ ನೆನೆಗುದಿಗೆ ಬಿದ್ದಿರುವ ಡಚ್-ಇಂಡೊನೇಶಿಯನ್ ಒಪ್ಪಂದಕ್ಕೆ ಇದೀಗ ಉಭಯ ಪಕ್ಷಗಳೂ ಸಹಿ ಹಾಕಿದ್ದರಿಂದ ಎರಡು ವರ್ಷಗಳಿಂದ ನಡೆದಿದ್ದ ರಕ್ತಪಾತ ಕೊನೆಗೊಂಡಂತಾಗಿದೆ. ಈ ಒಪ್ಪಂದದನ್ವಯ

* ಜಾವಾ, ಮದುರಾ, ಸುಮಾತ್ರಾ ದ್ವೀಪಗಳ ಮೇಲೆ ಆಡಳಿತ ನಡೆಸುವ ಅಧಿಕಾರ ಇಂಡೊನೇಶಿಯನ್ ಪ್ರಜಾರಾಜ್ಯಕ್ಕಿದೆಯೆಂದು ಡಚ್ಚರು ಒಪ್ಪಿದ್ದಾರೆ.

* ೧೯೪೯ ಜನೇವರಿಯೊಳಗಾಗಿ ಈ ಎಲ್ಲ ಪ್ರದೇಶಗಳನ್ನು ಡಚ್ಚರು ಬಿಟ್ಟುಕೊಡುವರು.

* ಡಚ್ ಈಸ್ಟ ಇಂಡೀಜ ದ್ವೀಪಗಳ ಒಂದು ಸಂಯುಕ್ತ ರಾಜ್ಯವನ್ನು ಸ್ಥಾಪಿಸಲಾಗುವದು. ಅದರಲ್ಲಿ ಇಂಡೊನೇಶಿಯನ್ ಪ್ರಜಾರಾಜ್ಯ ಅಂತರ್ಗತವಾಗುವದು.

* ಇಂಡೊನೇಶಿಯನ್ ಪ್ರಜಾ ರಾಜ್ಯ ಡಚ್ ಸಾಮ್ರಾಜ್ಯದಲ್ಲಿ ಉಳಿಯುವದು. ಮತ್ತು



ಜ್ಯೋತಿಷಿ:-ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಮಾರ್ಚ ೨೪ ರಿಂದ ೩೦ ರ ವರೆಗೆ

ಮೇಷ

ನಿಮ್ಮದು ಪುತ್ರ ಹೆಂಡತಿಯದು ಪ್ರಕೃತಿ ಉತ್ತಮ ಆದರೆ ಕಣ್ಣುಗಳು ಮುರಿಗಳು ಮತ್ತು ಮನೆಯಲ್ಲಿಯ ಅತಿವೃದ್ಧರ ಪ್ರಕೃತಿ ಬಹಳ ಕೆಡುವ ಅಂಜಿಕೆ. ನಿಮ್ಮ ನಿಮ್ಮಲ್ಲಿ ಅತ್ಯಂತ ಕಲಹ ಮತ್ತು ಪ್ರತಿಯೊಬ್ಬರಿಗೆ ಎರಡನೆಯವರ ಬಗ್ಗೆ ಪರಾಕಾಷ್ಠೆಯ ಅವಿಶ್ವಾಸ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಸಾಧಾರಣವೆ. ಆದರೆ ಪ್ರತಿಷ್ಠೆ ಉತ್ತಮ. ಸ್ತ್ರೀಯಲ್ಲಿ ಹೆಚ್ಚು ಆದರೆ ಬುದ್ಧಿಯು ಒಲವು ಅಪಕ್ವತ್ವದ ಕಡೆಗೆ. ದುಃಸಾಧ್ಯ ಹಾಗಿನಲ್ಲಿ ಸಾಹಸ ಮಾಡುವದರಿಂದ ಎಲ್ಲೆಡೆ ನಗೆಗೇಡು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ತೊಂದರೆ. ಆದರೆ ಕೊನೆಗೆ ಯಶಸ್ಸು. ಇಲ್ಲವೆ ಅನುಕೂಲತೆ ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಅಶ್ವಿನಿಯು ೪ ನೆ ಮತ್ತು ಭರಣಿಯ ಮೊದಲಿನ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೫ ೨೬, ೨೯, ೩೦ ಅನುಕೂಲ.

ವೃಷಭ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ ಮಕ್ಕಳಲ್ಲಿ ಲೌಕಿಕ ಬೆಳವು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಬಹಳ ಉತ್ತಮ. ಮತ್ತು ಲಾಭವೂ ಬಹಳ ಉತ್ತಮ. ಮಿತ್ರ ಸುಖ ವಿಶೇಷ ಸಂಸ್ಮರಣೀಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉತ್ತಮ ಅನುಕೂಲತೆ ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಕೃತ್ತಿಕೆಯ ೪ ನೆ ಮತ್ತು ರೋಹಿಣಿಯ ಮೊದಲನೆ ೩ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೨೬, ೨೮, ೨೯, ೩೦, ಅನುಕೂಲ.

ಮಿಥುನ

ಪ್ರಕೃತಿ ಅನುಕೂಲ. ಆದರೆ ಸ್ತ್ರೀ ಸುಖದಲ್ಲಿ ಬಹಳ ವಿರಸವಾಗುವಂತಹ ಕೆಲ ಅನಪೇಕ್ಷಿತ ಸಂಗತಿಗಳು ಸಂಭವಿಸುವವು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ವಿಪರೀತ. ಮನಸ್ಸು ಯಾವಾಗಲೂ ಚಿಂತನೆಯಲ್ಲಿ ಮಗ್ನ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಬಹಳ ಕಡಿಮೆ ಆದರೆ ಲಾಭ ಆ ಮಾನದಿಂದ ಬಹಳ ಹೆಚ್ಚು. ಮಿತ್ರ ಸುಖ ಉತ್ತಮ. ಶತ್ರುಗಳಲ್ಲಿ ಒಬ್ಬರು ಮಿತ್ರರಾಗುವ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ತೊಂದರೆ ಬಹಳ. ಆದರೆ ಕೊನೆಗೆ ಬಹಳ ಅನುಕೂಲತೆ. ವಸ್ತುರೂಪ ಸಂಗ್ರಹ ಬಹಳ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಮೃಗಾದ ೪ ನೆ ಮತ್ತು ಅರಿದ್ರಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೪, ೨೫, ೨೯ ಅನುಕೂಲ.

ಕರ್ಕ

ಪ್ರಕೃತಿ ಅನುಕೂಲ. ಸ್ತ್ರೀ ಸುಖ ಉತ್ತಮ ಆದರೆ ಮಕ್ಕಳುಮರಿಗಳಲ್ಲಿ ಸ್ವಲ್ಪ ಕ್ಲೇಶ ಇಲ್ಲವೆ ಮನಸ್ತಾಪದ ಸಂಗತಿಗಳು ಅವರಿಂದ ಸಂಭವಿಸುವ ಯೋಗ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಜೋರಾದದ್ದು ಪ್ರತ್ಯಕ್ಷಲಾಭ ತುಂಬ ಆದರೆ ಪ್ರತಿಷ್ಠೆ ಕಡಿಮೆಯಾಗಿ ಹೋಗುವದು. ಮಿತ್ರ ಸುಖ ಉತ್ತಮ. ಕೀರ್ತಿ ಬೆಳೆವಂಥ ಧರ್ಮಕೃತ್ಯಗಳು. ಬಂಧುವರ್ಗದವರಿಂದ ಮನಬಂದಂತೆ ದೋಷಾರೋಪಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನಸ್ಥಿತಿ. ಪ್ರವಾಸ ಉತ್ತಮ ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ತೊಂದರೆಯದು. ಪುಷ್ಯದ ೪ ನೆ ಮತ್ತು ಆಶ್ಲೇಷಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೪, ೨೭, ೨೮ ಅನುಕೂಲ.

ಸಿಂಹ

ಪ್ರಕೃತಿ ಸಾಧಾರಣವೆ. ಹೆಂಡತಿಯದು ಕೆಡುವದು ಅಲ್ಲದೆ ಪ್ರತಿಯೊಬ್ಬರ ದುರಭಿಮಾನದಿಂದ ಒಬ್ಬರೊಬ್ಬರ ಮೇಲೆ ಹೊಟ್ಟೆ ಕಿಚ್ಚು ತೋರಿಸುವದಾಗಿ ಆಯಾ ಅವರು ಕಷ್ಟಪಟ್ಟರೂ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಕ್ಷಣಕ್ಷಣಕ್ಕೆ ಉತ್ಸಾಹ ನಿರುತ್ಸಾಹ ಅಂದೋಲನದಲ್ಲಿ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ ಆದರೆ ಪ್ರತಿಷ್ಠೆ ಕಡಿಮೆ. ಸ್ತ್ರೀವರ್ಗದಲ್ಲಿ ಅನಾದರ. ಏನೇನೋ ಕೆಲಸ ಪ್ರಾರಂಭಿಸುವ ಅವಸರ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಹಿಮ್ಮೆಟ್ಟುವದು ಮತ್ತು ಸಹಾಯಕರ್ತರು ಹಾನಿಯಲ್ಲಿ ತರುವ ಪ್ರಯತ್ನ ಮಾಡುವರು. ಚಿಂತೆಯಿಂದ ಇಲ್ಲವೆ ಕಳವಿನಿಂದ ಬಹಳ ಹಾನಿಯಾಗುವ ಸಂಭವ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಅನುಕೂಲ. ಮಘಾದ ೪ ನೆ ಪೂರ್ವಾಫಲ್ಗುನಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೫, ೨೬, ೨೯ ಅನುಕೂಲ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ-ಕರ್ನಾಟಕ ಮುದ್ರಣಾಲಯದಲ್ಲಿ ರಾಷ್ಟ್ರೀಯ ಸಾಹಿತ್ಯ ಪ್ರಕಾಶನ ಟ್ರಸ್ಟಿನ ಪರವಾಗಿ ಹ. ರಾ. ಪುರೋಹಿತರವರಿಂದ ಮುದ್ರಿಸಿ ಪ್ರಕಟಿಸಲಾಯಿತು

ಕನ್ಯಾ

ಪ್ರಕೃತಿ ಸಾಧಾರಣವೆ ಪಿತ್ತದ ಉಪದ್ರವ ಹೆಚ್ಚು. ಸ್ತ್ರೀಸುಖ ಅನುಕೂಲ. ಪ್ರಾಪಂಚಿಕ ಎಲ್ಲ ವಿಷಯಗಳಲ್ಲಿ ಬಹಳ ಸಮಾಧಾನ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಬಹಳ ಉತ್ತಮ. ಆದರೆ ಉದ್ಯೋಗಸ್ಥರಿಗಿಂತ ನೌಕರಿ ಮಾಡುವವರಿಗೆ ಪ್ರತಿಷ್ಠೆ ಹೆಚ್ಚು ಅನುಕೂಲ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಶತ್ರುಗಳ ಬಗ್ಗೆ ಬಹಳ ಸೇಡು ತೀರಿಸಿಕೊಳ್ಳುವ ಕಲ್ಪನೆ ಮಿತ್ರ ಸುಖ ಉತ್ತಮ. ರೋಖ ಸಂಗ್ರಹದಲ್ಲಿ ಹೆಚ್ಚಳ ಪ್ರವಾಸ ಸುಖದ್ದು ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ತೊಂದರೆಯದು. ಉತ್ತರಾದ ೪ ನೆ ಮತ್ತು ಹಸ್ತಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೬, ೨೮, ೨೯, ೩೦ ಅನುಕೂಲ.

ತುಲಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಇದ್ದರೂ ಮಾನಸಿಕ ಸ್ವಾಸ್ಥ್ಯ ಕೆಡುವಂತಹ ಕೆಲ ವಿಚಿತ್ರ ವಾರ್ತೆಗಳು, ಕಿವಿಗೆ ಬೀಳುವ ಸಂಭವ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಬಹಳ ಉತ್ತಮ. ಆದರೆ ಲಾಭ ಬಹಳ ಕಡಿಮೆ. ಮಿತ್ರತ್ವದಲ್ಲ ದೊಡ್ಡ ವಿರೋಧ. ವಾದದಲ್ಲಿ ಬಹಳ ಹಿಮ್ಮೆಡುವದು. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಚಿತ್ರಾದ ೪ ನೆ ಮತ್ತು ಸ್ವಾತಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೫, ೨೯, ೩೦, ಅನುಕೂಲ.

ವೃಶ್ಚಿಕ

ಪ್ರಕೃತಿ ಸಾಧಾರಣವೆ. ಸ್ತ್ರೀ ಸುಖ ಅನುಕೂಲ. ಆದರೆ ಅವಾಂತರ ಪ್ರಾಪಂಚಿಕ ದಗದಗಿ ಹೆಚ್ಚುತ್ತಲೆ ಹೋಗುವದು. ಪ್ರತಿಯೊಂದು ಕೆಲಸದಲ್ಲಿ ಮನಸ್ಸು ಮೀರಿ ನಡೆಸುವ ಪ್ರಸಂಗ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭಸಾಮಾನ್ಯ. ಮಿತ್ರತ್ವದಲ್ಲಿ ವಿರೋಧ. ವಿಶಿಷ್ಟ ಧರ್ಮ ಕೃತ್ಯದಲ್ಲಿ ಬಹಳ ವೆಚ್ಚ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳಿಗೆ ವಿಜಯ ದೊರೆತರೂ ಅವರ ಜೋರು ಹೆಚ್ಚೀ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಅನುರಾಧಾದ ೪ ನೆ ಮತ್ತು ಜೇಷ್ಠಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೫, ೨೬, ೨೯, ೩೦ ಅನುಕೂಲ.

ಧನು

ಪ್ರಕೃತಿ ಸಾಧಾರಣವೆ. ಸ್ತ್ರೀ ಸುಖ ಉತ್ತಮ ಮಕ್ಕಳಲ್ಲಿ ಹೆಚ್ಚಳ. ಅವರಲ್ಲಿ ಉನ್ನತಿಯ ಕೆಲ ಸಂಗತಿಗಳು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಕಷ್ಟದಿಂದಲೆ. ಆದರೆ ಅವೆಲ್ಲ ಅಂದಾಜಿನಷ್ಟೇ ಆಗುವ ಯೋಗ. ಸ್ಥಾವರದಲ್ಲಿ ಹೆಚ್ಚಳ. ಪ್ರಿಯ ಜನರ ಭೆಟ್ಟಿ ಸಹವಾಸದ ಯೋಗ. ಪ್ರವಾಸ ತೊಂದರೆಯದು ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಭೆಟ್ಟಿ ಮತ್ತು ಪತ್ರವ್ಯವಹಾರ ಮನಸ್ಸಿನಂತೆ. ಮೂಲಾದ ೪ ನೆ ಮತ್ತು ಪೂರ್ವಾಷಾಢದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೫, ೨೬, ೨೯, ೩೦ ಅನುಕೂಲ.

ಮಕರ

ಪ್ರಕೃತಿ ಉತ್ತಮ. ಆದರೆ ಪ್ರಾಪಂಚಿಕ ದಗದಗಿ ಕೆಟ್ಟ. ಉದ್ಯೋಗದಲ್ಲಿ ಪ್ರಗತಿ ಕಡಿಮೆಯೆ. ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆಸ್ತಿಯಲ್ಲಿ ಹೆಚ್ಚಳ ಬುದ್ಧಿಯಲ್ಲಿ ಹೊಸ ಕಲ್ಪನೆ ಪ್ರಶಂಸನೀಯವಾಗುವಂತೆ ಉತ್ಪನ್ನವಾಗುವ ಯೋಗ. ಮಿತ್ರಸುಖ ಅನುಕೂಲ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಉತ್ತರಾಷಾಢದ ೪ ನೆ ಮತ್ತು ಶ್ರವಣಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೪, ೨೬, ೨೮ ಅನುಕೂಲ.

ಕುಂಭ

ಪ್ರಕೃತಿಗೆ ಬಹಳ ಕ್ಲೇಶ. ಹೆಂಡತಿಗೂಡ ಸುಖಸುಖ ಒಂದಾಗುವಿಕೆ. ಆದರೆ ಕುಟುಂಬದಲ್ಲಿಯ ಇತರರು ಹಠ ಮೇಲಿಂದ ಮೇಲೆ ತಕರಾರಿನ ಪ್ರಸಂಗ. ಉದ್ಯೋಗದಲ್ಲಿ ಪ್ರಗತಿ ಬಹಳ ಕಡಿಮೆ. ಲಾಭ ಸಾಧಾರಣವೆ ಆದರೆ ಪ್ರತಿಷ್ಠೆ ಬಹಳ ಉತ್ತಮ. ಖಾಸಗಿಕ್ಕಿಂತ ಸರಕಾರಿ ಕೆಲಸ ಹೆಚ್ಚು ಸುಲಭ ಇಲ್ಲವೆ ಯುಕ್ತ. ಮಿತ್ರತ್ವದಲ್ಲಿ ವಿರೋಧ. ಸ್ಥಾವರದಲ್ಲಿ ಕೆಲ ವಿಚಾರಣಾ ಬೇಕು ಪ್ರಸಂಗ ಉತ್ಪನ್ನ ಆಗುವ ಅಂಜಿಕೆ. ವಾದದಲ್ಲಿ ಉಭಯ ಪಕ್ಷಗಳಲ್ಲಿ ಸಮಾನತೆ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಧನಿಷ್ಠಾದ ೪ ನೆ ಮತ್ತು ಶತತಾರಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೪, ೨೫, ೨೬, ೨೯ ಅನುಕೂಲ.

ಮೀನ

ಪ್ರಕೃತಿ ಉತ್ತಮ. ಆದರೆ ಹೆಂಡತಿ ಮತ್ತು ಪ್ರಾಪಂಚಿಕ ಸುಖದಲ್ಲಿ ಬಹಳ ವಿರಸ. ಪ್ರತಿಯೊಂದು ಕ್ಷುಲ್ಲಕ ಮಾತಿಗಾಗಿ ತಿಕ್ಕಾಟವುಂಟಾಗುವ ಪ್ರಸಂಗ. ಹೊಟ್ಟೆ ಮಾಡಾಡುವ ಲೋಕಾಲೋಕ. ಉದ್ಯೋಗದಲ್ಲಿ ಪ್ರಗತಿ ಕಡಿಮೆ. ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ವೆಚ್ಚ ಅಂದಾಜಿನ ಇಮ್ಮಡಿ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು ಮಿತ್ರ ಸುಖ ಉತ್ತಮ. ಪ್ರವಾಸ ಮತ್ತು ಪತ್ರವ್ಯವಹಾರ ಅತ್ಯಂತ ತೊಂದರೆಯದು. ಆದರೆ ಭೆಟ್ಟಿಯ ಕೆಲಸ ಉತ್ತಮ ಉತ್ತರಾಭಾದ್ರಪದದ ೪ ನೆ ಮತ್ತು ರೇವತಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೪, ೨೫, ೨೬, ೨೭ ಅನುಕೂಲ.

ಖಾನನ ಹೃದಯ

(೧೫ನೇ ಪುಟದಿಂದ)

ತನ್ನನ್ನು ಏಕಾಗ್ರತೆಯಿಂದ ಚಿಂತಿಸಿ, ಹೇಳಿದ— "ಸ್ವಾಮಿ! ಇದು ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವ ಸಮಯವಲ್ಲ. ಪಾಪ! ಅನಾಥನ ಅವಸ್ಥೆ ಏನಾಯಿತೋ? ಡ್ರೈವರ್, ಕಾರನ್ನು ಬೇಗನೆ ಓಡಿಸು." ಮೂವರಲ್ಲೂ ಹಾರಿ ಹೋಗಿದ್ದ ಪ್ರಾಣವಾಯು ಪುನಃ ಇನ್ನೊಮ್ಮೆ ಬಂದು ಸೇರಿಕೊಂಡಿತು. ಖಾನನು ರೋಗಿಯ ಸುವ್ಯವಸ್ಥೆಗೋಸುಗ ಎಲ್ಲಾ ವಿಧಗಳಲ್ಲೂ ಪ್ರಯತ್ನ ಪಡುತ್ತಿದ್ದ; ತನ್ನ ಮಗನಂತೆ ತಿಳಿದು ಉಪಚರಿಸುತ್ತಿದ್ದ.

ಕಾರು ಡಾ. ರಘುನಾಥರಾಯರ ಮನೆತನ ಬಂದು ನಿಂತಿತು. ಮೊದಲು ಖಾನನೇ ಇಳಿದ. ನಂತರ ಉಳಿದ ಮೂವರು ಇಳಿದರು. ಡಾಕ್ಟರರು ಸಿಗರೇಟನ್ನು ಸೇದುತ್ತಾ ಜಗುಲಿಯಲ್ಲಿ ಶತಪಥ ತಿರುಗಾಡುತಿದ್ದರು. ಮೂವರಲ್ಲೊಬ್ಬ ರಾಯರ ಸನಿಯಕ್ಕೆ ಬಂದ, ಮತ್ತೆ ಬಹು ಪಿಸು ಮಾತಿನಲ್ಲಿ—"ನಿಮ್ಮ ಮಗನಿಗೆ ಸೈಕಲ್ ಮೋಟರದಿಂದ ಬಿದ್ದು ತುಂಬಾ ಗಾಯವಾಗಿದೆ. ಭಯಕ್ಕೆ ಎಡೆಯಿಲ್ಲ. ಆದರೆ ಈ ಸಾಹೇಬರಿಲ್ಲದಿದ್ದರೆ, ಪಾಪ! ಆತನ ಅವಸ್ಥೆ ಏನಾಗುತ್ತಿತ್ತೊ". ಎಂದ ಮತ್ತೆ ರೋಗಿಗಾಗಿ ಹಾಸಿಗೆ ವ್ಯವಸ್ಥೆಯಲ್ಲಿ ತೊಡಗಿದ.

ರಾಯರ ಕಣ್ಣಿಗೆ ಒಮ್ಮೆಲೆ ಕತ್ತಲು ಬಂದಿತು. ಆ ಕುರುಡು ಪರದೆಯನ್ನು ಛೇದಿಸಿಕೊಂಡು ಬಂದ ಪ್ರಭೆಗೆ ಖಾನನ ನಿಷ್ಕಳಂಕಿತ ಹೃದಯದ ಅರಿವಾಯಿತು. "ನಾನು ಕಡುಪಾಪಿ" ಎನ್ನುತ್ತಾ ಖಾನನನ್ನು ತಬ್ಬಿ ಕೊಂಡರು.

ಚಂದಾದಾರರಲ್ಲಿ ವಿನಂತಿ

ಯಾವದೇ ಪತ್ರವ್ಯವಹಾರ ಮಾಡುವಾಗ ನಿಮ್ಮ ಚಂದಾ ನಂಬರನ್ನು ಅಂದರೆ ನಾವು ನಿಮ್ಮ ವಿಳಾಸದ ಪ್ರಾರಂಭಕ್ಕೆ ಸೇರಿಸಿದ ನಂಬರನ್ನು ಬರೆದರೆ ಮಾತ್ರ ನಿಮ್ಮ ಪತ್ರಕ್ಕೆ ಲಕ್ಷಗೊಡಲಾಗುವದು. ಅವಧಿ ಮುಗಿಯುವ ಮುಂಚೆಯೇ ೧೫ ದಿನ ಪೂರ್ವದಲ್ಲಿ ವ್ಹಿ. ಪಿ. ಮಾಡಲಾಗುವದು. ವ್ಹಿ. ಪಿ ಬೇಡಾದವರು ೧೫ ದಿನ ಮೊದಲೇ ನಮಗೆ ತಿಳಿಸಬೇಕು. ವ್ಹಿ. ಪಿ. ತಿರಸ್ಕರಿಸಿ ಹಿಂದುಗಡೆ M. O. ಮಾಡಿದರೆ ವ್ಹಿ ಪಿ. ಖರ್ಚ ಮುರಿಯಲಾಗುವದು.

ವ್ಯವಸ್ಥಾಪಕ.

ಸರ್ವಜಿತ್ ಸಂವತ್ಸರದ ಫಲಾದೇಶ

(ಲೇ- ಗೋವಿಂದ ಅನಂತಭಟ್ಟ ಜೋಶಿ ಕುಂದರಗಿ)

೧೯೪೭ ನೇ ಇಸ್ವಿಯ ಅಂದರೆ ಚಿತ್ರಭಾನು ನಾಮಸಂವತ್ಸರದಲ್ಲಿ ಶನಿಯು ರೋಹಿಣೀ ಶಕಟಭೇದ ಮಾಡುವದೆಂದೂ ಇದರ ಫಲವು ಜಗತ್ತಿಗೆ ಅನಿಷ್ಟದಾಯಕವಾಗಿ ಪರಿಣಮಿಸುವದೆಂದೂ ಈ ಕಾಲವು ಸರ್ವಜಿತ್ ನಾ. ಸಂವತ್ಸರದ ವರೆಗೆ ಜಗ್ಗುವದೆಂದೂ ಭವಿಷ್ಯವು ಬರೆಯಲ್ಪಟ್ಟಿದ್ದಿತು. ವಾಚಕರ ಲಕ್ಷ್ಯದಲ್ಲಿ ಇದು ಇದ್ದರೂ ಇರಬಹುದು.

ಈ ಸರ್ವಜಿತ್ ಸಂವತ್ಸರದಲ್ಲಿ ರಾಜನು ರವಿಯು. ಈತನೇ ಮಂತ್ರಿಯು. ಮುಂಗಾರಿಗೆ ಅಧಿಪತಿಯು ಬುಧನು ಹಿಂಗಾರಿಗೆ ಅಧಿಪತಿಯು ಮಂಗಳನು ಆಗಿರುವರು. ಮತ್ತು ನಮ್ಮ ದೇಶಕ್ಕೆ (ಕರ್ನಾಟಕಕ್ಕೆ) ಮುಖ್ಯವಾದ ಆರಿದ್ರಾ ನಕ್ಷತ್ರದಲ್ಲಿ ರವಿಯು ಇದೇ ಆಷಾಢ ಚತುರ್ಥಿ ರವಿವಾರ ದಿನ್ನ ಮುಂಜಾನೆ ೯ ಘಟಿಕಾ ೫೬ ಪಳಾವಲ್ಲಿ ಪ್ರವೇಶಿಸುವನು. ಕಾರಣ ಈ ವರ್ಷ ಬೆಳೆಗಳು ಸಂಪೂರ್ಣವಾಗಿ ಬರದಿದ್ದರೂ ೧೦ ಆಣೆ ಬರುವವು ಮುಂಗಾರೀ ಮಳೆಗಳಾದ ರೋಹಿಣಿ ಅರಿದ್ರ ಮತ್ತು ಮುಲಾ ಚಿಕ್ಕೆ ಪುಷ್ಯ ಮಳೆಯೂ ಹಿಂಗಾರೀ ಮಳೆಗಳಾದ ಮಘಾ, ಹಸ್ತಾ ಚನ್ನಾಗಿ ವರ್ಷಿಸುವವು ಉತ್ತರೆಯು ಸಾಧಾರಣವಾಗಿ ಆಗುವದು ಅನುರಾಧಾ ಮಾತ್ರ ನೀವು ಬೇಡವೆಂದರೂ ಜುಲುಮೆಯಿಂದ ಬೇಸರಿಕೆ ಬರುವಷ್ಟು ಆಗುವದು.

ವ್ಯಾಪಾರೀ ದೃಷ್ಟಿಯಿಂದ ವಿಚಾರ ಮಾಡಿದರೆ ಸರ್ವಸಾಧಾರಣವಾಗಿ ಯಾವತ್ತೂ ಧಾನ್ಯಗಳೂ ರಜತ ಸುವರ್ಣಾದಿಗಳೂ ತೇಜಿಯಲ್ಲಿಯೇ ಉಳಿಯುವವು. ಆದರೆ ಬೆಲ್ಲ ಒಳ್ಳೆಣ್ಣೆಗಳ ಧಾರಣೆಯ ಏರಿಳಿತಗಳು ಮಾತ್ರ ಬಹಳ ಸಾರೆ ನಡೆಯುವವು. ಮೇ ಜೂನ್. ತಿಂಗಳಲ್ಲಿ ಎರೆಳೆ ಮತ್ತು ಹತ್ತಿಯ ಧಾರಣೆಯು ಚನ್ನಾಗಿ ಬರುವವು.

ಹಿಂದುಸ್ತಾನದ ಬಗ್ಗೆ ೧೯೪೭ ನೇ ಇಸ್ವಿಯಲ್ಲಿ ವಿಚಾರಮಾಡಿ ಇದರ ಪ್ರಗತಿಯ ಕಾಲವು ೧೯೪೮ ನೇ ಇಸ್ವಿಗೆ ಲಭಿಸುವದೆಂದು ಬರೆಯಲ್ಪಟ್ಟಿದ್ದಿತು ಅದರಂತೆಯೇ ಪ್ರಾಪ್ತವಾಗುವದು, ಆದರೆ ಹಿಂದುಸ್ತಾನದ ರಾಶಿಯು ಮಕರವಿದ್ದು ಇದರ ಶತ್ರುಸ್ಥಾನವಾದ ಕರ್ಕರಾಶಿಯಲ್ಲಿ ಶನಿಯ ಭ್ರಮಣೆಯು ನಡಿದಿರುವದು, ಶನಿಯು ಮ್ಲೇಂಛನಿದ್ದುದರಿಂದ ಈ ಗುಣಪ್ರಾಧಾನ್ಯ ಮನುಷ್ಯನಿಂದಲೇ ಪ್ರಗತಿಗೆ ನಾನಾತರಹದ ವಿಘ್ನಗಳುದ್ಭವಿಸುವವು. ಇಷ್ಟೇ ಅಲ್ಲ. ಒಕ್ಕಟ್ಟಿನಿಂದಿರುವ ಕಾಂಗ್ರೆಸದಲ್ಲಿಯೂ ಕೆಲವು ವೇಳೆ ಮತಭೇದಗಳಾಗುವವು. ೧೯೪೭ ನೇ ಇಸ್ವಿಯ ಆಕ್ಟೋಬರ ತಿಂಗಳಲ್ಲಿ ಈ ಶನಿಯ ಸತ್ವವು ಕಡಿಮೆಯಾಗುವದರಿಂದ ಮುಂದೆ ಮಾತ್ರ ನಿಶ್ಚಯವಾಗಿ ಪ್ರಗತಿಯ ಕಾಲವು ಪ್ರಾಪ್ತವಾಗುವದು (ಅಂದರೆ ಸಾಮಂತ ಸ್ವರಾಜ್ಯ,) ಅಲ್ಲಿಯವರೆಗೆ ಮಾತ್ರ, ಜಾತೀಯ. ಗಲಭೆ, ಕೊಲೆ ಸುಲಿಗೆ, ಬೇನೆ ಇವುಗಳನ್ನು ಜನರು ಸಹಿಸಲೇಬೇಕಾಗುವದು. ೧೯೪೮ ನೇ ಇಸ್ವಿಯಲ್ಲಿ ಮಾತ್ರ ನಮ್ಮ ಹಿಂದುಸ್ತಾನವು ಜಗತ್ತಿನ ಉಚ್ಚ ರಾಷ್ಟ್ರಗಳಲ್ಲಿ ಮೆರೆದಾಡುವದು.

ಪಂಜಾಬ, ವಾಯವ್ಯ ಸರಹದ್ದ ಪ್ರಾಂತ, ಬಂಗಾಲ, ಸಿಂಧ, ಸಂಯುಕ್ತ ಪ್ರಾಂತ, ಹೈದ್ರಾಬಾದ ಮೊದಲಾದ ಪ್ರಾಂತಗಳಿಗೆ ಅನಿಷ್ಟದಾಯಕ ಯೋಗಗಳು ಇನ್ನೂ ಇರುವವು.

ಮಹಾರಾಷ್ಟ್ರ, ಕರ್ನಾಟಕ, ಆಂಧ್ರ, ಗುರ್ಜರ ಇವು ಒಳ್ಳೆ ಪ್ರಗತಿಯನ್ನು ಪಡೆಯುವವು. ಜಗದ್ವಂದ್ಯ ಪಂ. ನೆಹರೂರವರ ಮಂತ್ರಿಮಂಡಳದ ಆಸನಕ್ಕೆ ಕೆಲವು ಸಾರೆ ಜೋಲಿ ಹೊಡೆಯುವ ಪ್ರಸಂಗವೂ ಬರುವದು. ಅವರೂ ಕಡೆಗೆ ಯಶಸ್ಸನ್ನೂ ತನ್ನ ಗುರಿಯನ್ನೂ ಸಾಧಿಸಿಯೇ ತೀರುವರು. ಕಾರಣ ಯಾವತ್ತೂ ಜನರು ನೂತನ ವರ್ಷವು ಶುಭದಾಯಕವಾಗಿ ಪರಿಣಮಿಸಲೆಂದು ಪರಮಾತ್ಮನನ್ನು ಪ್ರಾರ್ಥಿಸಬೇಕು. ಅಂದರೆ ಸ್ವಾತಂತ್ರ್ಯದ ಬಾಲರವಿಯನ್ನು ಶೀಘ್ರವಾಗಿ ಕಾಣುವರು.

।ಸರ್ವೇಜನಾಃ ಸುಖಿನೋ ಭವಂತು।

ಬೆಲೆ : ಎರಡು ಆಣೆ

ಕರ್ಮವೀರ

ವರ್ಗಣಿ ದರ
(ಅಂಚೆವೆಚ್ಚ ಸೇರಿ)
ವರ್ಷಕ್ಕೆ ರೂ. [illegible]
೬ ತಿಂಗಳಿಗೆ „ [illegible]
೩ ತಿಂಗಳಿಗೆ „ [illegible]
[illegible]

KARMAVEER
WEEKLY
HUBLI
MARCH 31
1947

ಸಂಪಾದಕರು :
ಹ. ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor H. R. Purohit, M. A.

ಸಂಪುಟ ೨೮] ಹುಬ್ಬಳ್ಳಿ ಸೋಮವಾರ ತಾರೀಖು ೩೧—೩—೧೯೪೭ [ಸಂಚಿಕೆ ೧೮

ವಿಭಜನೆ: ಪಂಜಾಬ ಬಂಗಾಲ ಸಮಸ್ಯೆಗಳಿಗೆ ಒಂದೇ ಉತ್ತರ— ಕಾಂಗ್ರೆಸ ಗೊತ್ತುವಳಿಯ ಇಂಗಿತ

(ಲೇಖಾಂಕ ೧)

ಈ ತಿಂಗಳ ೮ ನೇ ತಾರೀಖಿನ ದಿನ ಕಾಂಗ್ರೆಸ್ ಕಾರ್ಯ ಸಮಿತಿ ಪಂಜಾಬದ ಘಟನೆಗಳನ್ನು ಅನುಲಕ್ಷಿಸಿ ಒಂದು ಮಹತ್ವದ ಗೊತ್ತುವಳಿಯನ್ನು ಮಾಡಿತು. ಪಂಜಾಬ ಪ್ರಾಂತವನ್ನು ಪೂರ್ವ ಪಶ್ಚಿಮವೆಂದು ಎರಡಾಗಿಸಬೇಕೆಂಬುದೇ ಆ ಗೊತ್ತುವಳಿಯ ಆಶಯವಾಗಿತ್ತು. ಮುಂದೆ ಮದ್ರಾಸಿನಲ್ಲಿ ರಾಷ್ಟ್ರಪತಿ ಕೃಪಲಾನಿಯವರು ಪಂಜಾಬದ ನಿಯಮವನ್ನು ಅವಶ್ಯಬಿದ್ದರೆ ಬಂಗಾಲಕ್ಕೂ ಅನ್ವಯಿಸಬೇಕೆಂದು ಹೇಳಿದರು. ಮಹಾತ್ಮಾ ಗಾಂಧಿಯವರು ಕೂಡ ಬಂಗಾಲದ ವಿಭಜನೆಗೆ ಪ್ರತಿಕೂಲಾಭಿಪ್ರಾಯವುಳ್ಳವರಾಗಿದ್ದರೂ ಒತ್ತಾಯದ ವಿಭಜನೆಯಂತೆ ಒತ್ತಾಯದ ಐಕ್ಯಕ್ಕೂ ತಾವು ವಿರೋಧಿಗಳಿರುವೆವೆಮ ಹೇಳಿ ಪ್ರವಾಹದ ಸೆಳವಿಗೆ ತಲೆವಾಗಲು ಅನುವಾದರು. ಭಾರತದ ಅಖಂಡತೆಯನ್ನು ಕಾಪಾಡಲು ಜೀವಮಾನವನ್ನೆ ಸವೆಸಿದ ಕಾಂಗ್ರೆಸ್ಸಿನ ನಾಯಕರು ಈ ಬಗೆಯಾಗಿ ವರ್ತಿಸಿದುದು ಅನೇಕರನ್ನು ಆಶ್ಚರ್ಯಗೊಳಿಸದೆ ಇಲ್ಲ. ಆದರೆ ಇಡಿ ಇತಿಹಾಸದ ತರ್ಕಬದ್ಧ ಪರಿಣಾಮವಾಗಿಯೇ ಈ ಬಗೆಯ ನಿರ್ಣಯಕ್ಕೆ ಕಾಂಗ್ರೆಸ್ಸು ಬರಬೇಕಾಯಿತೆಂಬುದನ್ನೂ ಇಂದಿನ ಸ್ಥಿತಿಯಲ್ಲಿ ಈ ಕಚ್ಚಾಟದ ಪ್ರಾಂತಗಳನ್ನು ವಿಭಜಿಸುವದೊಂದೇ ಉಪಾಯವಿದೆಯೆಂದೂ ಅದು ಅಸಾಧ್ಯತೆಯ ಲೋಕದ್ದೇನೂ ಅಲ್ಲವೆಂದೂ ತೋರಲು ಇಲ್ಲಿ ಎರಡು ಲೇಖಗಳಲ್ಲಿ ಪ್ರಯತ್ನಿಸಲಾಗುವದು.

ಅಧಿಕಾರದ ಸ್ಪರ್ಧೆ

ಇಂದು ಪಾಕಿಸ್ತಾನ ಅವಶ್ಯವೇ ಸಾಧ್ಯವೇ ಹಿತಾವಹವೇ ಎಂಬ ಪ್ರಶ್ನೆ ಉಳಿದಿಲ್ಲವೆಂಬುದನ್ನು ನಾವು ಮೊದಲು ಮನಗಾಣಬೇಕಾಗಿದೆ. ಬಂಗಾಲದಲ್ಲಿ ನಡೆದ ದುರ್ಘಟನೆಗಳು ಮತ್ತು ಅದಕ್ಕಿಂತಲೂ ಹೆಚ್ಚಾಗಿ ಪಂಜಾಬದ ಘಟನೆಗಳು ಸಮಸ್ಯೆಯ ನಿಜ ಸ್ವರೂಪವನ್ನು ತೆರೆದಿಟ್ಟಿವೆ. ಇದರಲ್ಲಿ ಧಾರ್ಮಿಕ ಕಲಹಕ್ಕಿಂತ ರಾಜಕೀಯ ಅಧಿಕಾರ ಲೋಲುಪತೆಯ ಪ್ರಮಾಣ ಬಹಳ ಹೆಚ್ಚಾಗಿದೆ. ರಾಜಕೀಯ ಜಾಗ್ರತಿ ಹೊಂದಿದ ಮುಸ್ಲಿಮರಲ್ಲಿ ಬಹುಸಂಖ್ಯಾಕರು ಯೇನ ಕೇನ ಪ್ರಕಾರೇಣ ಪಂಜಾಬದಲ್ಲಿ ತಮ್ಮ ಸತ್ತೆಯನ್ನು ಸ್ಥಾಪಿಸಲು ಛಲತೊಟ್ಟಿದ್ದಾರೆ. ಧಾರ್ಮಿಕ ಹತ್ಯಾಕಾಂಡ ಅಜ್ಞ ಜನತೆಯ ಬೆಂಬಲ ಗಳಿಸುವ ಮತ್ತು ವಿರೋಧಿಗಳನ್ನು ಬೆದರಿಸುವ ತಂತ್ರಮಾತ್ರ. ಅದೇ ಪ್ರಕಾರ ಪಂಜಾಬದಲ್ಲಿನ ಸೀಖರೂ ಹಿಂದುಗಳೂ ಸಹ ಮುಸ್ಲಿಮ ಪ್ರಭಾವವುಳ್ಳ ಸಹಕಾರವನ್ನು ಸಹಿಸಲು ಸಿದ್ಧರಿಲ್ಲ. ಹಿಂದುಸ್ತಾನದಲ್ಲಿರುವ ೯ ಕೋಟಿ ಮುಸ್ಲಿಮರು ಅಲ್ಪಸಂಖ್ಯಾಕರಲ್ಲವೆಂದೂ ಅವರು ಕೆಲವೊಂದು ಪ್ರದೇಶದಲ್ಲಿ ಬಹುಸಂಖ್ಯಾಕರಾಗಿರುವದರಿಂದ ಮುಸ್ಲಿಮರಿಗೆ "ರಾಷ್ಟ್ರ" ತ್ವವುಂಟೆಂದೂ ಅದಕ್ಕಾಗಿ ಆ ಪ್ರದೇಶಗಳಲ್ಲಿ ಸ್ವತಂತ್ರ ರಾಜ್ಯ ಸ್ಥಾಪಿಸುವೆವೆಂದೂ ಮುಸ್ಲಿಮ ನಾಯಕರು ವಾದಿಸುತ್ತಾರೆ. ಸಿಂಧದಲ್ಲಿ ಮತ್ತು ಲೀಗು ಬಹುಮತ ಸಂಪಾದಿಸಬಲ್ಲದಾಗಿದ್ದರೆ ಗಡಿನಾಡಿನಲ್ಲಿ ಲೀಗಿನ ಈ ಪ್ರತಿಪಾದನೆಯನ್ನು ವಿರೋಧಿಸಲು ಮಾರ್ಗವಿದ್ದಿಲ್ಲ. ಆದರೆ ಪಂಜಾಬ ಮತ್ತು ಬಂಗಾಲದ ಮಾತು ಬೇರೆ. ಅಲ್ಲಿ ಮುಸ್ಲಿಮರು ಬಹುಸಂಖ್ಯಾಕರಾದುದು ಕಳೆದ ಶತಮಾನದ ಕೊನೆಯ ವರ್ಷಗಳಲ್ಲಿ. ಅವರ ಬಹುಸಂಖ್ಯತೆಯೂ ಅಷ್ಟು ಪ್ರಬಲವಾಗಿಲ್ಲ. ೧೯೪೧ ರ ಜನಗಣತಿಯನ್ವಯ ಪಂಜಾಬದಲ್ಲಿ ಒಟ್ಟು ೨,೮೪,೧೯,೦೦೦ ಜನರಲ್ಲಿ ಕೇವಲ ೧,೬೨,೧೭,೦೦೦ ಮಾತ್ರ ಮುಸ್ಲಿಮರಿದ್ದಾರೆ. ಅಂದರೆ ನೂರಕ್ಕೆ ೫೭ ಜನ ಮುಸ್ಲಿಮರು, ಉಳಿದ ೧೨೦ ಲಕ್ಷಕ್ಕೂ ಹೆಚ್ಚು ಜನರು ಹಿಂದುಗಳು ಶೀಖರು. ಇದೂ ಅಲ್ಲದೆ ಮುಸ್ಲಿಮರು ಇಡಿ ಪಂಜಾಬದಲ್ಲಿ ಬಹುಸಂಖ್ಯಾಕರಾಗಿಲ್ಲ. ರಾವಿ ನದಿಯ ಪೂರ್ವಕ್ಕಿರುವ ಹೆಚ್ಚು ಕಡಿಮೆ ಅರ್ಧ ಪಂಜಾಬದಲ್ಲಿ ಹಿಂದೂಗಳೂ ಶೀಖರೂ ಸೇರಿ ಬಹುಸಂಖ್ಯಾಕರಾಗುವರು. ಅಲ್ಲಿ ನೂರಕ್ಕೆ ೬೨ ರಷ್ಟು ಮುಸ್ಲಿಮೇತರರು,(ನೂರಕ್ಕೆ೧೯ ಶೀಖರು, ೪೩ ಹಿಂದುಗಳು ಮತ್ತು ಇತರರು, ೩೮ ಮುಸ್ಲಿಮರು.) ಅಖಿಲ ಭಾರತದಲ್ಲಿ ನೂರಕ್ಕೆ ಇಪ್ಪತ್ತೈದರಷ್ಟು ಕೂಡ ಇಲ್ಲದ ಮುಸ್ಲಿಮರು "ಹಿಂದೂ ಸತ್ತೆ"ಯ ಕೆಳಗೆ ಬಾಳಲಪೇಕ್ಷಿಸದಿದ್ದರೆ, ಅರ್ಧ ಪಂಜಾಬದಲ್ಲಿ ನೂರಕ್ಕೆ ೬೨ ರಷ್ಟಿದ್ದು ಇಡಿ ಪಂಜಾಬದಲ್ಲಿ ನೂರಕ್ಕೆ ೪೩ ರಷ್ಟಿರುವ ಹಿಂದೂ-ಶೀಖರು ಇಸ್ಲಾಮಿ ರಾಜ್ಯದಲ್ಲಿರಲು ಏಕೆ ಒಪ್ಪಬೇಕು ?

ಪಂಜಾಬದಲ್ಲಿ ಈಚೆಗೆನಡೆದ ಘಟನೆಗಳ ಅರ್ಥವಿಷ್ಟೆ: ಮುಸ್ಲಿಮರೂ ಮುಸ್ಲಿಮೇತರರೂ ಅಲ್ಲಿ ಅಧಿಕಾರಕ್ಕಾಗಿ ಕಚ್ಚಾಡುತ್ತಿದ್ದಾರೆ, ಇಬ್ಬರೂ ಒಬ್ಬರು ಇನ್ನೊಬ್ಬರ ಆಳಿಕೆಯಲ್ಲಿರಲು ಸಿದ್ಧರಿಲ್ಲ—ಬೇಕಾದಷ್ಟು ರಕ್ತಪಾತವಾದರೂ ಸರಿಯೆ. ಕ್ರಿಶ್ಚನ್ ಧರ್ಮದಂತೆ ಇಸ್ಲಾಮವಾದರೂ ಆಕ್ರಮಣಶೀಲ ಪರಂಪರೆಯುಳ್ಳದ್ದು. ಆರ್ಥಿಕ ಪ್ರಗತಿಯ ಫಲವಾಗಿ ಕ್ರಿಶ್ಚನ್ನರು ಕಲಿತುದನ್ನು ಮಾತ್ರ ಹಿಂದೀ ಮುಸ್ಲಿಂ ಮುಂದಾಳುಗಳು ಕಲಿತಿಲ್ಲ. ಪಂಜಾಬದ ಗಝ್ನಫರ ಅಲ್ಲಿಖಾನರು ಅಖಿಲ ಹಿಂದುಸ್ತಾನದಲ್ಲಿ ಶಸ್ತ್ರ ಬಲದಿಂದ ಇಸ್ಲಾಂ ಧರ್ಮವನ್ನು ಹಬ್ಬಿಸುವ ಕನಸು ಕಾಣುತ್ತಾರೆ. ಕಳೆದ ಶತಮಾನದ ಅಂತ್ಯದಿಂದ ನಡೆದ ಘಟನೆಗಳು ಅವರ ಈ ಕನಸಿಗೆ ನನಸಿನ ರೂಪ ಬರುವ ಸಂಭಾವ್ಯತೆಯನ್ನು—ಕಡಿಮೆಯೆಂದರೆ ಪಂಜಾಬದಲ್ಲಿ— ಸಿದ್ಧಗೊಳಿಸಿವೆ. ಸ್ವಾಭಾವಿಕವಾಗಿ ಇದರಿಂದ ಹಿಂದುಗಳೂ ಸೀಖರೂ ಇಸ್ಲಾಮೀ ರಾಜ್ಯದಲ್ಲಿರಲು ಭಯಗೊಳ್ಳುತ್ತಾರೆ. ಆದರೆ ಇಸ್ಲಾಂ ಧರ್ಮ ಹಬ್ಬಿಸುವ ಛಲ ಇಂದು ಧರ್ಮ ಪ್ರಸಾರದ ದೃಷ್ಟಿಯಿಂದಿರದೆ ಪಂಜಾಬದ ಮುಸ್ಲಿಂ ದೌರ್ಬಲ್ಯವನ್ನು ಕಡಿಮೆ ಮಾಡುವ ಆತುರದಿಂದಲೇ ಪ್ರೇರಿತವಾದುದು. ಅಂದಮೇಲೆ ಇದಕ್ಕುಪಾಯವೇನು? ಅಧಿಕಾರದ ಹಂಚುವಿಕೆ. ಪೂರ್ವ ಪಂಜಾಬದಲ್ಲಿ ಹಿಂದೂ-ಸೀಖರ ಪ್ರಾಮುಖ್ಯವುಳ್ಳ ಬೇರೆಯೆ ಪ್ರಾಂತವನ್ನು ಸ್ಥಾಪಿಸಿ ಪಶ್ಚಿಮ ಪಂಜಾಬದಲ್ಲಿ ಮುಸ್ಲಿಮರಿಗೆ ಹೆಚ್ಚು ಬಿಡುಗೈ ಕೊಡುವದು. ಆಗಲೇ ಈ ತಿಕ್ಕಾಟಕ್ಕೆ ಯೋಗ್ಯ ಪರಿಹಾರೋಪಾಯ ಸಾಧಿಸಿದಂತಾದೀತು.



ಸಾಧಕ ಬಾಧಕ

ಅಗಸ್ಟ ಚಳವಳಿಯ ಕಾಲಕ್ಕೆ ಮುಂದಾಳುಗಳು ಬಂಧನದಲ್ಲಿದ್ದಾಗ ಕಮ್ಯುನಿಸ್ಟರ ಸಹಾಯದಿಂದ ಪಾಕಿಸ್ತಾನಬೇಡಿಕೆಗೆ ಸ್ವಯಂನಿರ್ಣಯಾಧಿಕಾರದ ತಾತ್ವಿಕ ಸ್ವರೂಪ ಬಂದಾಗ ರಾಜಾಜಿಯವರು ಲೀಗಿಗೆ ಕೊಡ ಮಾಡಿದ ಕೊಡುಗೆಯ ಕಾಲಕ್ಕೆ ಬಂಗಾಲ ಪಂಜಾಬಗಳ ವಿಭಜನೆಯ ಪ್ರಶ್ನೆ ಎದ್ದಿತ್ತು. ವಿಭಜನೆಯಿಂದ ಈ ಪ್ರಾಂತಗಳ ಆರ್ಥಿಕ ಮತ್ತು ಇತರ ಶಕ್ತಿಗಳು ಕುಂದುವವೆಂಬಲ್ಲಿ ಸಂದೇಹವಿಲ್ಲ. ಆದರೆ ಶಾಶ್ವತ ತಿಕ್ಕಾಟದ ವಾತಾವರಣದಲ್ಲಿ ಪಂಜಾಬದ ಸ್ಥಿತಿ ಇದಕ್ಕಿಂತಲೂ ಕೆಟ್ಟುಹೋಗುವದಿಲ್ಲವೆ ? ಆ ದೃಷ್ಟಿಯಿಂದ ಪಂಜಾಬದ ವಿಭಜನೆಯನ್ನು ಅನಿವಾರ್ಯವೆಂದೊಪ್ಪದೆ ವಿಧಿಯಿಲ್ಲ. ಪ್ರತ್ಯೇಕ ಮತದಾನ ಪದ್ಧತಿ ಇದ್ದಿಲ್ಲವಾದರೆ ಒಂದು ವೇಳೆ ಅಧಿಕಾರಕ್ಕಾಗಿ ಇಂಥ ತಿಕ್ಕಾಟ ಉದ್ಭವಿಸುತಿದ್ದಿಲ್ಲ. ಆದರಿಂದು ಜತೆ ಮತದಾನ ಪದ್ಧತಿಯನ್ನು ಸ್ಥಾಪಿಸಿದರೂ ಈ ೭ ವರ್ಷಗಳಿಂದ ಸಂಗ್ರಹವಾದ ವಿಷ ಬೇಗನೆ ಅಳಿಯುವಂತಿಲ್ಲ.

ಅನಿವಾರ್ಯವೆಂಬ ದೃಷ್ಟಿಯಿಂದ ನೋಡಿದರೆ ಪಂಜಾಬದ ವಿಭಜನೆಯಿಂದ ನಿರ್ಮಾಣವಾದ ಹೊಸ ಪ್ರಾಂತದ ಸ್ಥಿತಿಗತಿ ಏನಾದೀತು ? ಅದು ತನ್ನ ಕಾಲ ಮೇಲೆ ತಾನು ನಿಲ್ಲಬಲ್ಲದೆ ? ಮೇಲೆ ಕೊಟ್ಟ ನಕಾಶೆಯನ್ನು ನೋಡಿದರೆ ಪರಿಸ್ಥಿತಿ ಹೆಚ್ಚು ನಿಚ್ಚಳವಾಗುವದು. ಅದರಲ್ಲಿ ಪ್ರತಿ ಜಿಲ್ಲೆಯ ಹಿಂದೂ ಮುಸ್ಲಿಂ ಜನಸಂಖ್ಯೆಯ ಶತಾಂಶವನ್ನು ಕೊಡಲಾಗಿದೆ. ಬ್ರಿಟಿಶ ಪಂಜಾಬದಲ್ಲಿಯೇ ೧೩ ಜಿಲ್ಲೆಗಳು ಮುಸ್ಲಿಮೇತರ ಬಹುಸಂಖ್ಯಾಕವಾಗಿವೆ. ಅದಲ್ಲದೆ ಪತಿಯಾಳಾ ಮಂಡಿ ಮೊದಲಾದ ಸಂಸ್ಥಾನಗಳು ಹಿಂದೂ ಸೀಖ ರಜಪೂತರಿಗೆ ಸೇರಿದ್ದು ಅವು ಪೂರ್ವ ಪಂಜಾಬದಲ್ಲಿಯೇ ಇವೆ. ಇವು ಸೇರಿ ಮುಸ್ಲಿಮೇತರರ ಸ್ಥಿರವಾದ ಒಂದು ಭಾಗವಾಗಲಡ್ಡಿಯಿಲ್ಲ. ಪ್ರಾದೇಶಿಕ ಒಪ್ಪಕ್ಕಾಗಿ ರಾವಿ ನದಿಯ ಪೂರ್ವದಲ್ಲಿರುವ ಲಾಹೋರ ಜಿಲ್ಲೆಯನ್ನು ಇದು ಮುಸ್ಲಿಂ ಬಹುಸಂಖ್ಯಾಕ ಜಿಲ್ಲೆಯಾಗಿದ್ದರೂ ಪೂರ್ವ ಪಂಜಾಬಕ್ಕೇ ಸೇರಿಸಬೇಕಾಗುವದು.

ಈ ಹೊಸ ಪ್ರಾಂತದಲ್ಲಿ ಹೀಗೆ ೧೪೪ ಲಕ್ಷ ಜನಸಂಖ್ಯೆಯಿದ್ದು ಅದು ಸೀಖ ಮತ್ತು ಹಿಂದೂ ಜನರ ಬಹುಮತವುಳ್ಳದ್ದಾಗುವದು. ಇವೆರಡೂ ಸಮಾಜಗಳು ಸಂಸ್ಕೃತಿಯಲ್ಲಿ ಅಭಿನ್ನವಾಗಿರುವದರಿಂದ ಅಲ್ಲಿ ತಿಕ್ಕಾಟದ ಆಸ್ಪದ ಕಡಿಮೆ. ಹಿಂದುಗಳು ನೂರಕ್ಕೆ ೪೩ ಮುಸ್ಲಿಮರು ೩೮ ಇರುವದರಿಂದ ಇವುಗಳಲ್ಲಿ ಯಾವದೊಂದೇ ಜಾತಿ ತನ್ನ ಸತ್ತೆಯನ್ನು ಹೇರಲು ಸಮರ್ಥವಾಗಲಾರದು. ನೂರಕ್ಕೆ ೧೯ ರಷ್ಟಿರುವ ಸೀಖರು ಇವರ ನಡುವೆ ಸರಿದೂಗಲು ನಿಲ್ಲುವದರಿಂದ ಅವರ ಪ್ರಭಾವ ಸಂಖ್ಯಾಮಾನಕ್ಕಿಂತ ಹೆಚ್ಚಾಗಿ, ಅವರಿಗೆ ಅದು ಸ್ವಾಭಾವಿಕ ಸಂರಕ್ಷಣೆಯಾಗಿ ರೂಪುಗೊಳ್ಳುವದು.

ಆರ್ಥಿಕ ದೃಷ್ಟಿಯಿಂದಲಾದರೂ ಪೂರ್ವ ಪಂಜಾಬಪ್ರಾಂತ ಸಾಕಷ್ಟು ಸಮೃದ್ಧವಾಗಿಯೆ ಇದೆ. ಈಗಿರುವ ಎಷ್ಟೋ ಬ್ರಿಟಿಶ ಪ್ರಾಂತಗಳಿಗಿಂತ ಆದರ ಉತ್ಪನ್ನ ಹೆಚ್ಚಾಗುವದು. ಮಹದಾ,

—ಶಿನೇ ಶುಟಕ್ಕೆ

ಬೆಂಗಳೂರು-ಮೈಸೂರು

ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರು ಶ್ರೀಮತಿ ಸುಚೇತಾ ಕೃಪಲಾನಿಯವರೊಂದಿಗೆ ತಾ ೧೯ ಕ್ಕೆ ಮೈಸೂರು ನಗರಕ್ಕೆ ಆಗಮಿಸಿದರು. ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ಭಾಷಣ ಮಾಡುತ್ತ ಕಾಂಗ್ರೆಸಿಗರು ಅಧಿಕಾರ ಸ್ಥಾನಗಳಿಗಾಗಿ ಬಡಿದಾಡದೆ ನಿಜವಾದ ರಾಷ್ಟ್ರಸೇವೆ ಮಾಡಬೇಕೆಂದು ಅವರು ಉಪದೇಶಿಸಿದರು. ರಾಷ್ಟ್ರಪತಿಗಳು ಕಸ್ತೂರಬಾ ಶಿಬಿರ, ಪತ್ರಿಕೋದ್ಯೋಗಿ ಸಂಘ, ನಗರ ಸಭೆ, ವಿದ್ಯಾರ್ಥಿ ಸಂಘಗಳನ್ನು ಸಂದರ್ಶಿಸಿದರು.

ಮೈಸೂರು ಸಂಸ್ಥಾನದಿಂದ ಘಟನಾ ಸಮಿತಿಗೆ ಕಳುಹಲ್ಪಡುವ ಪ್ರತಿನಿಧಿಗಳೆಲ್ಲರೂ ಚುನಾಯಿತರೇ ಇರಬೇಕೆಂಬ ಗೊತ್ತುವಳಿಯನ್ನು ಪ್ರಜಾಪ್ರತಿನಿಧಿ ಸಭಾಧಿವೇಶನದಲ್ಲಿ ಮಂಡಿಸಬೇಕೆಂದು ಮೈ. ಪ್ರ. ಪ್ರ. ಸಭೆಯ ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಮಂಡಲ ತೀರ್ಮಾನಿಸಿದೆ. ಸಂಸ್ಥಾನದಲ್ಲಿ ಕೂಡಲೆ ಹೊಣೆಗಾರ ಸರಕಾರವನ್ನು ಸ್ಥಾಪಿಸಬೇಕೆಂಬ ಗೊತ್ತುವಳಿಯೂ ಮಂಡಿಸಲ್ಪಡುವದು.

ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ಐದನೇ ಅಧಿವೇಶನಕ್ಕೆ ಮಾತೃಭೂಮಿ ಸಂಪಾದಕರಾದ ಶ್ರೀ ಎಂ. ಎಲ್. ಶ್ರೀಕಂಠಯ್ಯನವರು ಅವಿರೋಧ ಆರಿಸಿಬಂದಿದ್ದಾರೆ.

ದಂಡಿನ ಪೋಲೀಸ ಅಧಿಕಾರಿಯಾದ ಶ್ರೀ ಸರ್ವೋತ್ತಮ ರಾವ್ ಮೊದಲಾದವರ ಮೇಲೆ ಶ್ರೀ ಬಿ. ಎಸ್. ಗೋಪಾಲರಾಯರು ಹೂಡಿದ ದರೋಡೆ ಪ್ರಕರಣದ ವಿಚಾರಣೆಯು ಕಾಲದಲ್ಲಿ ಆರೋಪಿತರ ಸಾಕ್ಷಿ ನಡಿಯುತ್ತ ಮೈಸೂರು ಮುಖ್ಯ ರಾಜರ ಆಪ್ತ ಕಾರ್ಯದರ್ಶಿ ಶ್ರೀ ಶಂಬು ಚೆಟ್ಟಿಯವರಿಗೆ ಪ್ರಾಣಭಯ ತೋರಿಸುವ ಪತ್ರಗಳು ಬಂದುದರಿಂದ ಈ ಒಳಸಂಚನ್ನು ಶೋಧಿಸಲು ತಾವು ಆರೋಪಿಯನ್ನು ಪತ್ತೇದಾರಿಯಾಗಿ ನೇಮಿಸಿದ್ದುದಾಗಿ ಐ. ಜಿ. ಪಿ. ಯವರಾದ ಜಿ. ಸುಂದರರಾಯರು ತಿಳಿಸಿದ್ದು ಆಶ್ಚರ್ಯವನ್ನುಂಟುಮಾಡಿದೆ.

ದಕ್ಷಿಣ ಕನ್ನಡ


ತಾ. ೧೦ ಕ್ಕೆ ನಡೆದ ಮಂಗಳೂರು ನಗರ ಸಭೆಯ ಅಧಿವೇಶನದಲ್ಲಿ ದಿವಂಗತ ಪಿ. ಜಿ. ಸಾಲ್ಡಾನ್ನರ ನಿಧನದ ಬಗ್ಗೆ ದುಃಖ ಸೂಚಿಸಲಾಯಿತು. ದಿವಂಗತರು ಕಾಂಗ್ರೆಸ್ಸಿಗರೂ ಕನ್ನಡಾಭಿಮಾನಿಗಳೂ ಇದ್ದು ೧೯೩೧ ರಲ್ಲಿ ಕಾರವಾರದಲ್ಲಾದ ಏಕೀಕರಣ ಪರಿಷತ್ತಿನ ಅಧ್ಯಕ್ಷರಾಗಿದ್ದಲ್ಲದೆ ಮಂಗಳೂರು ನಗರ ಸಭೆ, ಮದ್ರಾಸ ಶಾಸನ ಸಭೆಗಳ ಸದಸ್ಯರಾಗಿದ್ದರು. ನಗರ ಸಭೆಯಲ್ಲಿ ವೆಬ್ಸ್ಟರ ಮಾರ್ಕೆಟ್ಟಿನ ಹೊರ ಮೈಯ ಅಂಗಡಿಗಳ ಹೊಸ ಬಾಡಿಗೆ ಲಿಲಾವಿನಲ್ಲಿ ಬಾಡಿಗೆ ಅತಿರೇಕವಾಗಿ ಏರಿದ್ದನ್ನು ಚರ್ಚಿಸಲಾಯಿತು. ವರ್ತಕ ಪ್ರತಿನಿಧಿಗಳು ಈ ವಿಷಯದಲ್ಲಿ ಆಕ್ಷೇಪಿಸಿದರು. ಆದರೆ ಸರಕಾರದ ಆಜ್ಞೆಯನ್ನು ಪಾಲಿಸುವದೇ ಒಳಿತೆಂದು ನಿರ್ಣಯವಾಯಿತು. ಹಿಂದೆ ೨೦ ರೂಪಾಯಿ ಬಾಡಿಗೆಯಿದ್ದ ಸ್ಥಳಗಳಿಗೆ ಈ ಬಾರಿ ೧೫೦ ರ ವರೆಗೂ ೫ ರೂಪಾಯಿಯವುಗಳಿಗೆ ೩೭ ರೂಪಾಯಿ ವರೆಗೂ ಬಾಡಿಗೆ ಏರಿವೆಯೆಂದು ತಿಳಿಯಬಂದಿದೆ.

ಜಿಲ್ಹೆಯ ಅಧ್ಯಾಪಕವರ್ಗದಲ್ಲಿ ಸಂಬಳ ಮೊದಲಾದವುಗಳ ಬಗ್ಗೆ ಇರುವ ಅತೃಪ್ತಿಯನ್ನು ಸರಕಾರಕ್ಕೆ ಮನಗಾಣಿಸುವ ಸಲುವಾಗಿ ದ. ಭಾ. ಅಧ್ಯಾಪಕ ಸಂಘದವರು ಕೂಡಬಹುದಾದ ಯಾವುದೇ ಪ್ರತ್ಯಕ್ಷ ಹೋರಾಟದಲ್ಲಿ ಭಾಗವಹಿಸಿ, ಕೆಲಸದಿಂದ ಕಿತ್ತು ಹಾಕುವದು, ಬಂಧನ ಮೊದಲಾದ ಸರ್ವ ಕಷ್ಟನಷ್ಟಗಳನ್ನೂ ಸಹಿಸಲು ಸಿದ್ಧರಿರುವ ಅಧ್ಯಾಪಕರಿಂದ ಪ್ರತಿಜ್ಞಾ ಪತ್ರಕ್ಕೆ ಸಹಿ ಸಂಗ್ರಹಿಸಲು ದ. ಕ. ಅಧ್ಯಾಪಕ ಸಂಘ ಉದ್ಯುಕ್ತವಾಗಿದೆ.

[illegible] ತಿಂಗಳಲ್ಲಿ ದಕ್ಷಿಣ ಕನ್ನಡಕ್ಕೆ ಬರುವರೆಂದೂ ಎಪ್ರಿಲ ೨೨ ರಿಂದ ೨೪ ರ ವರೆಗೆ ಜಿಲ್ಹೆಯ ಇನ್ನೂ ನಿಶ್ಚಿತವಾಗದ ಸ್ಥಳದಲ್ಲಿ ಕ. ಪ್ರಾಂ. ಸಾಮ್ಯವಾದಿ ಪಕ್ಷದ ಪ್ರಥಮಾಧಿವೇಶನ ಜರುಗುವದೆಂದೂ ತಿಳಿಯುತ್ತದೆ.

ಮಂಗಳೂರು ತಾಲೂಕಿನ ಬೋರ್ಡ ಪ್ರಾಥಮಿಕ ಶಾಲಾಧ್ಯಾಪಕರ ಸಭೆ ತಾ. ೯ ಕ್ಕೆ ಮಂಗಳೂರು ಗಣಪತಿ ಶಾಲೆಯಲ್ಲಿ ಶ್ರೀ ಬಿ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸೇರಿ ೧೯೪೪ ಜುಲೈಯಿಂದ ತುಟ್ಟಿ ಭತ್ತೆ, ಸರಕಾರಿ ನೌಕರರಿಗಿರುವಂತೆ ೧ ತಿಂಗಳ ಬೋನಸ್ ಬೇಡಿದ್ದಲ್ಲದೆ ಈಗಿನ ಸ್ಕೇಲ ಪದ್ಧತಿಯಲ್ಲಿ ಅತೃಪ್ತಿಯನ್ನು ಸೂಚಿಸಿತು. ಇನ್ನೂ ಹಲವು ಬೇಡಿಕೆಗಳನ್ನು ಮುಂದೊಡ್ಡಲಾಗಿದೆ. ಹೊಸ ವರ್ಷಕ್ಕೆ ಶ್ರೀ ಬಿ. ಕೃಷ್ಣರಾಯರನ್ನು ಅಧ್ಯಕ್ಷರಾಗಿಯೂ ಶ್ರೀ ಭೋಜರಾಯರನ್ನು ಕಾರ್ಯದರ್ಶಿಯಾಗಿಯೂ ಆರಿಸಲಾಯಿತು.

ಉಡುಪಿ ತಾಲೂಕ ರೈತ ಸಂಘದ ಬಂಟಕಲ್ ಶಾಖೆ ತಾ. ೮ ಕ್ಕೆ ಶ್ರೀ ರಾಮನಾಯ್ಕರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಕಾಂಗ್ರೆಸ್ ಸರಕಾರದ ರೈತಹಿತಕಾರಿತ್ವದಲ್ಲಿ ವಿಶ್ವಾಸ ಪ್ರದರ್ಶಿಸುವ ಘೋಷಣೆಗಳಾದವು. ತಾ. ೯ ಕ್ಕೆ ತಾಲೂಕು ರೈತ ಸಂಘದ ಚುನಾವಣೆಗಳು ಕಡಿಯಾಳಿ ಶಾಲೆಯಲ್ಲಾದವು. ಶ್ರೀ ವೈ. ವಾಸುದೇವರಾಯರು ಅಧ್ಯಕ್ಷರಾಗಿಯೂ ಶ್ರೀ ಲೋಕಯ್ಯನವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.



ಮುಂಬಯಿ ಶೇರ ಪೇಟೆ

ತಾ ೧೯

ಹದಿನಾರು ದಿನಗಳ ವರೆಗೆ ಮುಚ್ಚಿದ್ದ ಮುಂಬಯಿ ಸ್ಟಾಕ ಎಕ್ಸಚೇಂಜು ತಾ ೧೭ ಕ್ಕೆ ಪುನಃ ಪ್ರಾರಂಭವಾದರೂ ಟಾಟಾ ಸಾದಾ ಮೊದಲಾದ ಹತ್ತು ಪ್ರಮುಖ ಪಾಲುಗಳಲ್ಲಿ ಹೊಸ ವ್ಯಾಪಾರ ಮಾಡಬಾರದೆಂದು ನಿರ್ಬಂಧಿಸಲಾಗಿತ್ತು. ವ್ಯಾಪಾರಿಗಳ ಮತ್ತು ಜನತೆಯ ಹಿತದೃಷ್ಟಿಯಿಂದ ಈ ನಿರ್ಣಯಕ್ಕೆ ಬರಲಾಗಿದೆಯೆಂದು ಸ್ಟಾಕ ಎಕ್ಸಚೇಂಜ ಅಧಿಕಾರಿಗಳು ತಿಳಿಸಿದರು. ಈ ಪ್ರಮುಖ ಪಾಲುಗಳ ಹಳೆ ವ್ಯವಹಾರವನ್ನು ತಾ ೧೯ ಕ್ಕೆ ಪೂರ್ತಿ ಮುಗಿಸಿದ ನಂತರವೇ ಹೊಸ ವ್ಯವಹಾರ ಪ್ರಾರಂಭಿಸಲಾಗುವದು. ವ್ಯಾಪಾರ ಪ್ರಾರಂಭವಾದಾಗ ಟಾಟಾ-ಸ್ಟೀಲ ಡೆಫರ್ಡ ಪಾಲುಗಳು ೨೨೫೦-೦-೦ ರಲ್ಲಿ, ಅಂದರೆ ತಾ ೨೮ ಕ್ಕೆ ವ್ಯಾಪಾರ ಮುಗಿದಾಗ ಇದ್ದ ಸ್ಥಿತಿಯಿಂದ ೩೨೭ ರೂಪಾಯಿ ಕೆಳ ಮಟ್ಟದಲ್ಲಿ ಪ್ರಾರಂಭವಾದವು. ಮುಂದೆ ೨೩೦೫-೦-೦ ರ ವರೆಗೇರಿದರೂ ಇಂದು ವ್ಯಾಪಾರ ಮುಗಿದಾಗ ೨೨೮೭—೮—೦ ರಲ್ಲಿ ಕೊನೆಗಂಡವು. ಟಾಟಾ ಸಾಮಾನ್ಯ ಪಾಲು ೪೧೫-೦-೦ ರಿಂದ ೪೨೯ ಕ್ಕೇರಿವೆ. ಡಾಯಿಂಗ ೨೨೨೦-೦-೦ ರಿಂದ ೨೩೦೦-೦-೦ ಕ್ಕೂ ಫಿನ್ಲೆ ೩೦೪-೦-೦ ರಿಂದ ೩೧೮-೦-೦ ಕ್ಕೇರಿ ೩೧೨-೦-೦ ಕ್ಕೂ ಕೋಹಿನುರು ೭೧೨-೦-೦ ರಿಂದ ೭೪೫-೦-೦ ಕ್ಕೇರಿ ೭೩೨-೦-೦ ಕ್ಕೂ ಸ್ವದೇಶಿ ೬೩೫-೦-೦ ರಿಂದ ೬೪೨-೦-೦ ಕ್ಕೇರಿ ೬೨೨-೦-೦ ಕ್ಕೂ ಗೋಕಾಕ ೩೦೮-೦-೦ ರಿಂದ ೩೨೫-೦-೦ ಕ್ಕೇರಿ ೩೧೪-೦-೦ ಕ್ಕೂ ಬದಲಾದವು. ಇಂಡಿಯನ್ ಆಯರ್ನ ೨೩೨-೦-೦ ರಿಂದ ೨೪೫-೦-೦ ಕ್ಕೇರಿ ೨೪೧-೦-೦ ಕ್ಕೂ ಟಾಟಾ ೩೮-೪-೦ ರಿಂದ ೩೮-೧೨-೦ ಕ್ಕೇರಿ ೩೮-೮-೦ ಕ್ಕೂ ಸಿಂಧ್ಯ ಸ್ಟೀಮ ೩೧-೦-೦ ರಿಂದ ೩೩-೧೪-೦ ಕ್ಕೂ ಅಸೊ ಸಿಮೆಂಟ್ಸ ೧೮೦-೮-೦ ರಿಂದ ೧೮೭-೦-೦ ಕ್ಕೇರಿ ೧೮೫-೦-೦ ಕ್ಕೂ ಸ್ಥಿರ್ಯಂ ಪರಗೊಂಡವು. ಬ್ಯಾಂಕುಗಳಲ್ಲಿ ಸೆಂಟ್ರಲ ೧೩೦-೦-೦ ರಿಂದ ೧೨೫ ಕ್ಕಿಳಿದು ೧೨೮—೦—೦ ಕ್ಕೆ ಸುಧಾರಿಸಿದರೆ ಇಂಪೀರಿಯಲ್ ೨೪೨೫—೦—೦ ರಿಂದ ೨೩೧೫—೦—೦ ಕ್ಕಿಳಿದುಬಿಟ್ಟಿತು. ಬಿಲ್ಲುರ್ವ ೧೨೭—೦—೦ ರಿಂದ ೧೨೦ ಕ್ಕಿಳಿಯಿತು.

ಆದರೆ ಕೇಂದ್ರ ಶಾಸನ ಸಭೆಯಲ್ಲಿ ಕೆಲವು ಮಟ್ಟಿಗೆ ಕರಗಳನ್ನು ಇಳಿಸಲಾಗುವದೆಂದು ತಿಳಿಸಲ್ಪಟ್ಟಿರುವದರಿಂದ ಮೊದಲಿದ್ದ ಭೀತಿ ಅಳಿದು ಸ್ವಲ್ಪ ಧೈರ್ಯದ ಸ್ಥಿತಿ ಬರಬಹುದೆಂದು ಊಹಿಸಲ್ಪಟ್ಟಿದೆ.

ಸರಕಾರಿ ಸಾಲ ಪತ್ರಗಳಲ್ಲಿ ಜಿ. ಪಿ ೧೦೨-೪-೦ ರಿಂದ ೧೦೧—೧೩—೦ ಕ್ಕಿಳಿದಿವೆ ೧೯೪೭-೫೦ ರ ಸಾಲ ೧೦೧—೯—೦ ರ ಸುತ್ತ ಇದೆ.

ಚಿನ್ನ ಬೆಳ್ಳಿ

ಬೆಳ್ಳಿ ಧಾರಣೆಯ ಪರಮಾವಧಿಯನ್ನು ಹೆಚ್ಚಿಸಬಾರದೆಂದು ವ್ಯಾಪಾರಿ ಸಂಘ ನಿರ್ಣಯಿಸಿದೆ. ತಯಾರಿ ಬೆಳ್ಳಿ ೧೬೯-೯-೦ ವರೆಗೇರಿ ೧೬೩-೮-೦ ಕ್ಕಿಳಿಯಿತು. ವಾಯಿದಾ ೧೫೫—೮—೦ ಚಿನ್ನ ಬಹಳ ಬದಲಾವಣೆಗೊಳ್ಳಲಿಲ್ಲ. ೧೦೫—೪—೦ ರ ವರೆಗೆ ಹೋಗಿ ೧೦೪—೦—೦ ರ ಸುತ್ತ ತಿರುಗುತಿದೆ. ವಾಯಿದಾ ೧೦೦—೯—೦ ಕಾಮನ್ಸ ಸಭೆಯ ಪ್ರಶ್ನೋತ್ತರ ಕಾಲದಲ್ಲಿ ಲಂಡನ ವ್ಯಾಪಾರಿಗಳ ಮೂಲಕ ಬೆಳ್ಳಿಯನ್ನರು ಹಿಂದುಸ್ತಾನಕ್ಕೋಸ್ಕರ ಅಮೇರಿಕೆಯಿಂದ ೧೧೫ ಲಕ್ಷ ಔಂಸು, ರಶಿಯಾದಿಂದ ೫ ಲಕ್ಷ ಔಂಸು ಬೆಳ್ಳಿ ಕೊಂಡು ಕೊಂಡರೆಂದು ತಿಳಿದುಬಂದಿದೆ. ಇದರಿಂದ ಆವೆರಡೂ ದೇಶಗಳು ಧಾರಾಳ ಲಾಭ ಹೊಡೆದವು.

ಅರಳೆಪೇಟೆ

ಅರಳೇ ಪೇಟೆಯಲ್ಲಿ ಹೊರಗಿನ ವ್ಯಾಪಾರ ಲೇಶವೂ ಇಲ್ಲ. ನಿರ್ಯಾತಕ್ಕೆ ಸರಕಾರದವರು ಕೊಟ್ಟ ಪರವಾನಿಗೆಯಿಂದಲೂ ಯಾವ ಪರಿಣಾಮವೂ ಆಗಿಲ್ಲ. ಮೇ ವಾಯಿದೆ ೪೩೪—೬—೦ [illegible] ೪೪೬—೮—೦ ಸೆಪ್ಟೆಂಬರಿ [illegible] ಕನಿಷ್ಠ ದರಕ್ಕಿಂತ ಸ್ವಲ್ಪ ಏರಿಕೆಯಲ್ಲಿವೆ.

ಎಣ್ಣೆಕಾಳು

ಶೇಂಗಾ	[illegible]
ಅಗಸಿ	[illegible]
ಅಗಸಿ ಎಣ್ಣೆ	[illegible]

ಶಿವಮೊಗ್ಗೆ

ಅಡಿಕೆ ದೇಶಾವರ ನಂ ೧ ಮಣ ೧೯ಕ್ಕೆ	೫೧-೫೩
,, ,, ೨	೪೯-೫೦
ರಾಮ ಚಂದ್ರಾಪೂರ	೪೯-೫೦
ಅನ್ನಾವರಂ	೪೪-೪೮
ತೊಸಾಲು	೪೬-೪೮
ರಾಜ ಅಲವು	೪೬-೪೮
ದೇಶಾವರ ರಾಶಿ ಅಲವು	೪೬-೪೯
ದೇಶಾವನ ಪಟಾನ	೫೨-೫೩
ನುಲಿ	೪೭-೪[illegible]
ಚಿಟ್ಟ ವಂತಿ	೩೬-೩೭
ಬೆಟ್ಟ	೩೩-೩೪

ಸಾಂಗಲಿ ಪೇಟೆ

ತಾ. ೨೫

ಅರಿಷಣ ಹೇರು	೮೫-೯೫
ಮೆಣಸಿನಕಾಯಿ ಹೇರು ,,	೧೪೦-೨೦೦
ಶೇಂಗಾ ಖಂಡಿ	೧೧೮

ಕರಭಾರಗಳನ್ನು ಕಡಿಮೆ ಮಾಡಲಾಯಿತು

(೪ ನೆ ಪುಟದಿಂದ ಬಂದುದು)

ಸಹಾಯ ಧನವೆಂದು ಸರಕಾರ ಒಟ್ಟು ೨೦.೫೯ ಕೋಟಿ ರೂಪಾಯಿ ವೆಚ್ಚ ಮಾಡಿದೆಯೆಂದೂ ತಿಳಿಸಲ್ಪಟ್ಟಿತು.

ಆಯಾತ ನಿರ್ಯಾತದ ಮೇಲೆ ನಿಯಂತ್ರಣ ಹೊರಿಸುವ ಮಸೂದೆಯನ್ನು ತಾ. ೧೭ ಕ್ಕೆ ಮಂಡಿಸಿ ವಾಣಿಜ್ಯ ಮಂತ್ರಿ ಚುಂದ್ರಿಗಾರರು ತಾ. ೧೯ ಕ್ಕೆ ಅದನ್ನು ವಾಪಸುಮಾಡಿಸಿಕೊಂಡರು.

ಕರ ಭಾರದ ತಿದ್ದುಪಡಿ

ಹಣಕಾಸಿನ ಮಂತ್ರಿ ಲಿಯಾಕತ ಅಲ್ಲಿಖಾನರು ಮಂಡಿಸಿದ್ದ ಮುಂಗಡ ಪತ್ರಿಕೆಯಲ್ಲಿ ಸೂಚಿಸಲ್ಪಟ್ಟ ಕರಗಳ ಬಗ್ಗೆ ವರ್ತಕರಲ್ಲಿ ತೀವ್ರ ವಿರೋಧ ಕಂಡುಬಂದುದರಿಂದ ಔದ್ಯೋಗಿಕ ಸಮೃದ್ಧಿಗೆ ಧಕ್ಕೆ ಬಂದೀತೆಂದು ಭಯ ವ್ಯಕ್ತಗೊಳಿಸಲ್ಪಟ್ಟಿತ್ತು. ಕರಭಾರವನ್ನು ತಗ್ಗಿಸಬೇಕೆಂದು ಕಾಂಗ್ರೆಸ ಪಕ್ಷದವರು ಒತ್ತಾಯ ಗೊಳಿಸಿದ್ದು ಅದರಿಂದ ದೊಡ್ಡ ಪ್ರಮಾಣದ ಬಿಕ್ಕಟ್ಟು ಉಂಟಾಗಬಹುದೆಂದು ಭಾವಿಸಲ್ಪಟ್ಟಿತ್ತು. ತೆರಿಗೆಗಳ ಬಗ್ಗೆ ವರದಿ ಮಾಡಲು ನೇಮಿಸಲ್ಪಟ್ಟ ಪರಿಶೀಲನ ಸಮಿತಿಯ ವರದಿ ತಾ ೧೯ಕ್ಕೆ ಶಾಸನ ಸಭೆಯ ಮುಂದೆ ಬಂತು. ಅದರ ಕೆಲ ಸೂಚನೆಗಳು ಹೀಗಿವೆ—

ಮೂಲಧನ ಲಾಭದ ಮೇಲೆ ಕರ ವಸೂಲಿ ಮಾಡುವ ಕನಿಷ್ಠ ಮಿತಿಯನ್ನು [illegible]ದಿಂದ ೧೫೦೦೦ಕ್ಕೆ ಏರಿಸಬೇಕು. ಇದಲ್ಲದೆ ಮನೆ ಮಾರಾಟದಂಥ ಕೆಲ ವ್ಯವಹಾರಗಳನ್ನು ಈ ನಿಯಮದಿಂದ ಮುಕ್ತಗೊಳಿಸಲಾಗಿದೆ. ೫೦೦೦೦ ಮಿಕ್ಕದ ಲಾಭದ ಮೇಲೆ ರೂ ೧ ಯಂತೆಯೂ ಅದರ ಮೇಲಿನ ಲಾಭಗಳಿಗೆ ಕ್ರಮಶಃ ಏರುತ್ತ ೧೦ ಲಕ್ಷ ಮೀರಿದ್ದಕ್ಕೆ ರೂ ೫ ರ ಆಣೆಯಂತೆ ಕೇಳಬೇಕು.

ಲಾಭದ ಮೇಲಿನ ಕರದ ಪ್ರಮಾಣವನ್ನು ೧೦೦ ಕ್ಕೆ ೨೫ ರಂತೆಯೆ ಉಳಿಸಲಾಗಿದ್ದರೂ ಬಂಡವಲದ ಮೇಲೆ ನೂರಕ್ಕೆ ಖಾಸಗಿ ವ್ಯಾಪಾರಿ ಸಂಸ್ಥೆಗಳಿಗೆ ೬ ರಂತೆಯೂ ಸಾರ್ವಜನಿಕ ಕಂಪನಿಗಳಿಗೆ ೫ ರಂತೆಯೂ ಲಾಭಕ್ಕೆ ಎಡೆಯಿಟ್ಟು ಅದಕ್ಕೆ ಮೇಲ್ಪಟ್ಟಿದ್ದಕ್ಕೆ ಮಾತ್ರ ಕರ ಹೇರಬೇಕೆಂದು ತೀರ್ಮಾನಿಸಲ್ಪಟ್ಟಿದೆ.

ಖಾನನ ಹೃದಯ

ಲೇ: ಮೂರಾನ ನಾಸಿಪ್ಪ, ಮಡಿಕೇರಿ,

ಡಾಕ್ಟರ್ ರಘುನಾಥರಾಯರು ಇಂದಿನಂತೆ ಎದ್ದೇ ಇದ್ದರು. ಅಷ್ಟರಲ್ಲಿ ಕೃಷ್ಣಭಟ್ಟರ ಚೀಟಿ(?) ಕರೀಮ ಖಾನನು ಅವರನ್ನು ಇದಿರುಗೊಂಡು ಸಮಸ್ಕರಿಸಿದ. ಬರಿ ಓರೆ ನೋಟದಲ್ಲೇ ಅವನ ನಮಸ್ಕಾರವನ್ನು ಸ್ವೀಕರಿಸಿ, ಡಾಕ್ಟರ ಸಾಹೇಬರು ತಮ್ಮ ಡಿಸ್ಪೆನ್ಸರಿಯ ಒಳಹೊಕ್ಕರು. ಹಾಗೆಯೇ ತಮಗಾಗಿ ಇದಿರುನೋಡುತ್ತಿದ್ದ ದೊಡ್ಡ ಮನುಷ್ಯರ ಸಲುವಾಗಿ ಔಷಧಿಗಳನ್ನು ತಯಾರಿಸಿದರು. ಖಾನ ಎಂದಿನಂತೆ ಎರಡನೆಯ ಬಾರಿ ನಮಸ್ಕಾರದ ಮೂಲಕ ವಿನಯವನ್ನು ಪ್ರಕಟಿಸಿದ, ಕೃಷ್ಣಭಟ್ಟರ ಕಾಗದವನ್ನು ಅವರಿಗೆ ಅರ್ಪಿಸಿದ. ಡಾಕ್ಟರರು ಕಾಗದವನ್ನು ಓದಿಕೊಂಡರು. ಮತ್ತೆ ಖಾನನನ್ನು ಕುರಿತು, “ಕಾರನ್ನು ತಂದಿದ್ದೀಯೋ?” ಎಂದು ಪ್ರಶ್ನಿಸಿ ಸ್ಟೆತಸ್ಕೋಪನ್ನು ತಮ್ಮ ಕಿಸೆಯಲ್ಲಿ ತುರುಕಿಕೊಂಡರು. ಖಾನ ಕಾರನ್ನು ತೋರಿಸಿದ. ಡಾಕ್ಟರ ಮಹಾಶಯರು ನಾಲ್ಕಾರು ಇಂಜಕ್ಶನ್ ಟ್ಯೂಬುಗಳನ್ನು, ಹಾಗೂ ಇತರ ಕೆಲ ಮುಖ್ಯ ಸಾಮಾನುಗಳುಳ್ಳ ಒಂದು ಪೆಟ್ಟಿಗೆಯನ್ನು ಅವನ ಕೈಯಲ್ಲಿ ಹೊರಿಸಿ, ತಾವು ಮುಂದಾದರು. ಅಂದು ಬಾಡಿಗೆ ಕಾರು ಕೃಷ್ಣಭಟ್ಟರ ಮನೆಗೆ ತಲುಪಿ ಹಿಂದಿರುಗಿತು. ಅಂತೆಯೇ ಬ್ಲೇಕ್‌ವಾಟರ್ ಜ್ವರದಿಂದ ನರಳಹೊರಟ ಕೃಷ್ಣಭಟ್ಟರು ಗುಣಮುಖರಾದದ್ದಕ್ಕೆ ಅವರ ಕೈ ಫಲಿತವೇ ಕಾರಣವೆಂದು ಅಲ್ಲಿಯ ಜನರ ಭಾವನೆ; ಹೇಳಿಕೆ.

“ಗೊತ್ತು, ಹಾಗೆಯೆ? ಅಂಥ ಭಯಂಕರ ರೋಗದಿಂದ ತನ್ನ ಧನಿಗಳು ಬದುಕಿದ್ದಕ್ಕೆ ಕರೀಮಖಾನನು, “... ಬದುಕಿಸುವ ಅಮೃತಹಸ್ತ ಸ್ವಾಮಿ ಆ ಡಾಕ್ಟರರದು” ಎಂದು ಅಲ್ಲಲ್ಲಿ ಹೇಳುತ್ತಾ ತಿರುಗಿದ್ದುಂಟು.

೨

ಎಲ್ಲೆಲ್ಲೂ ಸಿಡುಬಿನ ಜ್ವಾಲೆ ಆ ಸುತ್ತಮುತ್ತೆಲ್ಲಾ ವ್ಯಾಪಿಸಿ, ಅನೇಕ ಬಡಜನರ ರಕ್ತದಿಂದ ತೃಪ್ತಿ ಪಡತೊಡಗಿತು. ಇದ್ದಕ್ಕಿದ್ದಂತೆಯೇ ಕರೀಮ ಖಾನನ ಮಗಳಿಗೆ ಒಂದು ದಿನ ಬೆಳಗ್ಗೆ ಭಾರೀ ಜ್ವರ ಬಂದುಬಿಟ್ಟಿತು. ಖಾನನಿಗೆ ಕೈಕಾಲುಗಳೇ ಕಳಚಿಬಿದ್ದಂತಾಯಿತು. ಧನಿಗಳಲ್ಲಿಗೆ ಕೆಲಸಕ್ಕೆ ಹೋಗುವುದನ್ನು ನಿಲ್ಲಿಸಿದ. ಅವಳ ಶುಶ್ರೂಷೆಗೆಂದು ಟೊಂಕಕಟ್ಟಿ ನಿಂತ. ಆದರೆ ಹತ್ತು ಗಂಟೆಯೊಳಗೇನೇ ತನ್ನ ಧನಿಗಳ ಕರೆ ಅವನನ್ನು ಎಚ್ಚರಿಸಿ ಕರೆದೊಯ್ದಿತು. ರೋಗಿಗೆ ಔಷಧಿ ತಂದು ಕೊಡುವವನು ಸಹ ಆಗಲಿಲ್ಲ. ಪಾಪ! ಧನಿಕರ ಬಾಳನ್ನು ಹೊತ್ತ ಬಡವರ ಅವಸ್ಥೆಯೇ ಹೀಗೆಯೋ ಏನೊ? ಆದರೆ ಕರೀಮನಿಗೆ ಒಂದು ಆಸೆಯಿತ್ತು. ಅದೋ, ಡಾ. ರಘುನಾಥರಾಯರಿಗೆ ತನ್ನ ಮೇಲೆ ತುಂಬಾ ಕರುಣೆ, ಪ್ರೀತಿ. ತನಗಾಗಿ ಮಗಳನ್ನು ಪುಕ್ಕಟೆ ಪರೀಕ್ಷಿಸಿ ಔಷಧಿ ಕೊಟ್ಟಾರು, ಎಂಬ ಭ್ರಮೆ, ಆದರೆ ಆ ಬಡವನ ನಿರ್ಮಲ ಮೆದುಳಿಗೆ, ತಾನು ದೊಡ್ಡ ಮಹಾನುಭಾವರೆಂದು ತಿಳಿಸಿಕೊಂಡಿದ್ದ ಡಾಕ್ಟರರ ಬಳಿಗೆ ಒಬ್ಬ ಬಡವನಾದರೂ ಔಷಧಿಗೆ ಬರುತ್ತಿರಲಿಲ್ಲವೆಂಬ ಮಾತು ಹೊಳೆಯಲೇ ಇಲ್ಲ. ಅಂತಲೇ ಡಾಕ್ಟರರು ತನ್ನ ನೆರವಿಗೆ ಬಂದಾರೆಂಬ ಕುರುಡು ನಂಬಿಕೆ ಆತನಲ್ಲಿದ್ದುದು. ಆದರೆ ಡಾಕ್ಟರರ ಕೈಯ ಫಲಿತದ ಫಲವನ್ನನುಭವಿಸುವ ಪುಣ್ಯವು ಕೇವಲ ಸಿರಿವಂತರಿಗೆ ಸೇರಿದ ಹವಿರ್ಭಾಗವೆಂಬ ವಿಷಯ ಆತನ ಮನಕ್ಕೆ ನಾಟದಿದ್ದರೆ ತಪ್ಪು ಯಾರದು? ಆದರಿಂದಲೇ ಅವನು ಧನಿಗಳಲ್ಲಿಂದ ಮರಳುವಾಗ ಬಹು ದೈನ್ಯದಿಂದ ತನ್ನ ಮಮತೆಯ ಮಗಳ ಅವಸ್ಥೆಯನ್ನು ಧನಿಗಳ ಮುಂದೆ ಹೇಳಿಕೊಂಡನು; ಕೆಲ ರೂಪಾಯಿಗಳನ್ನು ಬೇಡಿಕೊಂಡನು. ಉತ್ತರವಾಗಿ “ಅವಳಿಗೆ ಸಿಡುಬಿರಬಹುದು. ಸುತ್ತಮುತ್ತಲೆಲ್ಲಾ ಅದೇ ಕಾಯಿಲೆ ವ್ಯಾಪಿಸಿದೆ ಎಂತ ನಿನಗೆ ಗೊತ್ತಿಲ್ಲವೆ? ಅದಕ್ಕೆ ಚೆನ್ನಾಗಿ ನೋಡಿಕೊಂಡರಾಯಿತು. ಇನ್ನೂ ನಿನಗೆ ಸಂಬಳ ಕೊಟ್ಟು ನಾಲ್ಕು ದಿನಗಳಾಗಲಿಲ್ಲ. ಮತ್ತೆ ತಿಂಗಳ ಸಂಬಳವೆ? ಮತ್ತೆ ಸಿಡುಬಿನ ಕಾಯಿಲೆಯ ವಿಷಯ ತಿಳಿದದ್ದೇ. ಒಂದು ಪಕ್ಷ ಅದು ಸಿಡುಬುಗಿಡುಬಾದರೆ ನೀನು ಇತ್ತ ಬಂದೀಯ ಜೋಕೆ” ಎಂದು ಅರ್ಭಟಿಸಿ ಒಳಹೊಕ್ಕರು ಜಮೀನುದಾರರು. ಅವನ ರೂಪಾಯಿಯ ಆಸೆಯ ಜ್ಯೋತಿ ಇಲ್ಲಿಗೆ ಆರಿತು. ಇನ್ನು ಪರೀಕ್ಷಿಸಬೇಕಾದದ್ದು ಡಾಕ್ಟರರ ಕರುಣೆಯ ಪಾಕದ ಸವಿಯನ್ನು.

೩

ಜಮೀನದಾರರು ಉಪಾಹಾರವಾಗಿತ್ತ ಅರ್ಭಟೆಯುರವವನ್ನು ಮನದಲ್ಲಿ ಕುರುವಿಸಿಕೊಂಡು ಬಂದ ಖಾನನು, ಉಸ್ಸೆಂದು ಕುಳಿತ ತನ್ನ ಗುಡಿಸಲ ಕಿರುಜಗಲಿಯ ಮೇಲೆ. ಕೂತು ಕೆಲನಿಮಿಷಗಳು ಕಳೆದಿಲ್ಲ! ಒಳಗಿಂದ—

“ಮಾಂ, ಮಾಂ, ಜಲ್ದೀ ಆ” ಖಾಯಿಲೆಯಲ್ಲಿ ನರಳುತ್ತಿದ್ದ ಖಾನನ ಮಗಳು ತನ್ನ ತಾಯಿಯನ್ನು ಕರೆದಳು.

“ಕ್ಯಾ ಬೇಟೀ ಕ್ಯಾ ಹೋತಾ?” ತಾಯಿಯ ಕರುಳಿಂದ ಪ್ರೇಮದ ಮಾತುಗಳು ಹಿಂದಿನ ಅಂಗಳದಿಂದ ಕೇಳ ಬಂದವು. ಕೂಡಲೆ ಅವಳು ಅಲ್ಲಿ ಕಾಣಿಸಿಕೊಂಡಳು.

“ಮಾಂ ಕ್ಯಾಭೀ ನಹೀ. ಕುಚ್ ಮಿಠಾಯಿ ಖಾನಾದೇಸಾ ಮಾಂ. ಬಾಪಸೆ ಬೋಲ ಮಾಂ.”

ತಾಯಿಯ ಕಣ್ಣುಗಳಲ್ಲಿ ನೀರು ಚಿಮ್ಮಿ ಹೊರಬಂದಿತು.

ಹೊರ ಜಗಲಿಯಲ್ಲಿ ಕುಳಿತ ತಂದೆಯ ಎದೆಗೆ ಸಿಡಿಲು ಬಡಿದಂತಾಯಿತು. ಕಾರಣವಿಷ್ಟೆ—ಇದ್ದ ಬರೇ ಒಂದಾಣೆ, ಅವಳು ಕೊಂಚ ಸಮಯಕ್ಕೆ ಹಿಂದೆ ಕೇಳಿದ್ದ ಬಾಳೆ ಹಣ್ಣಿಗೆ ಬಲಿಯಾಗಿತ್ತು. ಇನ್ನು ಪಾಪ, ಅವಳಿಗೆ ಮಿಠಾಯಿ ತರಬೇಕು. ಆಮೇಲೆ ತನ್ನ ಪ್ರೀತಿಯ ಡಾಕ್ಟರರು ಅವಳಿಗಾಗಿ ಹೇಳುವ ಅನುಕೂಲತೆಗಳಿಗಾಗಿ ಸ್ವಲ್ಪ ದುಡ್ಡಾಗಬೇಕು.

೪

ಕರೀಮಖಾನ ಅಲ್ಲಿಗೆ ತಲಪಿದಾಗ ಡಾಕ್ಟರರು ಹೊರಗೆ ಹೋಗಿದ್ದರು. ಅವರು ಬರಬೇಕಾದರೆ ಗಂಟೆಗಳು ಎರಡು ಕಳೆದುವು. ಖಾನನ ಮನ ಗಳಿಗೆಗಳಿಗೆಗೂ ಮೇರೆ ಮೀರಿ ಬೆಳೆಯುತ್ತಿದ್ದ ಮಗಳ ಖಾಯಿಲೆಗಾಗಿ, ಹಾಗೂ ಅವಳ ಬಯಕೆಯನ್ನು ಸಲ್ಲಿಸುವುದಕ್ಕಾಗಿ ಹಾತೊರೆದು ನಿರೀಕ್ಷಿಸುತ್ತಿದ್ದಿತು. ಡಾಕ್ಟರರು ಬಂದಂತೆಯೇ ಇವನ ವಂದನೆಗೆ ಎಂದಿನ ಓರೆ ನೋಟವನ್ನೇ ಸಲ್ಲಿಸಿ, ದೊಡ್ಡ ಮನುಷ್ಯರ ಸವಾರರ ಲಗಾಮನ್ನು ಎಳೆದು ಬಿಟ್ಟು ಮುಗಿಸಿದರು. ಇನ್ನು ಅಲ್ಲಿ ಉಳಿದಾತನೆಂದರೆ ಕರೀಮ ಖಾನ ಮಾತ್ರ. ಈಗ ಸರದಿ ಅವನದು. ಅವನು ಇಂದು ಎಂದಿನಂತೆಯೇ ಎರಡನೆಯ ಬಾರಿ—ಮಿಕ್ಕೆಲ್ಲ ದಿನಗಳಿಗಿಂತ ಹೆಚ್ಚಿನ ನಮ್ರಭಾವದಿಂದ—ನಮಸ್ಕರಿಸಿದ. ಅವನ ನಮಸ್ಕಾರ ಮುಗಿವ ಮುನ್ನಲೇ ಡಾಕ್ಟರರು, “ಕೃಷ್ಣಭಟ್ಟರ ಕಾಗದವಿದೆಯೆ?” ಎಂದು ಕೇಳಿ ಮುಗಿಸಿದರು. ಇಲ್ಲವೆನ್ನುವ ಉತ್ತರವನ್ನು ಇತ್ತ ಖಾನ. ಮತ್ತೆ ತನ್ನ ಮಗಳ ದುಃಸ್ಥಿತಿಯನ್ನು ಅವರ ಮುಂದೆ ದೀನವದನದಿಂದ, ಗದ್ಗದ ಕಂಠದಿಂದ, ಕಂಬನಿ ದುಂಬಿದ ಕಂಗಳಿಂದ, ಅಷ್ಟು ಹೃದಯಕ್ಕೆ ನಾಟುವ ಪರಿ, ಮನವಿ ಮಾಡಿಕೊಂಡ. ಡಾಕ್ಟರರು ಕೂಡಲೇ ಕೇಳಿದರು. “ನಿನಗೆಷ್ಟು ರೂಪಾಯಿ ಸಂಬಳ ಕೊಡುವರೆ”ಂದು. ಈ ಪ್ರಶ್ನೆಗೆ ಖಾನನು “ಏನೋ ಸ್ವಾಮಿ, ಈ ಬಡವನಿಗೆ ಧನಿಗಳು ದೊಡ್ಡ ಮನಸ್ಸು ಮಾಡಿ ತಿಂಗಳಿಗೆ ೧೫ ಮತ್ತೊಂದು ೧೦ ರೂಪಾಯಿಗಳನ್ನು (ಈ ಯುದ್ಧದ ದಿನಗಳಲ್ಲಿ) ಕೊಡುತ್ತಾರೆ. ಮನೆಯಲ್ಲಿ ನಾನು, ನನ್ನ ಹೆಂಡತಿ, ಮತ್ತು ಎರಡು ಮಕ್ಕಳು ಹೀಗೆ ನಾಲ್ಕು ಜನ. ಹಿರಿಯ ಹುಡುಗ ನಾಲ್ಕನೇ ಫಾರಂನಲ್ಲಿ ಓದುತ್ತಾನೆ. ಹುಡುಗಿಗೆ ಸಿಡುಬು ಸ್ವಾಮಿ. ನಿಮ್ಮಿಂದ ಸಹಾಯವಾಗಬೇಕು, ನನಗೊಂದು ಹಾದಿ ತೋರಿಸಿಕೊಡಿ ಸ್ವಾಮಿ” ಎನ್ನುತ್ತಿರುವಾಗಲೇ ಖಾನ ಅತ್ತುಬಿಟ್ಟ. ಆಗ ಡಾಕ್ಟರರು, “ನಿನ್ನ ಮನೆಗೆ ಎಷ್ಟು ದೂರ?” ಎಂತ ಕೇಳಿದರು.

ಖಾನನೆಂದ— “ಒಂದೂವರೆ ಮೈಲಾಗಬಹುದು.”

“ಕಾರು ಮಾಡಬೇಕು” ಡಾಕ್ಟರರು ಕೂಡಲೇ ಅಪ್ಪಣೆಯಿತ್ತರು.

ತೀರಾ ಹೆದರಿ ಹೋಗಿದ್ದರೂ ಖಾನ, ಆಯಿತು ಸ್ವಾಮಿ ಎಂದು ಶಿರಸಾವಹಿಸಿದ ಆಜ್ಞೆಯನ್ನು.

ಡಾಕ್ಟರರು, “ಫೀಸು ಎಷ್ಟು ಕೊಡುವಿ?” ಎಂತ ಕೇಳಿದರು.

ಖಾನನ ಕಣ್ಣುಗಳು, ಅಧೈರ್ಯದಿಂದಲೇನೊ ತುಂಬಿ ಹರಿದುವು. ಅವನು ನಮ್ರತೆಯಿಂದ ಅಂದ “ಬಹಳ ಬಡವ ಸ್ವಾಮಿ...”

ಡಾಕ್ಟರರು ಕೊನೆಗೆ, “ಏನೇ ಇರಲಿ. ಮೊದಲು ಇಪ್ಪತ್ತು ರೂಪಾಯಿ ಫೀಸು ತಾ. ಮತ್ತೆ ಕಾರು ಬರಲಿ. ಒಂದುವರೆ ಮೈಲು ನಡೆಯುತ್ತಾ ಹೋಗುವುದು ನನಗೆ ಸಾಧ್ಯವಿಲ್ಲ” ವೆಂದು ಎನ್ನುತ್ತಿರುವಾಗಲೇ ಖಾನ ಹೊರಕ್ಕೆ ತಲುಪಿದ್ದ. ಅವನ ಕಣ್ಣೀರ ಹನಿಗಳನ್ನು ಸಿಟ್ಟಿನ ಕಿಡಿಗಳು ಎಂದೋ ಹೀರಿ ಆರಿಸಿ ಬಿಟ್ಟದ್ದುವು. ಆದರೂ ಡಾಕ್ಟರರು ಮಾತ್ರ, “ಇವೆರಡೂ ನಿನಗೆ ಸಾಧ್ಯವಾಗದಿದ್ದರೆ, ಇದೋ ಈ ಔಷಧಿಯನ್ನು ತೆಗೆದುಕೊ. ದುಡ್ಡನ್ನು ನನಗೆ ಕೊಡಬೇಕಾಗಿಲ್ಲ,” ಎಂದು ಹೇಳಿ ತಮ್ಮ ಮೇಲಿನ ಭಾರವನ್ನು ಕೆಲಮಟ್ಟಿಗೆ ಇಳಿಸಿಕೊಂಡು ಸುಮ್ಮಗಾದರು. ಬಹುಶಃ ಈ ಮಾತುಗಳನ್ನು ಕೋಪದ ಕಿಡಿಗಳು ಆತನ ಕಿವಿಯೊಳಕ್ಕೆ ನುಗ್ಗಲು ಬಿಡಲಿಲ್ಲವೇನೊ?

೫

ಖತೀಜಳ ಮರಣವಾಗಿ ೧೬ ದಿನಗಳಾದರೂ ಅವಳು ಹೋಗುವಾಗ ಕರೀಮನ ಹೃದಯದಲ್ಲಿ ತುಂಬಿದ್ದ ವ್ಯಸನ ಸ್ವಲ್ಪವೂ ಬರಿದಾಗಿರಲಿಲ್ಲ. ಸಂಗಡ ತನ್ನ ಧನಿಗಳ, ಡಾಕ್ಟರರ ನಿಷ್ಕರುಣೆಯನ್ನು ಮನದಲ್ಲಿ ಕಲ್ಪಿಸಿಕೊಂಡರೆ, ಸಾವಿರ ಚೇಳುಗಳನ್ನೇ ಅವರ ಮೇಲೆ ಎರಚುವ ಮನಸ್ಸಾಗುತ್ತೆ, ಅವನಿಗೆ. ಆದರೆ ಇಷ್ಟಕ್ಕೂ ಅವನು ತೀರಾ ಬಡವ. ಆ ವಿಷಜ್ವಾಲೆಯನ್ನು ಆತ ನಾಲಗೆ ತುದಿಯಲ್ಲಿ ಕುಣಿಸಿ ಹೊರಚೆಲ್ಲಬೇಕಾಗಿತ್ತು, ಅಷ್ಟೆ.

ಆದರೆ ಸಮಯ ಬದಲುತ್ತಿರುತ್ತದೆ ತಾನೆ! ಅದರಿಂದಲೇನೋ ಆ ದಿನ ಬೆಳಗ್ಗೆ ಎಲ್ಲಿಂದಲೋ ಮನೆಗೆ ಬರುತಿದ್ದಾಗ ಅವನ ದೃಷ್ಟಿಗೆ ಒಂದು ಘೋರ ದೃಶ್ಯ ಗೋಚರಿಸಿತು. ಅದು ಸೈಕಲ ಮೋಟರದ ಅವಗಡ. ಒಬ್ಬ ತುಂಬಿದ ೨೦ ವರ್ಷದ ಬಾಲಕ ಈ ಅವಗಡಕ್ಕೆ ತುತ್ತಾಗಿದ್ದ. ಅವನಿಗೆ ಪ್ರಜ್ಞೆ ಮಾತ್ರವಲ್ಲ, ಜೀವವೇ ಹೋಗಿರಬಹುದು. ಎಂದರೂ ತಪ್ಪಾಗಲಾರದು. ಮತ್ತೆ ಸೈಕಲ್ ಮೋಟರೋ, ಅಲ್ಲಿಂದ ಮುಂದೆ ಮುಕ್ಕಾಲು ಫರಲಾಂಗ್ ದೂರದಲ್ಲಿದ್ದ ಮರಕ್ಕೆ ಡಿಕ್ಕಿಹೊಡೆದು, ಅಲ್ಲೇ ಬಿದ್ದಿತ್ತು. ಅವನಿಗೆ ಈ ಚಿತ್ರ ಕಣ್ಣುಗಳ ಮುಂದೆ ನಿಂತಾಗ ತನ್ನ ಪ್ರೀತಿಯ ಮಗಳ ನಿಸ್ಸಹಾಯಕ ಸ್ಥಿತಿ ಒಮ್ಮಿಂದೊಮ್ಮೆ ನೆನಪಿಗೆ ಬಂತು. ಹೃದಯದಿಂದ ಪ್ರೇಮ ಹೊರಸೂಸಿ ಬಾಲಕನ ಮೇಲೆ ಮಮತೆಯ ಶೀತಲ ಕಂಬನಿಯನ್ನು ಚೆಲ್ಲಿತು. ಆ ಮಮತೆಯೇ ಪುನಃ ಇವನನ್ನು ಕೂಗಿ, ಕೂಗಿ ಎಚ್ಚರಿಸುತ್ತಿದ್ದಿತು. ‘ಇವನ ಜೀವ ಉಳಿಯಬೇಕಾಗಿದ್ದರೆ, ಡಾಕ್ಟರ ರಘುನಾಥರಾಯರನ್ನು ಕಾಣು. ಉದಾಸೀನ ಮಾಡಬೇಡ, ಈ ಅನಾಥನಿಗಾಗಿಯಾದರೂ ದ್ವೇಷವನ್ನು ಮರೆಯಲ್ಲಿ ಮರೆಸಿಕೊ, ಹಾಗೆಯೇ ಅಂತರ್ನಾದವೊಂದು ಕಿವಿಗಳ ಪರದೆಯಲ್ಲಿ ಧ್ವನಿಗೊಂಡವು. ‘ಡಾಕ್ಟರರ ಕೈ ತಗೆದು ನಿಂತ ರಕ್ತವನ್ನು ಚಲಿಸಬಲ್ಲುದು.’ ಕೂಡಲೆ ಖಾನನ ತನುವು ನಡುಗಿತು. ಆ ಜೀವ ದುಡ್ಡಿನ ಹವ್ಯಾಸಕ್ಕೆ ಬಲಿಯಾಗಿದೆ. ದುಡ್ಡು ಕೈಗೆ ಬೀಳದ ಮುನ್ನ ಡಾಕ್ಟರರು ಹೊರಗೆ ಬಾರರು ಎಂದು. ಆದರೆ ಮನವು ಧೈರ್ಯವನ್ನು ಕೊಟ್ಟಿತು, ‘ಇವನು ಖತೀಜಳಂತೆ ಬಡ ಕುಟೀರದಲ್ಲಿ ಜನಿಸಿರಲಾರ; ಸಿರಿವಂತರ ಅಂತಸ್ತಿನ ಮನೆಯಲ್ಲಿ ಬೆಳೆದಿರಬೇಕು’ ಎಂದು.

ಆಗಲೆ ಖಾನನ ತನುವನ್ನು ಧೈರ್ಯವು ಆವರಿಸಿಕೊಂಡಿತು. ಅಂತೆಯೇ ಕಾಲುಗಳು ಡಾಕ್ಟರರ ಸನಿಯಕ್ಕೆ ಅತಿ ಹುರುಪಿನಿಂದ ಹೆಜ್ಜೆಗಳನ್ನಿಕ್ಕಿ ಮುಂದೆ ಸಾಗಿದವು.

ಪುಣ್ಯಕ್ಕೆ ಡಾಕ್ಟರ ಸಾಹೇಬರು ಆರಾಮಾಗಿ ಕುರ್ಚಿಯ ಮೇಲೆ ಮಂಡಿಸಿ, ಹಾಗೆಯೇ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಕರೀಮ ಖಾನನು ಎಂದಿನ ನಮಸ್ಕಾರವನ್ನೇ ಅರ್ಪಿಸಿ ಮನವಿ ಮಾಡಿದ. “ಒಬ್ಬ ಅನಾಥ ಬಾಲಕ ಸೈಕಲಮೋಟರದಿಂದ ಬಿದ್ದಿದ್ದಾನೆ ಅವನ ರಕ್ಷಣೆಯಾಗಬೇಕು.”

“ಹೋಗು ಪುನಃ ಅದೇ ಹಾಳು ಅನಾಥರ ಮಾತು. ನನಗೆ ಸಮಯವಿಲ್ಲ.”

“ಹಾಗಲ್ಲ ಸ್ವಾಮಿ. ಐಶ್ವರ್ಯವಂತರಂತೆ ಉಡಿಗೆತೊಟ್ಟಿದ್ದಾನೆ. ಒಂದೆಡೆ ಹ್ಯಾಟು ಬಿದ್ದಿದೆ. ಮತ್ತೆ ಅವನ ಕೈಯಲ್ಲಿಯ ಚಿನ್ನದ ವಾಚು ಚೈನು ಎದ್ದು ಹೊಳೆಯುತ್ತಿದೆ. ಅವನು ಯಾರೋ ದೊಡ್ಡ ಮನುಷ್ಯರ ಮಗನಿರಬೇಕು? ಅವನ ತಂದೆಯಿಂದ ನಿಮಗೆ ಬಹಳ ಉಪಕಾರ ವಾದೀತು.”

“ಆಗಲಿ ಹೋಗು ಅವನನ್ನು ಇಲ್ಲಿ ಹೊತ್ತು ತಾ.”

“ನಾನೊಬ್ಬಗೆ ಆದೀತೆ?”

“ಹಾಗಾದರೆ ಕಾರು ಮಾಡು. ದೊಡ್ಡ ಮನುಷ್ಯರ ಮಗನಲ್ಲವೆ?”

“ಆಗಲಿ ಉಪಕಾರ” ಎನ್ನುತ್ತಾ ಮನದಲ್ಲೇ ಅಂದ. “ಅಲ್ಲಾನು ನಿನಗೆ ಇಷ್ಟರ ಮಟ್ಟಿಗಾದರೂ ಬುದ್ಧಿ ಕೊಟ್ಟನಲ್ಲ!”

೬

ಖಾನನು ಬಾಡಿಗೆ ಕಾರಿನೊಡನೆ ಬರುತಿದ್ದ. ಮೂವರು ಯುವಕರು ಕಾರನ್ನು ನಿಲ್ಲಿಸಿದರು.

ಅವರಲ್ಲೊಬ್ಬ ಕೇಳಿದ, “ಸೈಕಲಮೋಟರದ ಅವಗಡದಿಂದ ನನ್ನ ಸ್ನೇಹಿತ ಮೂರ್ಛೆ ಬಿದ್ದಿದ್ದಾನೆ. ಸ್ವಲ್ಪ ಕಾರನ್ನು ಅತ್ತ ತನ್ನಿ. ತುಂಬಾ ಉಪಕಾರವಾದೀತು, ಸಾಹೇಬರೆ.”

“ಪಾಪ! ಆ ಬಡಪಾಪಿಯ ಅವಸ್ಥೆಯನ್ನು ನನ್ನಿಂದ ನೋಡಲಿಕ್ಕೆ ಆಗಲಿಲ್ಲ. ಅದಕ್ಕೇನೆ ಕಾರು ತರುತ್ತಿದ್ದೇನೆ.”

ಆಗ ಇನ್ನೊಬ್ಬನು ಹೇಳಿದ. “ಅಣ್ಣಾ! ನಿನ್ನಿಂದ ಮರೆಯದ ಉಪಕಾರವಾಯಿತು. ಇಲ್ಲದಿದ್ದರೆ ಬಹಳ ತಡವಾಗುತಿತ್ತು. ನಾವು ಕಾರು ಹುಡುಕಿ ತರಬೇಕಾದರೆ ಎಷ್ಟು ಹೊತ್ತಾಗುತಿತ್ತೊ. ನಿಜವಾದ ಮುಸಲ್ಮಾನನ ಹೃದಯ ಅರಳಿದ ಹೂವಿಗಿಂತ ಮಿದುವು ಎಂಬುದನ್ನು ನಾನು ಇವತ್ತು ಕಲಿತೆ ಅಣ್ಣಾ! ನಿನಗೆ ಶತ ಧನ್ಯವಾದಗಳು.”

“ಅಯ್ಯೋ ಸ್ವಾಮಿ ಅಂಥ ಯೋಗ್ಯತೆ ನನ್ನಂಥ ಬಡವನಿಗೆಲ್ಲಿ? ಇಂಥ ಸಮಯದಲ್ಲಿ ನಾನು ಸಹಾಯಕ್ಕೆ ಬಾರದಿದ್ದರೆ, ಅಲ್ಲಾನ ಲೋಕದಲ್ಲಿ, ಅಲ್ಲಾನ ಎದುರು ಹೇಗೆ ನಿಲ್ಲಲಿ, ಅವನಿಗೆ ಏನೆಂದು ಉತ್ತರ ಕೊಡಲಿ. ಅಲ್ಲಾ ಸ್ವಾಮಿ! ಪಾಪ! ಈ ಅನಾಥ ಬಾಲಕ ಯಾರು?” ಖಾನನು ಕೇಳಿದ.

“ಇವನೊ? ಪಾಪ! ಏನು ಸಾಹೇಬರೆ ನೀವು ಡಾಕ್ಟರ ರಘುನಾಥರಾಯರ ಹೆಸರನ್ನು ಕೇಳಿಲ್ಲವೆ? ಇವನು ಅವರ ಮಗ!”

“ಡಾಕ್ಟರ ರಘುನಾಥರಾಯರ ಮಗ! ಏನು? ಡಾ. ರಘುನಾಥರಾಯರ ಮಗನೆ? ನನ್ನ ಮಗಳನ್ನು ಕೊಂದ ಆ ಕೊಲೆ ಪಾತಕಿ ರಘುನಾಥರಾಯರ ಮಗನೆ? ಡ್ರೈವರ ಸಾಹೇಬ, ಕಾರನ್ನು ಹಿಂದಿರುಗಿಸು. ಇಲ್ಲವಾದರೆ, ನಿನ್ನ ರಕ್ತವನ್ನು ಇಲ್ಲೇ ಹಿಂಡಿ ಹಾಕೇನು!” ರುದ್ರಾವೇಶದ ತುಟ್ಟ ತುದಿಗೆ ಏರಿದ್ದ. ಕರೀಮಖಾನ ಒದರಿದ. ಅದುದಾದರೂ ಏನೆಂಬ ವಿಷಯ ನಾಲ್ವರಿಗೂ ತಿಳಿಯಲಿಲ್ಲ. ಡಾಕ್ಟರರ ಮಗನ ಮೂವರು ಸ್ನೇಹಿತರು, ಆ ವಿಷಯದ ಹಿನ್ನೆಲೆಯನ್ನು ಕೇಳಿದರು. ಖಾನ ತನ್ನ ಮಗಳ ಕರುಣಾಜನಕ ಕಥೆಯನ್ನು ಹೇಳಿ ಅತ್ತದ್ದಷ್ಟೇ ಅಲ್ಲದೆ, ಈಗತಾನೆ ಡಾಕ್ಟರರನ್ನು ಕಂಡುಬಂದ ಸಂಗತಿಗಳನ್ನು ಆದ್ಯಂತವಾಗಿ ವಿವರಿಸಿದ. ಈಗ ಮಾತ್ರ ಮೂವರಿಗೂ ಖಾನನ ಹೃದಯದಲ್ಲಿ ಉದ್ಭವಿಸಿದ ಕೋಪದ ಉರಿಯನ್ನು ತಣಿಸುವುದು ಅಸಾಧ್ಯವೆಂದು ತೋರಿತು. ಖಾನನು ಸ್ವಲ್ಪ ಸಮಯ

—ಪುಟ ೧೬ಕ್ಕೆ

ಹಿಂದೂಸ್ಥಾನ

ಮುಂಬಯಿ

ಅಬ್ದುಲ್ ಗಫೂರ ಇಮಾಮಸಾಹೇಬ, ಛತ್ರೇಯಾಹ ಸುಬ್ಬದ ಎಂಬವರು ಮುಂಬಯಿ ಜೇಕಬ ಸರ್ಕಲಿನ ಹತ್ತರದ ಪೋಲೀಸ ಠಾಣೆಗೆ ಕಳೆದ ಸಪ್ಟಂಬರ ೩ ಕ್ಕೆ ಮುತ್ತಿಗೆ ಹಾಕಿ ಪೋಲೀಸನೊಬ್ಬನನ್ನು ತೀವ್ರ ಗಾಯಗೊಳಿಸಿದ್ದರಿಂದ ಸ್ಪೆಶಲ್ ಜಜ್ಜರ ಮುಂದೆ ಖಟ್ಲೆ ನಡೆದು ಅವರಿಗೆ ೧೦ವರ್ಷ ಸಶ್ರಮ ಶಿಕ್ಷೆ ವಿಧಿಸಲಾಯಿತು.

ಮುಂಬಯಿ ಮೇಯರರ ಎಂ. ಆಯ. ರಾವಜಿಯವರು ಆಕ್ರಮವಾಗಿ ಮತ್ತು ಅವಸರದಿಂದ ಆಯವ್ಯಯ ಪತ್ರಿಕೆಯನ್ನು ಪಾಸುಮಾಡಿಕೊಂಡರೆಂದು ಮುಂತಾಗಿ ಜಮನಾದಾಸ ಮೇಥಾರವರು ಅವರ ವಿರುದ್ಧ ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಿದ್ದರು. ಅಪರ ಚರ್ಚೆಯಾಗಿ ಪ್ರಚಂಡ ಬಹುಮತದಿಂದ ಅದು ನಿರಾಕೃತವಾಯಿತು.

ಎಪ್ರಿಲ ೨ ನೇ ದಿನಾಂಕ ಮುಂಬಯಿಯಲ್ಲಿ ಸೇರಲಿರುವ ನರೇಂದ್ರರ ಸಭೆಯಲ್ಲಿ ಸಂಸ್ಥಾನಗಳ ಭಾವಿಭವಿತವ್ಯತೆಯನ್ನು ಕುರಿತು ಮಹತ್ವದ ಹಾಗು ಕೊನೆಯ ನಿರ್ಣಯಗಳಾಗುವವೆಂದು ತಿಳಿಯುತ್ತದೆ. ನರೇಂದ್ರರ ಸಭೆಯ ನಂತರ ನರೇಂದ್ರ ಮಂಡಳದ ಸ್ಥಾಯೀ ಸಮಿತಿಯ ಸಭೆ ಜರುಗಲಿದೆ.

ಪುಣೆ ಜಿಲ್ಲಾ ಲೋಕಲ್ ಬೋರ್ಡ್.ಲೋಕಲ್ ಫಂಡನ್ನು ಏರಿಸಬೇಕೆಂದು ಮುಂಬಯಿ ಸರಕಾರ ಮಾಡಿದ ಸೂಚನೆಯನ್ನು ನಿರಾಕರಿಸಬೇಕೆಂದು ಕಾಂಗ್ರೆಸ ಭವನದಲ್ಲಿ ಕರೆಯಲಾಗಿದ್ದ ಮಹಾರಾಷ್ಟ್ರ ಸ್ಥಾನಿಕ ಸಂಸ್ಥೆಗಳ ಕಾಂಗ್ರೆಸ ಸದಸ್ಯರ ಸಭೆಯಲ್ಲಿ ಅಭಿಪ್ರಾಯ ವ್ಯಕ್ತ ಮಾಡಲಾಯಿತು.

ಕೇರಳ ಪ್ರಾಂತದ ಬೇಡಿಕೆಯು ಪಾಕಿಸ್ತಾನದಂತೆ ಭಾರತದಿಂದ ಸಿಡಿದುಹೋಗುವದಿಲ್ಲ, ಆದರೆ ಅದರಲ್ಲಿ ಅಂತರ್ಗತವಾಗಲು ಒಂದು ಸ್ವತಂತ್ರ ಪ್ರಾಂತ ಬೇಕೆಂಬುದಾಗಿ ಇದೆ. ಇದಕ್ಕೆ ಸಾಮ್ಯವಾದಿಗಳ ಬೆಂಬಲವಿದೆಂದು ಶ್ರೀ ಅಚ್ಯುತ ಪಟವರ್ಧನರು ಕೇರಳ ಏಕೀಕರಣ ಪರಿಷತ್ತಿನಲ್ಲಿ ಹೇಳಿದರು. ಜಯಪ್ರಕಾಶ ನಾರಾಯಣರು ಇದಕ್ಕೆ ಬೆಂಬಲ ಕೊಟ್ಟರು.

ನಾಲ್ವರು ವಿಸರ್ಜಿತ ಸೈನಿಕರು ಶಸ್ತ್ರಪಾಣಿಗಳಾಗಿ ಬಂದು ಸಾಂತಾಕ್ರೂಜದ ಸಮೀಪದಲ್ಲಿರುವ ಒಂದು ಹಳ್ಳಿಯಲ್ಲಿ ಇಬ್ಬರು ಸಾವಕಾರರನ್ನು ಗಾಯಗೊಳಿಸಿ ಬೆಳ್ಳಿ ಬಂಗಾರ ನಗದು ಹಣ ಮತ್ತು ಒಟ್ಟೆಯನ್ನು ದೋಚಿಕೊಂಡು ಹೋಗಿರುತ್ತಾರೆ.

ಮುಂಬಯಿ ವಿಶ್ವವಿದ್ಯಾಲಯದ ಮ್ಯಾಟ್ರಿಕ್ ಪರೀಕ್ಷೆಗೆ ಈ ವರ್ಷ ೪೧ ಸಾವಿರ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕುಳಿತಿದ್ದಾರೆ. ಕಳೆದವರ್ಷ ೩೮೬೧೪ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದರು.

ಮದ್ರಾಸ

ಕಾಂಗ್ರೆಸ್ ಅಧ್ಯಕ್ಷರಾದ ಆಚಾರ್ಯ ಕೃಪಲಾನಿಯವರು ಎರ್ನಾಕುಲಂಕ್ಕೆ ಹೋದಾಗ ಕೊಚ್ಚೀ ಮಹಾರಾಜರೊಡನೆ ಅರ್ಧ ಗಂಟೆಯ ವರೆಗೆ ವಿಚಾರವಿನಿಮಯ ಮಾಡಿದರು. ಈ ಮಾತುಕತೆ ನಂತರ ಮಹಾರಾಜರು ೩೦ ಸಾವಿರ ರೂಪಾಯಿಗಳ ಚೆಕ್ಕನ್ನು ಆಚಾರ್ಯ ಕೃಪಲಾನಿಯವರಿಗೆ ಕೊಟ್ಟರು. ರಾಷ್ಟ್ರಪತಿಗಳು ಕೊಚ್ಚೀ ಮಂತ್ರಿಗಳು ಮತ್ತು ಉಳಿದವರೊಡನೆಯೂ ಮಾತುಕತೆ ನಡೆಸಿದರು.

ಮದ್ರಾಸ ಪ್ರಾಂತದಲ್ಲಿ ೧೭ ನೇ ತಾರೀಕು ಪ್ರಾರಂಭವಾದ ಎಸ್. ಎಸ್. ಎಲ್. ಸಿ. ಪರೀಕ್ಷೆ ಪ್ರಶ್ನ ಪತ್ರಿಕೆಗಳು ಒಡೆದಿವೆಂದು ಕಂಡು ಬಂದದ್ದರಿಂದ ಇಡೀ ಪರೀಕ್ಷೆಯನ್ನೇ ರದ್ದುಗೊಳಿಸಲಾಗಿದೆ. ಈ ಸಲದಂತೆ ಹಿಂದೆಂದೂ ಪ್ರಶ್ನೆ ಕಾಗದಗಳು ಒಡೆದಿದ್ದಿಲ್ಲೆಂದೂ ಈಸಲ ಅವು ಎರಡಾಣೆಗೊಂದರಂತೆ ಮಾರಲ್ಪಟ್ಟವೆಯೆಂದೂ ತಿಳಿಯುತ್ತದೆ.

ಸಂಪು ಹೂಡಿದ ಮದ್ರಾಸ ಬಕಿಂಗಹ್ಯಾಮ ಮತ್ತು ಕರ್ನಾಟಕ ಮಿಲ್ಲಿನ ಕೆಲಸಗಾರರು ಕೂಲಿಕಾರ ಮಂತ್ರಿಗಳಾದ ಶ್ರೀ ಗಿರಿಯವರ ಮನೆಯ ಮೇಲೆ ದೌಡು ತೆಗೆದುಕೊಂಡು ಹೋಗಿದ್ದರು. ಕೆಲವರು ಅವರ ಮನೆಯಲ್ಲಿಯೂ ನುಗ್ಗಿದ್ದರು. ಕೂಲಿಕಾರರ ಈ ಅಸಭ್ಯ ವರ್ತನೆಯನ್ನು ಶ್ರೀ ಗಿರಿಯವರು ಜರಿದು ಏನಾದರೂ ಹೇಳುವದಾದರೆ ಪ್ರತಿನಿಧಿಗಳನ್ನು ಕಳಿಸಿ ಹೇಳಬೇಕೆಂದು ಹೇಳಿದರು.

ಮದ್ರಾಸದ ಗವರ್ನರರಾದ ಸರ್ ಆರ್ಚಿಬಾಲ್ಡ ನೈ ಇವರು ಚಿತ್ತೂರಿನ ಕಲೆಕ್ಟರ ಹಾಗು ಪೋಲೀಸ ಸುಪರಿಂಟೆಂಡೆಂಟರೊಂದಿಗೆ ತಿರುಪತಿಗೆ ಭೆಟ್ಟಿ ಕೊಟ್ಟರು. ದೇವಸ್ಥಾನದ ಕಮೀಶನರರು ಅವರನ್ನು ಸ್ವಾಗತಿಸಿ ದೇವಸ್ಥಾನದ ರತ್ನಗಳನ್ನು ತೋರಿಸಿದರು. ತಿರುಪತಿ ಪೌರ ಸಭೆಯು ಗವರ್ನರರನ್ನು ಬಿನ್ನವತ್ತಳೆಯಿಂದ ಗೌರವಿಸಿತು.

ಹೊಸದಿಲ್ಲಿ

ಬರುವ ಚಳಿಗಾಲದಲ್ಲಿ ಆಸ್ಟ್ರೇಲಿಯದಲ್ಲಿ ಸಂಚರಿಸಲಿರುವ ಭಾರತೀಯ ಕ್ರಿಕೆಟ ಗುಂಪಿಗೆ ಶ್ರೀ. ವಿ. ಎಂ. ಮರ್ಚಂಟರವರು ಕಪ್ತಾನರಾಗಿ ನೇಮಿಸಲ್ಪಟ್ಟಿರುವರು. ಅಮರನಾಥ, ಮುಸ್ತಾಕ ಅಲ್ಲಿ, ಮಂಕಡ, ಹಜಾರೆ, ಮೋದಿ, ಸಿ. ಎಸ್. ನಾಯಡು, ಗುಲಾಮಹಮ್ಮದ, ಸೊಹೊನಿ, ಅಮೀರ ಇಲಾಹಿ, ಜೆ. ಕೆ. ಇರಾಣಿ, ಪಿಸೋನ ಕೆ. ಎಂ. ರಾಂಗಣೇಕರ, ಜಿ. ಕಿಶನಚಂದ ಧಡಚಿ ಫಡಕರ, ಫಜಲಮಹಮ್ಮದ ಮತ್ತು ಎಚ್. ಆರ್. ಅಧಿಕಾರಿ ಇವರು ಉಳಿದ ಹುದ್ದರಿಗಳು.

ಮದ್ರಾಸ ಗಿರಣಿಯೊಡೆಯರಿಗೆ ಕೊಟ್ಟ ಬಟ್ಟೆಯಂತ್ರದ ಲೈಸನ್ಸನ್ನು ರದ್ದುಪಡಿಸುವದಿಲ್ಲೆಂದು ಹಿಂದುಸ್ತಾನ ಸರಕಾರ ಮದ್ರಾಸ ಸರಕಾರಕ್ಕೆ ತಿಳಿಸಿದ ಸಂಬಂಧದಲ್ಲಿ ಪ್ರಕಟನೆ ಹೊರಡಿಸಲಾಗಿದೆ.

ಹಿರಿದೇವಾಸ ಸಂಸ್ಥಾನದ ಈಗಿನ ಮಹಾರಾಜ ಸರ್ ವಿಕ್ರಮಸಿಂಹರಾಯರನ್ನು ದತ್ತಕ ತೆಗೆದುಕೊಳ್ಳಲು ಕೊಲ್ಹಾಪುರದ ಮಹಾರಾಣಿಯವರಿಗೆ ವೈಸರಾಯರು ಅಪ್ಪಣೆ ಕೊಟ್ಟಿದ್ದಾರೆ. ಸರ್ ವಿಕ್ರಮಸಿಂಹರು ೩೭ ವರ್ಷದವರಿರುವರು. ಮಾರ್ಚ ೩೧ ನೇ ತಾರೀಕು ಕೊಲ್ಹಾಪುರ ಅರಮನೆಯಲ್ಲಿ ದತ್ತಕ ಸಮಾರಂಭ ಜರಗುವದು.

ಅಂತರ್ ಏಶಿಯಾ ಪರಿಷತ್ತಿನ ಸ್ವಾಗತ ಸಮಿತಿಯ ಸಭೆ ಸೇರಿ ಮಂಡಳದ ಉಪಾಧ್ಯಕ್ಷರಾದ ಸರ್ ಶ್ರೀರಾಮರನ್ನು ಈ ಏಶಿಯಾ ಪರಿಷತ್ತಿನ ಸ್ವಾಗತಾಧ್ಯಕ್ಷರನ್ನಾಗಿ ಆರಿಸಿತು.

ಅಂತರ್‌ರಾಷ್ಟ್ರೀಯ ವ್ಯಾಪಾರಿ ಶಿಷ್ಟ ಮಂಡಳದ ಸದಸ್ಯರಾಗಿರುವ ಶ್ರೀ. ದ. ಪ. ಕರಮರಕರರು ೫ ನೇ ತಾರೀಕು ದಿಲ್ಲಿಯಿಂದ ಲಂಡನಿಗೆ ಹೊರಡುವರು. ಈ ಶಿಷ್ಟಮಂಡಳದ ಸದಸ್ಯರೆಲ್ಲ ೧೦ ಕ್ಕೆ ಜಿನೇವಾ ಮುಟ್ಟುವರು.

ಸಂಯುಕ್ತ ಪ್ರಾಂತ

ಸಂಯುಕ್ತ ಪ್ರಾಂತದಲ್ಲಿ ಇನ್ನು ಎರಡು ವರ್ಷಗಳಲ್ಲಿ ಎರಡು ಆಯುರ್ವೇದ ಮತ್ತು ಯುನಾನಿ ಕಾಲೇಜುಗಳನ್ನು ಎರಡು ಮೆಡಿಕಲ ಕಾಲೇಜುಗಳನ್ನು ಪ್ರಾರಂಭಿಸಲಾಗುವದಲ್ಲದೆ ಹಳ್ಳಿಗರಿಗಾಗಿ ೫೦೦ ಆಸ್ಪತ್ರೆಗಳನ್ನು ಸ್ಥಾಪಿಸಲಾಗುವದು ಎಂದು ಸ್ಥಾನಿಕ ಸ್ವರಾಜ್ಯಮಂತ್ರಿ ಶ್ರೀಮತಿ ವಿಜಯಲಕ್ಷ್ಮೀಯವರು ೧೪೩೩೦೩೦೦ ರೂ. ವೈದ್ಯಕೀಯ ಶಾಖೆಗಾಗಿ ಬೇಡಿಕೆಯನ್ನು ಮಂಡಿಸುತ್ತ ಹೇಳಿದರು.

ಕಾಶಿಯಲ್ಲಿ ದಂಗೆಯ ಸುದ್ದಿಗಳನ್ನು ಪ್ರಸಿದ್ಧಿಸುವ ಪೂರ್ವದಲ್ಲಿ ಸರಕಾರಿ ನಿಯಂತ್ರಣಾಧಿಕಾರಿಗೆ ತೋರಿಸಿ ಅನುಮತಿ ಪಡೆದುಕೊಳ್ಳಬೇಕೆಂದು ಕಾಶಿಯ ಜಿಲ್ಲಾ ಮ್ಯಾಜಿಸ್ಟ್ರೇಟರು ಆಜ ಸನ್ಮಾರ್ಗ ಸಂಸಾರ ಅಮೃತ ಬಜಾರ ಪತ್ರಿಕಾ ನ್ಯಾಶನಲ್ ಹೆರಾಲ್ಡ ಪತ್ರಿಕೆಗಳಿಗೆ ನೋಟೀಸ ಕೊಟ್ಟಿದ್ದಾರೆ ಈ ಆಜ್ಞೆ ೧೫ ದಿನಗಳ ವರೆಗೆ ಜಾರಿಯಲ್ಲಿದೆ.

ಪಂಜಾಬ

ಪಂಡಿತ ಜವಾಹರಲಾಲರು ಮೂರು ದಿನಗಳವರೆಗೆ ಪಂಜಾಬಿನ ದೊಂಬಿ ವಿಭಾಗದಲ್ಲಿ ಸಂಚರಿಸಿ ಬಂದ ಬಳಿಕ ಅಲ್ಲಿನ ಪರಿಸ್ಥಿತಿ ಸರ್ವಸಾಧಾರಣವಾಗಿ ಹಿಡಿತದಲ್ಲಿ ಬಂದಿದೆಂದು ಅಭಿಪ್ರಾಯಪಟ್ಟಿದ್ದಾರೆ. ಪಂಜಾಬದಲ್ಲಿ ನಡೆದುದೆಲ್ಲಕ್ಕೆ ಹೆಚ್ಚಾಗಿ ರಾಜಕೀಯ ಕಾರಣವಿದೆಂದೂ ಅವರು ಹೇಳಿದರು. ಅಲ್ಲಿನ ಘಟನೆಗಳನ್ನು ನೋಡಿ ಪಂಡಿತರು ಮರಮರನೆ ಮರುಗಿದರು. ಅಲ್ಲಿ ಇದಕ್ಕೂ ಉಗ್ರವಾದ ಉಪಾಯಗಳನ್ನು ಕೈಕೊಳ್ಳಲಾಗುವದೆಂದೂ ಅವರು ಹೇಳಿದರು.

ಹಿಂದೂ ಮಹಾಸಭೆಯ ಕಾರ್ಯದರ್ಶಿ ವಿ. ಜಿ. ದೇಶಪಾಂಡೆಯವರು ಪ್ರಾಂತದಿಂದ ಹೊರಗೆ ಹೋಗಬೇಕೆಂದು ವಿಧಿಸಿದ ಆಜ್ಞೆಯನ್ನು ಮುರಿದರೆಂದು ಸೆರೆಹಿಡಿಯಲ್ಪಟ್ಟಿರುವರು. ಲಾಹೋರಿನ ಒಂದು ಆಸ್ಪತ್ರೆಯಲ್ಲಿ ದೊಂಬಿಯಲ್ಲಿ ಗಾಯಗೊಂಡವರನ್ನು ಕಾಣುತಿರುವಾಗ ದೇಶಪಾಂಡೆಯವರು ಸೆರೆಹಿಡಿಯಲ್ಪಟ್ಟರು.

ಪಂಜಾಬಿನಲ್ಲಿ ೧೯೪೮ ರ ಜೂನದಲ್ಲಿ ಬ್ರಿಟಿಶ ಸರಕಾರದವರು ಅಧಿಕಾರವನ್ನೊಪ್ಪಿಸುವ ವರೆಗೆ ತಾತ್ಪೂರ್ತಿಕವೆಂದು ಎರಡು ಬೇರೆ ಆಡಳಿತವನ್ನು ಸಾಗಿಸುವ ಶಕ್ಯಾಶಕ್ಯತೆಯ ಸಂಬಂಧದಲ್ಲಿ ಶೀಖ ಧುರೀಣರಾದ ಗ್ಯಾನಿ ಕರ್ತಾರಸಿಂಗರು ಪಂಡಿತ ಜವಾಹರಲಾಲರ ಗೂಡೆ ಚರ್ಚೆ ನಡೆಸಿದರು. ಸೈನಿಕರಿಗೆ ಹೆಚ್ಚಿನ ಅಧಿಕಾರ ಪಂಜಾಬಿನಲ್ಲಿ ಕೊಡಲಾಗುವದೆಂದೂ ಕರ್ತಾರಸಿಂಗರು ಹೇಳಿದರು.

ಪಂಡಿತ ಜವಾಹರಲಾಲರು ಮುಲ್ತಾನಕ್ಕೆ ಹೋದುದರ ಫಲವಾಗಿ ಹಿಂದೂ ಮುಸಲ್ಮಾನರಲ್ಲಿ ಸೌಹಾರ್ದವನ್ನುಂಟುಮಾಡುವದಕ್ಕಾಗಿ ಶಾಂತಿಸ ರಕ್ಷವೊಂದು ಸ್ಥಾಪಿತವಾಯಿತು. ಹಿಂದು ಮತ್ತು ಶೀಖರಿಗೆ ಯಾವದೇ ಬಗೆಯ ಅಪಾಯವಾಗದಂತೆ ನೋಡಿಕೊಳ್ಳಲು ನವಾಬ ಮೇಜರ ಆಶಿರ ಹುಸೇನರು ಆಶ್ವಾಸನವನ್ನಿತ್ತರು.

ಪಂಜಾಬಿನಲ್ಲಿಯ ಸಂತ್ರಸ್ತರಿಗಾಗಿ ಪರಿಹಾರ ನಿಧಿಯನ್ನು ಸಂಗ್ರಹಿಸಬೇಕೆಂದು ನಿರ್ಧರಿಸಲಾಗಿದ್ದು ಅದಕ್ಕಾಗಿ ಸಹಾಯಮಾಡಬೇಕೆಂದು ಕಾಂಗ್ರೆಸ್ಸಿನ ಕೋಶಾಧ್ಯಕ್ಷ ಸರದಾರ ವಲ್ಲಭಭಾಯರು ಬಿನ್ನವಿಸಿಕೊಂಡಿದ್ದಾರೆ.

ಸಿಂಧ

ವೆಚ್ಚದ ವಿವರಗಳನ್ನು ನಿರ್ದಿಷ್ಟ ಅವಧಿಯೊಳಗೆ ಪೂರೈಸದಿದ್ದುದಕ್ಕಾಗಿ ಮಹಮ್ಮದ ಖಾನ ಜಾಂದಿಯಾ ಎಂ. ಎಲ್. ಎ. ಸಿಂಧ ಇವರನ್ನು ಪದಚ್ಯುತರನ್ನಾಗಿ ಮಾಡಲಾಗಿದೆ. ಐದು ವರುಷಗಳ ವರೆಗೆ ಇವರ- ಚುನಾವಣೆಗೆ ನಿಲ್ಲಬಾರದೆಂಬ ಹುಕುಮನ್ನು ವಿಧಿಸಲಾಗಿದೆ.

ಬಿಹಾರ

[illegible] ವರೆಂದು ಪತ್ನ ಅಭಿಪ್ರಾಯ. ಎಲ್ಲಿ [illegible] ಹತ್ಯಾಕಾಂಡ, ಕೊಳ್ಳೆ, ಸುಲಿಗೆ ಹಕಡಿವೆ. ಹುಡ್ಡೆಲ್ಲ ಕತ್ತಲೆ ಕವಿದಿದೆ. ಪಮ್ಮ ಭವಿಷ್ಯತ್ತಿನಲ್ಲಿ ವಿಶ್ವಾಸ ಬಗ್ಗೆ ಸಹಗೆ ಭೀಷಣವಾಗಿ ವಿರುಂಚನೆಯುಂಟಾಗಿದೆಂದು ಮುಂತಾಗಿ ಖಾನ ಅಬ್ದುಲ್ ಗಫರಖಾನರು ಪಾಟಣಾದಲ್ಲಿ ಶಿಬಿರ ಸಭೆಯೊಂದರಲ್ಲಿ ಮಾತಾಡುತ್ತ ಹೇಳಿದರು.

ಪಂಜಾಬದಲ್ಲಿ ಜಾತೀಯ ಗಲಭೆಯುಕಾಲಕ್ಕೆ ೭ ಅಂಚೆ ಕಚೇರಿಗಳು ಸುಟ್ಟು ಭಸ್ಮವಾದವು. ಇದರಿಂದ ಅಂಚೆ ಮತ್ತು ತಂತಿ ವ್ಯವಹಾರಕ್ಕೆ [illegible] ಕಟ್ಟಾಗಿದೆ.

ಬಂಗಾಲ

ಬಂಗಾಲ ಹಿಂದೂ ಮಹಾ ಸಭೆಯ ಆಶ್ರಯದಲ್ಲಿ ಬಂಗಾಲಿ ಹಿಂದುಗಳ ಸಭೆ ಸೇರಿ [illegible] ರಾಷ್ಟ್ರೀಯ ಜೀವನದ ನಿರ್ಮೂಲವಾಗದಾರದೆಂದಿದ್ದರೆ ಅದನ್ನು ಇಬ್ಭಾಗಿಸಿ ಹಿಂದುಗಳಿಗೆ ಪ್ರತ್ಯೇಕ ಪ್ರಾಂತಕೊಡಬೇಕು ಎಂಬ ಗೊತ್ತುವಳಿಯನ್ನು ಅಂಗೀಕರಿಸಲಾಯಿತು. ಬ್ರಿಟಿಶರು [illegible] ಕಾಲ್ತೆಗೆಯುವ ಮೊದಲು ಇಷ್ಟು ವ್ಯವಸ್ಥೆ ಮಾಡಬೇಕು ಎಂದು ಸಭೆಯ ಅಭಿಪ್ರಾಯವಾಗಿದೆ.

ಬಂಗಾಲದಲ್ಲಿ ಮುಸಲ್ಮಾನೇತರರು ಬಹುಸಂಖ್ಯಾಕರಾಗಿರುವ ಪ್ರಾಂತವನ್ನು ವಿಭಜಿಸಬೇಕೆಂದು ಕಲಕತ್ತೆಯ ೫೦ ಬ್ಯಾರಿಸ್ಟರರು ಪ್ರಕಟಣೆಯ ಮೂಲಕ ಅಭಿಪ್ರಾಯ ಪಟ್ಟಿದ್ದಾರೆ.

ಬೋಗ್ರಾದಲ್ಲಿ ೧೬ನೇ ತಾರೀಕು ರಾತ್ರಿ ಕೊಳ್ಳೆ ಸುಲಿಗೆ ನಡೆದು ಸುಮಾರು ೨ ಲಕ್ಷ ರೂಪಾಯಿಗಳ ಹಾನಿಯಾಯಿತೆಂದು ಬಂಗಾಲ ಸರಕಾರಕ್ಕೆ ತಿಳಿದು ಬಂದಿದೆ.

ಸರಹದ್ದ

ಹಜಾರಾ ಜಿಲ್ಹೆಯ ಹಸದಪುರ ಮತ್ತು ಅಬೋಟಾಬಾದ ತಹಶೀಲುಗಳಲ್ಲಿನ ಹಿಂದು ಮತ್ತು ಶೀಖರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗುತಿದೆ ಎಂದು ಗಡಿನಾಡ ಸರಕಾರದವರು ಪ್ರಕಟನೆ ಹೊರಡಿಸಿದ್ದಾರೆ. ಮಿಲಿಟರಿಯವರ ಸಹಾಯದಿಂದ ಪ್ರಾಂತದಲ್ಲೆಲ್ಲ ಶಾಂತಿಯನ್ನು ಪ್ರಸ್ಥಾಪಿಸಲು ಪ್ರಯತ್ನಿಸುತ್ತದೆ.

ಸರಹದ್ದದಲ್ಲಿ ನಡೆದ ಈ ಪುಂಡಾಟಿಕೆಗೆ ಲೀಗಿನ ಸಂಬಂಧವಿಲ್ಲೆಂದೂ ಲೀಗಿನ ಹೆಸರನ್ನು ಕೆಡಿಸುವದಕ್ಕಾಗಿ ಕೆಲ ಜನರನ್ನು ಬಾಡಿಗೆ ತೆಗೆದುಕೊಂಡು ಈ ಕಾರ್ಯಕ್ರಮ ನಡೆಸಲಾಗಿದೆಂದೂ ಈಗಿನ ಪರಿಸ್ಥಿತಿಯನ್ನು ನೋಡಿದರೆ ಇಲ್ಲಿ ಸರಕಾರವೇ ಇಲ್ಲೆಂದು ತೋರುತ್ತದೆಂದೂ ನಡುಗಾಲೀ ಸರಕಾರದ ಮಂತ್ರಿ ಅಬ್ದುಲ್ ರಾಬ ನಿಶ್ತಾರರು ಅಭಿಪ್ರಾಯ ಪಟ್ಟಿದ್ದಾರೆ.

ಪೇಶಾವರದ ಹತ್ತರ ರೇಲ್ವೆ ಮಾರ್ಗವನ್ನು ಅಡ್ಡಗಟ್ಟಿದ್ದ ಜನಸಂದಣಿ ಮೇಲೆ ಸೈನಿಕರು ಗುಂಡು ಹಾರಿಸಿದ್ದರಿಂದ ಒರ್ವ ಸತ್ತನು ಮತ್ತು ೧೦ ಜನರಿಗೆ ಗಾಯಗಳಾದವು. ಅಂದೇ ಅಲ್ಲಿ ೧೨ ನೇ ತಾರೀಕಿಗೆ ಪೇಶಾವರದಲ್ಲಿ ೧೭ ತಿವಿತಗಳಾದವು. ಮೂರು ಮರಣಾಂತಿಕವಾಗಿ ಪರಿಣಮಿಸಿದವು, ನಗರದಲ್ಲಿ ಸೈನಿಕರ ಕಾವಲಿದೆ.

ಮುಸ್ಲಿಂಲೀಗಿನವರ ಭಾಷಣಗಳೇ ದೊಂಬಿಗಳಿಗೆ ಕಾರಣ

ಮುಸಲ್ಮಾನರ ಮೇಲೆ ಸಾಮಾಜಿಕ ಬಹಿಷ್ಕಾರಕ್ಕೂ ಅವರೇ ಕಾರಣ

ಮುಂಬಯಿ ಶಾಸನ ಸಭೆಯಲ್ಲಿ ಗೃಹಮಂತ್ರಿಗಳ ಹೇಳಿಕೆ

ಮುಂಬಯಿ ಪ್ರಾಂತದಲ್ಲಿ ಉರ್ದು ವಿಶ್ವವಿದ್ಯಾಲಯ ಸ್ಥಾಪನೆಗೆ ಅವಕಾಶಕೊಡಬೇಕೆಂದು ಉತ್ತರ ಕನ್ನಡ ಜಿಲ್ಲೆಯ ಶ್ರೀ ಶಮುಶುದ್ದಿನರು ಕಡಿತದ ಸೂಚನೆಯನ್ನು ಮುಂದಿಸಿದ್ದರು. ಉರ್ದು ವಿದ್ಯಾರ್ಥಿಗಳ ಸಂಖ್ಯೆ ಸಾಕಷ್ಟಿಲ್ಲದ್ದರಿಂದ ವಿಶ್ವವಿದ್ಯಾಲಯ ಸ್ಥಾಪಿಸಲಾರೆವೆಂದು ಶಿಕ್ಷಣ ಮಂತ್ರಿಗಳಾದ ಶ್ರೀ ಬಿ. ಜಿ. ಖೇರರು ಉತ್ತರ ಕೊಟ್ಟರು. ಕಡಿತ ಸೂಚನೆ ಪ್ರಚಂಡ ಬಹುಮತದಿಂದ ನಿರಾಕರಿಸಲಾಯಿತು. ಕಾಂಗ್ರೆಸ ಆಡಳಿತದಲ್ಲಿ ಮುಸ್ಲಿಂ ಸಂಸ್ಕೃತಿ ಸುರಕ್ಷಿತವಾಗುಳಿಯುವದರಲ್ಲಿ ಸಂಶಯವಿಲ್ಲ. ಮೌಲಾನಾ ಅಜಾದರಂಥ ಅಂತರ್‌ರಾಷ್ಟ್ರೀಯ ಉರ್ದು ಪಂಡಿತರು ಕೇಂದ್ರ ಸರಕಾರದ ಶಿಕ್ಷಣ ಮಂತ್ರಿಗಳಾಗಿರುವಾಗ ಇಷ್ಟೊಂದು ಆತಂಕವೇಕೆ? ಉರ್ದು ಭಾಷೆ ಕೇವಲ ಮುಸಲ್ಮಾನರಿಗಷ್ಟೇ ಪ್ರೀತ್ಯಾಸ್ಪದವಾಗಿಲ್ಲ ಹಿಂದೂಗಳಿಗೂ ಇರುತ್ತದೆ. ಉರ್ದು ಭಾಷೆಯ ಅಭಿವೃದ್ಧಿಗೆ ಹಿಂದುಗಳೇ ಹೆಚ್ಚು ಸಹಾಯ ಮಾಡಿರುವ ರೆಂಬ ಐತಿಹಾಸಿಕ ಸತ್ಯವನ್ನು ಮರೆಯಲಾಗದೆಂದು ಮುಂತಾಗಿಯೂ ಶ್ರೀ ಖೇರರು ಕಡಿತದ ಸೂಚನೆಯನ್ನು ವಿರೋಧಿಸುತ್ತ ಹೇಳಿದರು.

ಮುಸಲ್ಮಾನ ಬಾಲಕರಿಗೆ ಉರ್ದು ಶಿಕ್ಷಣ ಕೊಡಲು ಹೆಚ್ಚು ಉತ್ತೇಜನ ಕಲ್ಪಿಸಿಕೊಡಬೇಕೆಂದು ವಿ. ಜಾಗೀರದಾರರು ಮಂಡಿಸಿದ ೧೦೦ ರೂ. ಕಡಿತದ ಸೂಚನೆಯೂ ಬಿದ್ದು ಹೋಯಿತು. ಅಹಮದ ಪಟೇಲರು ಶಾಲಾ ಕಟ್ಟಡಗಳ ವಿಷಯದಲ್ಲಿ ಮಂಡಿಸಿದ ಕಡಿತದ ಸೂಚನೆ ಚರ್ಚೆಯ ನಂತರ ಹಿಂತೆಗದುಕೊಳ್ಳಲ್ಪಟ್ಟಿತು.

ಪ್ರಾ. ಶಿಕ್ಷಕರ ಸಂಬಳ ಪ್ರಶ್ನೆ

ಅನಂತರ ಪ್ರಾಥಮಿಕ ಶಾಲಾ ಶಿಕ್ಷಕರ ಸಂಬಳದ ವಿಷಯದಲ್ಲಿ ಶ್ರೀ ಕರಂದೀಕರರು ಮುಂದಿಸಿದ ಕಡಿತದ ಸೂಚನೆ ಮೇಲೆ ಒಳ್ಳೆ ಸ್ವಾರಸ್ಯದ ಚರ್ಚೆ ನಡೆಯಿತು. ಈಗ ಕೊಡಮಾಡಿದ ಸಂಬಳ ಪ್ರಮಾಣ ಶಿಕ್ಷಕರಿಗೆ ಸಮಾಧಾನಕರವಿಲ್ಲ. ೧೯೨೦ರಲ್ಲಿ ಸಿದ್ಧವಾಗಿದ್ದ ಸಾಲೆ ಕಮಿಟಿಯ ಸಂಬಳ ಪ್ರಮಾಣಕ್ಕಿಂತ ಇದು ಕಡಿಮೆ ಇರುವದೆಂದೂ ಕರಂದೀಕರರು ವಾದಿಸಿದರು. ಶ್ರೀ ಟಿಳಕರು ಕಡಿತದ ಸೂಚನೆಯನ್ನು ವಿರೋಧಿಸಿದರು. ಮುಸ್ಲಿಂ ಲೀಗಿನ ಕಾಪೂರಿಯವರು ಸೂಚನೆಗೆ ಬೆಂಬಲ ಕೊಟ್ಟರು.

ಶ್ರೀ ಹುಕ್ಕೇರಿಕರರ ವಿರೋಧ

ಅನಂತರ ಧಾರವಾಡದ ಶ್ರೀ ರಾ. ಶ್ರೀ ಹುಕ್ಕೇರಿಕರರು ಕಡಿತದ ಸೂಚನೆಯನ್ನು ವಿರೋಧಿಸುತ್ತ ಈ ರೀತಿ ಹೇಳಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಗೂಡ ಕಳೆದ ಹತ್ತು ವರ್ಷಗಳಿಂದ ನನ್ನ ಸಂಪರ್ಕವಿದೆ. ಆದುದರಿಂದ ಈಗಿನ ಕೊಡುಗೆಯಿಂದ ಶಿಕ್ಷಕರಿಗೆ ಸಮಾಧಾನವಾಗಿರುವದೆಂದು ನಾನು ಹೇಳಲಿಲ್ಲ. ಆದಾಗ್ಯೂ ಪ್ರಾಥಮಿಕ ಶಿಕ್ಷಕರ ವಿಷಯದಲ್ಲಿ ನಮ್ಮ ಕರ್ತವ್ಯವನ್ನು ನಾನಾಗಲಿ ಸರಕಾರವಾಗಲಿ ಮರೆಯುವೆವೆಂದು ಭಾವಿಸಬೇಡಿರಿ. ಆದರೆ ವಿರೋಧಿಗಳು ಈ ವಿಷಯವನ್ನು ತಮ್ಮ ರಾಜಕೀಯ ಧ್ಯೇಯಸಾಧನೆಗೆ ಉಪಯೋಗಿಸುತಿರುವರು. ಇದಕ್ಕೂ ಮೊದಲು ಪ್ರಾಥಮಿಕ ಶಿಕ್ಷಕರಿಗಾಗಿ ಕಿಂಚಿತ್ತಾದರೂ ಮಾಡದ ಇವರು ಈಗ ಮಾತ್ರ ಮುಂದೆ ಬಂದಿರುವರು. ಶಿಕ್ಷಕರ ಬಗ್ಗೆ ಇವರಿಗೆ ನಿಜವಾಗಿ ಕಳಕಳಿಯಿದ್ದರೆ ಇನ್ನೂ ಅಲ್ಪವೇತನದಲ್ಲಿ ಕೊಳಲುತಿರುವ ಮಾಧ್ಯಮಿಕ ಹಾಗೂ ಕಾಲೇಜ ಶಿಕ್ಷಕರ ಬೆನ್ನು ಕಟ್ಟಿ ಹೋರಾಡಲಿ ಎಂದೆಂದರು.

ಮಾನ್ಯ ಶ್ರೀ ಖೇರರು ಕೊನೆಯಲ್ಲಿ ಚರ್ಚೆಗೆ ಉತ್ತರ ಕೊಟ್ಟ ನಂತರ ಕಡಿತದ ಸೂಚನೆ ಬಿದ್ದು ಹೋಯಿತು. ಕ್ವಿನಾಯಿನ್ ಕಡಿಮೆ ಇದ್ದುದರಿಂದ ಇದು ವರೆಗೆ ವೈದ್ಯ ಹಕೀಮರಿಗೆ ಅದನ್ನು ಕೊಡಲಾಗುತಿಲ್ಲ. ಪ್ರಯೋಗವೆಂದು ರಜಿಸ್ಟರಾದ ವೈದ್ಯ ಮತ್ತು ಹಕೀಮರಿಗೆ ೩ ತಿಂಗಳು ಮಟ್ಟಿಗೆ ಕ್ವಿನಾಯಿನ್ ಕೊಡಲು ಹೇಳಿದೆ. ಮುಂಬಯಿ ಪ್ರಾಂತದಲ್ಲಿ ೧೯೩೮ ನೇ ಇಸ್ವಿ ಕಾಯದೆಯನ್ವಯ ರಜಿಸ್ಟರಾದ ೧೧೦೫೫ ವೈದ್ಯರೂ ೧೫೦೦ ಹಕೀಮರು ಇರುವರೆಂದು ಮುಂತಾಗಿ ಆರೋಗ್ಯ ಮಂತ್ರಿಗಳಾದ ಡಾ. ಗಿಲ್ಡರರು ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ಹೇಳಿದರು. ಪ್ರಾಂತದಲ್ಲಿ ವೈದ್ಯರು ಹಕೀಮರಿಗೆ ಹೆಚ್ಚೆಚ್ಚು ಸೌಕರ್ಯ ಕೊಡಲಾಗುತಿದೆಂದೂ ಹೇಳಿದರು.

ಖಾನೆ ಮುಸ್ಲಿಂರಿಗೆ ಪರಿಹಾರ ಕೊಟ್ಟಿತ್ತು

ಕಳೆದ ಅಕ್ಟೋಬರ ನವಂಬರ ತಿಂಗಳಲ್ಲಿ ಸರಕಾರ ಕುಲಾಬಾ ಜಿಲ್ಹೆಯ ಮುಸಲ್ಮಾನರ ಆಸ್ತಿಪಾಸ್ತಿಗಳನ್ನು ಸಂರಕ್ಷಿಸುವದರಲ್ಲಿ ತಪ್ಪಿತೆಂದು ಎಂ ಎ ಭೈಜಿಯವರು ಪೋಲೀಸ ಖಾತೆಯ ಬೇಡಿಕೆಯಲ್ಲಿ ಕಡಿತವನ್ನು ಸೂಚಿಸಿದರು. ಕಾರವಾರದ ಶಮುಸುದ್ದೀನರು ಬೆಂಬಲ ಕೊಟ್ಟರು. ಉಪಮಂತ್ರಿಗಳಾದ ಎಸ್ ಕೆ. ಕುಂಕೆಯವರು ಆರೋಪಗಳನ್ನೆಲ್ಲ ಅಲ್ಲಗಳೆದು ಮುಸ್ಲಿಂರಿಗೆ ಯೋಗ್ಯ ಪರಿಹಾರ ಕೊಡಲಾಗಿದೆಂದು ಹೇಳಿದರು. ಮುಸ್ಲಿಂಲೀಗ ಸದಸ್ಯರ ಭಾಷಣ ಪ್ರಸ್ತುತಕ್ಕೆ ಸಂಬಂಧ ಪಟ್ಟಿದ್ದಿದೆಯೆ ಎಂದು ಗೃಹಮಂತ್ರಿಗಳು ಕೇಳಿದರು. ವೈಮನಸ್ಸನ್ನು ಹುಟ್ಟಿಸುವಂಥ ಭಾಷಣ ಮಾಡಬೇಡಿರೆಂದು ಅಧ್ಯಕ್ಷರು ಭಾಷಣಕಾರರಿಗೆ ಸೂಚಿಸಿದರು. ಅನಂತರ ಶ್ರೀ ಖಾನರು ಒಂದಿಲ್ಲೊಂದು ದಿನ ಈ ಶಾಸನ ಸಭೆಯ ನಾಯಕರು ತಮ್ಮ ತಮ್ಮ ಸ್ಥಾನವನ್ನು ತೆರವು ಮಾಡಿ... ಶ್ರೀ ಬಿ. ಜಿ. ಖೇರ ಈಗಿಂದೀಗ ......

ಜಾತೀಯ ದಂಗೆಯಲ್ಲಿ ಮುಸ್ಲಿಂರು ತೊಡಗಬಾರದು ಎಂದು ಕುಲಾಬಾದ ಹಿಂದುಗಳು ಅಲ್ಲಿಯ ಮುಸ್ಲಿಂರಿಂದ ಬರೆಸಿಕೊಂಡಿದ್ದಾರೆಂದು ಮುಂತಾಗಿಯೂ ಖಾನರು ಆರೋಪಿಸಿದರು.

ಜಿನ್ನಾರ ಅಂಚೆ ಕಾರ್ಡು!

ಗೃಹಮಂತ್ರಿಗಳಾದ ಶ್ರೀ ಮುರಾರಜಿಯವರು ಈ ರೀತಿ ಉತ್ತರಿಸಿದರು. ಕುಲಾಬಾದಲ್ಲಿ ಸಂಭವಿಸಿದ ಘಟನೆಗಾಗಿ ನಮಗೆ ಕೆಡಕೆನಿಸಿದೆ ಆದರೆ ಸರಕಾರದವರನ್ನು ಟೀಕಿಸಿದವರು ಆ ಪರಿಸ್ಥಿತಿಯ ನಿರ್ಮಾಣಕ್ಕೆ ತಾವೆಷ್ಟರ ಮಟ್ಟಿಗೆ ಕಾರಣರಿರುವರೆಂಬುದನ್ನು ಮರೆತಂತೆ ತೋರುತ್ತದೆ. ಸಾಮಾಜಿಕ ಬಹಿಷ್ಕಾರದ ಬಗ್ಗೆ ಹೇಳಬೇಕೆಂದರೆ ಮುಸಲ್ಮಾನರೆ ಆ ಪ್ರಯತ್ನ ನಡೆಸಿದರು. ನಾನು ಅಲ್ಲಿಗೆ ಹೋದಾಗ ಮುಸ್ಲಿಂರು ಮುಸ್ಲಿಂರಿಗೇ ಮಾರಾಟ ಮಾಡುತಿದ್ದ ಜಿನ್ನಾರ ಮುಖಮುದ್ರೆಯ ಪೋಸ್ಟ ಕಾರ್ಡು ಅಚಿತ್ರದ ಬುಡದಲ್ಲಿ ಮುಸ್ಲಿಂರು ಮುಸ್ಲಿಂರೊಡನೆ ವ್ಯವಹಾರ ನಡೆಸಬೇಕು ಎಂದು ಆದೇಶಿಸುವ ಉರ್ದು ಚರಣಗಳಿದ್ದುದು ನನಗೆ ದೊರೆಯಿತು. ಇಂಥ ಮುಸ್ಲಿಂರಿಗೆ ಸಾಮಾಜಿಕ ಬಹಿಷ್ಕಾರವನ್ನು ಹಾಕಿದರೆ ಅವರು ಅದಕ್ಕಾಗಿ ಹೆರವರನ್ನು ಏಕೆ ದೂಷಿಸಬೇಕು? ಶಾಂತಿ ಸುವ್ಯವಸ್ಥೆಯನ್ನು ಕಾಯ್ದುಕೊಳ್ಳುವದು ಸರಕಾರದ ಕರ್ತವ್ಯವಾಗಿದೆ. ಆದರೆ ವಿರೋಧಿಗಳು ಸಂಯಮ ತೋರಿಸಬೇಕು ಸರಕಾರದ ಕಾರ್ಯದಲ್ಲಿ ಅವರೊಡನೆ ಸಹಕರಿಸಬೇಕು ಎಂದು ಮುಂತಾಗಿ ಹೇಳಿದರು. ಕಡಿತದ ಸೂಚನೆಯನ್ನು ಮತಕ್ಕೆ ಹಾಕಲಾಗಿ ೭೮ ವಿರುದ್ಧ ೨೪ ಮತಗಳಿಂದ ಅದು ಬಿದ್ದು ಹೋಯಿತು.

'ಇಲ್ಲಿಯ ಪೋಲೀಸರನ್ನು ಕಂಡರೆ ಜನರು ಹೆದರುತ್ತಾರೆ. ಇಂಗ್ಲಂಡ ಅಮೇರಿಕೆಗಳಲ್ಲಿ ಪೋಲೀಸರು ಜನರ ಸೇವಕರಿದ್ದಾರೆ. ಇಲ್ಲಿಯವರೂ ಅದರಂತಾಗಲಿ' ಎಂದು ಚಕ್ರನಾರಾಯಣರು ಕಡಿತದ ಸೂಚನೆ ಮಂಡಿಸಿದರು. ಶ್ರೀ ಟಿಳಕರು ಪೋಲೀಸ ಖಾತೆಯ ಆಡಳಿತ ಬಗ್ಗೆ ಹಲವು ಸೂಚನೆಗಳನ್ನು ಮಾಡುತ್ತ ಸಮ್ಮಿಶ್ರ ಮಂತ್ರಿಮಂಡಲವನ್ನು ಸ್ಥಾಪಿಸಿದರೆ ಪರಿಸ್ಥಿತಿ ಸುಧಾರಿಸಬಹುದೆಂದು ಅಭಿಪ್ರಾಯಪಟ್ಟರು. ಲೀಗಿನವರು ಈ ಸೂಚನೆಗೆ ಬೆಂಬಲ ಕೊಡುತ್ತ ಅಹಮ್ಮದಾಬಾದ ಮುಂಬಯಿಗಳಲ್ಲಿ ಪೋಲೀಸರು ಇತ್ತೀಚೆ ಹಿಂದು ಪಕ್ಷಪಾತಿಗಳಾಗಿ ವರ್ತಿಸಿದರೆಂದು ಹೇಳಿದರು.

ಮಾನ್ಯಮಂತ್ರಿಗಳ ಉತ್ತರ

ಮಾನ್ಯಮಂತ್ರಿ ಮುರಾರಜಿಯವರು ಈ ರೀತಿ ಉತ್ತರ ಕೊಟ್ಟರು. ಈಗ ಮಾಡಲಾದ ಟೀಕೆಯಲ್ಲಿ ಪೋಲೀಸ ಖಾತೆಯ ಧೋರಣದ ಬಗ್ಗೆ ಮತ್ತು ದಂಗೆಗಳ ರೀತಿಯ ಬಗ್ಗೆ ಎಂದು ಎರಡು ಭಾಗ ಮಾಡಬಹುದು ಎರಡನೇ ಭಾಗದ ಬಗ್ಗೆ ನನ್ನಷ್ಟು ಬೇರೆ ಯಾರಿಗೂ ಕೆಡಕೆನಿಸಲಿಲ್ಲ ಸದ್ಯದ ಪರಿಸ್ಥಿತಿಯೇ ಅಸಾಮಾನ್ಯವಾಗಿದೆ. ಅನೇಕ ಮುಖಂಡರ ಭಾಷಣಗಳು ದಂಗೆಗೆ ಪ್ರೋತ್ಸಾಹನೆಯನ್ನಿತ್ತಿವೆ. ಮಳೆಗಾಳಿಯನ್ನದೆ ಬಿಸಿಲು ಚಳಿಯನ್ನದೆ ದುಡಿಯುವ ಪೋಲೀಸರಿಗೆ ಜನರ ಸಹಕಾರ ದೊರೆಯದಿದ್ದರೆ ಅವರು ಸೋಲುವದು ಸಹಜ. ಆರೋಪಗಳನ್ನು ಹೊರಿಸಿ ಕೀಳು ಮಾತಾಡುವದು ಸುಲಭ ಎಂದು ಮುಂತಾಗಿ ಮಂತ್ರಿಗಳು ಹೇಳಿದರು. ಕೀಳು ಮಾತಾಡುವದು ಎಂಬ ಶಬ್ದಕ್ಕೆ ಲೀಗಿನವರು ಆಕ್ಷೇಪಿಸಿದ್ದರಿಂದ ಅಧ್ಯಕ್ಷರ ವಿನಂತಿಯ ಮೇರೆಗೆ ಮಂತ್ರಿಗಳು ಆ ಶಬ್ದವನ್ನು ಹಿಂತೆಗೆದುಕೊಂಡರು. ಬಂಗಾಲ ದಂಗೆಯ ವಿಚಾರಣೆ ನಡೆಯಬೇಕೆಂದು ಅಲ್ಲಿ ಕೇಳಿಕೊಂಡಿದ್ದರಿಂದ ಮುಂಬಯಿ ದಂಗೆಯ ವಿಚಾರಣೆಯು ಆಗಬೇಕೆಂದು ಇಲ್ಲಿಯ ವಿರೋಧ ಪಕ್ಷದವರು ಕೇಳಿದರು ಎಂದು ಮಂತ್ರಿಗಳು ಹೇಳಿದ್ದನ್ನು ಲೀಗ ಸದಸ್ಯರು ಪ್ರತಿಭಟಿಸಿದರು. ಮಂತ್ರಿಮಂಡಲ ರಾಜೀನಾಮೆ ಕೊಡಬೇಕೆಂದು ವಿರೋಧ ಪಕ್ಷದವರು ಕೇಳುವದು ಸುಲಭ. ಆದರೆ ಜನಹಿತಕ್ಕಾಗಿ ಬಂದ ಮಂತ್ರಿಮಂಡಳ ತನ್ನ ಕೆಲಸವನ್ನು ಜನರು ಬೇಡೆನ್ನುವ ವರೆಗೆ ಸಾಗಿಸಲಿಚ್ಛಿಸುವರು ಎಂದು ಮುಂತಾಗಿ ಹೇಳಿದರು. ಕಡಿತದ ಸೂಚನೆ ಬಿದ್ದು ಹೋಯಿತು.

ಮಹಾತ್ಮರ ಗಾಡಿ ಉರುಳಿಸುವ ಪ್ರಯತ್ನ

ಕಳೆದ ಜುಲೈದಲ್ಲಿ ನೇರಳ ರೇಲ ನಿಲ್ದಾಣದ ಹತ್ತಿರ ಮಹಾತ್ಮರ ಗಾಡಿಯನ್ನುರುಳಿಸುವ ಪ್ರಯತ್ನ ನಡೆದುದರ ಸಂಬಂಧದಲ್ಲಿ ೧೮ ನೇ ತಾರೀಕು ಪ್ರಶ್ನೋತ್ತರ ನಡೆಯಿತು. ಕರಂದೀಕರರ ಅವಶ್ಯಕ ಪ್ರಶ್ನೆಗೆ ಪೋಲೀಸ ಸಬ್ ಇನ್ಸ್‌ಪೆಕ್ಟರರು ಘಟನೆಯ ಸ್ಥಳಕ್ಕೆ ಮೊದಲು ಹೋದಾಗ ಅವರಿಗೆ ಅಲ್ಲಿ ಒಂದು ಗುಂಡು ಸಿಕ್ಕಿರುತ್ತದೆಂದು ಗೃಹಮಂತ್ರಿಗಳು ಉತ್ತರ ಕೊಟ್ಟರು. ೧೯೪೬ ಫೆಬ್ರುವರಿಯಲ್ಲಿ ಮುಂಬಯಿಯಲ್ಲಿ ನಡೆದ ನಾವಿಕರ ಬಂಡಾಯದಲ್ಲಿ ಅಕಬರ ಹಡಗದಿಂದ ದೋಚಿಕೊಂಡು ಹೋದ ಗುಂಡುಗಳನ್ನು ಸರಿ ಹೋಲುತ್ತದೆಯೆ ಆ ಗುಂಡು, ಎಂದು ಕೇಳಿದ್ದಕ್ಕೆ ಈ ಬಗ್ಗೆ ವಿಚಾರಣೆ ನಡೆದಿದೆಯೆಂದು ಮುರಾರಜಿಯವರು ಹೇಳಿದರು. ಠಾಣಾ ಜಿಲ್ಹೆಯ ಪೋಲೀಸ ಸುಪರಿಂಟೆಂಡೆಂಟ ಶರೀಫಖಾನರು ಬಂಡಾಯ ನಡೆದಾಗ ಅಕಬರ ಹಡಗದಿಂದ ಠಾಣಾ ಪೋಲೀಸ ಕಚೇರಿಗೆ ಸ್ಥಳಾಂತರಿಸಿದ ಮದ್ದು ಗುಂಡುಗಳ ಪಂಚನಾಮೆ ಮಾಡಿರುವರು. ಶರೀಫ ಖಾನರು ಅವುಗಳಲ್ಲಿ ಕೆಲವನ್ನು ತಮ್ಮ ಕಡೆಗಿಟ್ಟುಕೊಂಡಿದ್ದಾರೊ ಎಂಬ ಬಗ್ಗೆಯೂ ವಿಚಾರಣೆ ನಡೆಸಿದೆ. ಡೆ. ಪೊ. ಸುಪರಿಂಟೆಂಡೆಂಟ ಬೂರಿಂಗ ಪೋಲೀಸ ತಪಾಸಣೆಯ ದಿನ ಅಂಬರನಾಥಕ್ಕೆ ಬರಬೇಕಾಗಿತ್ತು ಆದರೆ ಅವರು ಆ ದಿನ ಕಲ್ಯಾಣದಲ್ಲಿದ್ದುದು ನಿಜವೆ? ಹಾಗೆ ಸಿದ್ಧ ಮಾಡಲು ಕಾಗದ ಪತ್ರಗಳಲ್ಲಿ ಎಲ್ಲಿಯೂ ಉಲ್ಲೇಖವಿಲ್ಲೆಂದೂ ಮಂತ್ರಿಗಳು ಹೇಳಿದರು.

ಪರಿಶೀಲಕ ಸಮಿತಿಯಿಂದ ತಿದ್ದುಪಡಿಯಾಗಿ ಬಾದ ಮುಂಬಯಿ ಸಾರ್ವಜನಿಕ ಸಂರಕ್ಷಿತತೆಯ ಮಸೂದೆಯ ಎರಡನೆ ವಾಚನ ೧೮ ಕ್ಕೆ ಪ್ರಾರಂಭವಾಯಿತು ಇಡೀ ರಾತ್ರಿಯೆಲ್ಲ ಸಭೆ ಸೇರಿ ಈ ಮಸೂದೆಯ ಮೂರನೇ ವಾಚನ ಸ್ವೀಕೃತವಾಯಿತು. ಇದನ್ನು ಪ್ರತಿಭಟಿಸುವದಕ್ಕಾಗಿ ಮುಸ್ಲಿಂ ಲೀಗಿನವರು ಸಭಾತ್ಯಾಗ ಮಾಡಿದರು.

ಮದ್ರಾಸ ಮಂತ್ರಿಮಂಡಳದ ರಾಜೀನಾಮೆ

ಆಯುವ್ಯಯ ಪತ್ರ ಪಾಸಾಗುವ ವರೆಗೆ ಅಧಿಕಾರದಲ್ಲುಳಿವರು

ಮದ್ರಾಸ ಶಾಸನ ಸಭೆಯ ಕಾರ್ಯಕಲಾಪ

ಮದ್ರಾಸದ ಮುಖ್ಯ ಮಂತ್ರಿಗಳಾದ ಶ್ರೀ ಟ ಪ್ರಕಾಶಂರು ತಮ್ಮ ಮಂತ್ರಿಮಂಡಳದ ರಾಜೀನಾಮೆಯನ್ನು ಗವರ್ನರರಿಗೆ ಒಪ್ಪಿಸಿದರು. ಆದರೆ ಈ ವರ್ಷದ ಆಯುವ್ಯಯ ಪತ್ರಿಕೆಯನ್ನು ಸದ್ಯದ ಮಂತ್ರಿಮಂಡಳವೆ ಸಿದ್ಧಪಡಿಸಿದ್ದರಿಂದ ಅದು ಸ್ವೀಕೃತವಾಗುವ ವರೆಗೆ ಈಗಿನ ಮಂತ್ರಿಮಂಡಳವೆ ಅಧಿಕಾರದಲ್ಲುಳಿಯಬೇಕೆಂದು ಗವರ್ನರರು ಬಿನ್ನವಿಸಿಕೊಂಡ ಮೇರೆಗೆ ಪ್ರಕಾಶಂ ಮಂತ್ರಿಮಂಡಳ ಅಧಿಕಾರದಲ್ಲುಳಿಯುವದು.

ಕಾಂಗ್ರೆಸ ಪಕ್ಷದ ಸಭೆ ಮೊದಲು ಪ್ರಸಿದ್ಧವಾದಂತೆ ೨೧ ನೇ ತಾರೀಕು ಮಧ್ಯಾನ್ಹ ೩ ಗಂಟೆಗೆ ಕೂಡುವದು. ಅಷ್ಟರೊಳಗಾಗಿ ಕಾಂಗ್ರೆಸ ಪಕ್ಷದಲ್ಲಿ ಒಡಂಬಡಿಕೆಯಾಗದಿದ್ದರೆ ಬಹುಮತದ ನಿರ್ಣಯದಂತೆ ನಡೆಯುವುದಾಗಿ ರಾಷ್ಟ್ರಪತಿ ಅಚಾರ್ಯ ಕೃಪಲಾನಿಯವರು ಹೇಳಿದ್ದಾರೆ. ಕಾಂಗ್ರೆಸ ಸದಸ್ಯರಲ್ಲಿ ಐಕ್ಯವನ್ನುಂಟುಮಾಡಲು ನೆಲ್ಲೂರಿನ ಶ್ರೀ ಪೊಟ್ಟಿ ಶ್ರೀರಾಮುಲು ಎಂಬ ಕಾಂಗ್ರೆಸ್ ಕಾರ್ಯಕರ್ತರು ಆಮರಣ ಉಪವಾಸವನ್ನು ಪ್ರಾರಂಭಿಸಿದ್ದಾರೆ. ಶ್ರೀ ರಾಮುಲುರವರು ತಮ್ಮ ಈ ನಿರ್ಧಾರವನ್ನು ಸೂಚಿಸುವ ಫಲಕವನ್ನು ಹಿಡಿದುಕೊಂಡು ಶಾಸನ ಸಭೆಯ ಆವರಣದಲ್ಲಿ ತಿರುಗಾಡುತಿದ್ದುದು ಕಂಡುಬಂತು ಕಾಂಗ್ರೆಸ್ ಪಕ್ಷದ ಸದಸ್ಯರು ತಮ್ಮೊಳಗಿನ ಭೇದಭಾವಗಳನ್ನು ಮರೆತು ಕಾಂಗ್ರೆಸ್ ಅಧ್ಯಕ್ಷರಾದ ಅಚಾರ್ಯ ಕೃಪಲಾನಿಯವರಿಗೆ ಒಪ್ಪಿಗೆಯಾಗುವ ರೀತಿಯಲ್ಲಿ ಒಳ್ಳೆ ಆಡಳಿತಗಾರರನ್ನೊಳಗೊಂಡ ಮಂತ್ರಿ ಮಂಡಳವನ್ನು ರಚಿಸಿದಾಕ್ಷಣ ತಾವು ತಮ್ಮ ಉಪವಾಸದ ಪಾರಣೆ ಮಾಡುವದಾಗಿ ಶ್ರೀ ರಾಮುಲುರವರು ಸಾರಿದ್ದಾರೆ.

ಶಾಸನ ಸಭೆಯಲ್ಲಿ ಆಯವ್ಯಯ ಪತ್ರಿಕೆಯ ಚರ್ಚೆ ನಡೆದಿದೆ ಅಬಕಾರಿಮಂತ್ರಿ ಶ್ರೀ ಕೋಟರೆಡ್ಡಿಯವರು ತಮ್ಮ ಖಾತೆಗಾಗಿ ೫೮೩೪೦೦೦ ರೂಪಾಯಿಗಳ ಬೇಡಿಕೆಯನ್ನು ಮಂಡಿಸಿದರು. ಸರಕಾರ ಈ ಸಲ ಮತ್ತೆ ೮ ಜಿಲ್ಹೆಗಳಲ್ಲಿ ಮದ್ಯಪಾನ ಪ್ರತಿಬಂಧವನ್ನು ಕೈಕೊಂಡದ್ದು ಸರಿಯಾದುದಲ್ಲ, ಸಲಹೆ ಕೊಟ್ಟವರು ತಪ್ಪಿದ್ದಾರೆ. ಸರಕಾರ ಈ ಮದ್ಯಪಾನ ನಿರೋಧವನ್ನು ಬಿಟ್ಟು ಶಿಕ್ಷಣ ಪ್ರಸಾರವನ್ನು ಕೈಕೊಂಡು ಜನತೆಯ ಅಜ್ಞಾನವನ್ನು ಹೋಗಲಾಡಿಸಬೇಕು ಎಂದು ಸರ್ ಸ್ಟು ಅರ್ಟರು ಕಡಿತದ ಸೂಚನೆ ಮಂಡಿಸುತ್ತ ಹೇಳಿದರು. ಮುಸ್ಲಿಂ ಲೀಗಿನವರೂ ಒಂದು ಕಡಿತದ ಸೂಚನೆ ಮಂಡಿಸಿದರು. ಮಂತ್ರಿಗಳು ಉತ್ತರಿಸುತ್ತ ಮದ್ಯಪಾನ ಪ್ರತಿಬಂಧ ಧೋರಣವನ್ನು ಸರಕಾರ ಕೈಕೊಂಡಂದಿನಿಂದ ಅಪರಾಧಗಳ ಸಂಖ್ಯೆ ಕಡಿಮೆಯಾಗಿದೆಂದು ಹೇಳಿದರು. ಸೂಚನೆಗಳೆರಡೂ ಹಿಂತೆಗೆದುಕೊಳ್ಳಲ್ಪಟ್ಟವು.

ಕಮ್ಯುನಿಸ್ಟ ಗೂಢಚಾರರು

ಮದ್ರಾಸ ಸರಕಾರದ ಸೆಕ್ರೆಟರಿಯೆಟನಲ್ಲಿ ಕಮ್ಯುನಿಸ್ಟ ಗೂಢಚಾರರಿರಬಹದು. ಇದರಲ್ಲಿ ಆಶ್ಚರ್ಯವೇನೂ ಇಲ್ಲ ಎಂದು ಮುಖ್ಯ ಮಂತ್ರಿ ಶ್ರೀ ಪ್ರಕಾಶಂರು ಪ್ರಶ್ನೋತ್ತರ ಸಮಯದಲ್ಲಿ ಹೇಳಿದರು. ಪ್ರಾಂತದಲ್ಲಿ ಕಮ್ಯುನಿಸ್ಟ ಚಳವಳಿಯನ್ನು ಹತ್ತಿಕ್ಕಲು ಸರಕಾರ ಗುಪ್ತವಾಗಿ ಜಿಲ್ಹಾಧಿಕಾರಿಗಳಿಗೆ ಆಜ್ಞಾಪಿಸಿದೆಯೇ ಎಂದು ಕಮ್ಯುನಿಸ್ಟ ಸದಸ್ಯರೊಬ್ಬರು ಆ ಗುಪ್ತ ಹುಕುಮಿನ ಪ್ರತಿಯೊಂದನ್ನು ಕೈಯಲ್ಲಿ ಹಿಡಿದುಕೊಂಡು ಕೇಳಿದರು. ಮತ್ತು ಅದರೊಳಗಿದ್ದ ಸಂಗತಿಗಳನ್ನೋದಿದರು.

ಶ್ರೀ ರವೀಂದ್ರನಾಥ ಠಾಕೂರರ

"ಕುಮುದಿನ"

ಅನುವಾದಕ:

ಶ್ರೀ ಅ. ನಾರಾಯಣಸ್ವಾಮಿ ಅಯ್ಯರ

ದಪ್ಪ ಕಾರ್ಡು, ಕ್ಯಾಲಿಕೊ ಬೈಂಡು,

ಸುಂದರ ಮೌಖಪತ್ರ ೩—೮—೦

ವಿಚಾರ ಸಾಹಿತ್ಯ ಲಿಮಿಟೆಡ್

ಬಳೇಪೇಟೆ — ಬೆಂಗಳೂರ ಸಿಟಿ

ಬಿಹಾರ ಸಂಚಾರ

ಕಾಂಗ್ರೆಸ್ಸಿನ ಹೊಣೆ

ಏಳು ವರ್ಷಗಳ ನಂತರ ಇದು ಬಿಹಾರಕ್ಕೆ ಗಾಂಧೀಜಿಯ ಮೊದಲ ಸಂದರ್ಶನವಾಗಿದುದರಿಂದ ಪಾಟನಾ ಮೈದಾನದಲ್ಲಿ ತಾ. ೫ಕ್ಕೆ ಸೇರಿದ ಸಭೆಗೆ ಬಹಳ ದೊಡ್ಡ ಜನಜಂಗುಳಿ ನೆರೆದಿದ್ದಿತು. ಬಿಹಾರ ಪ್ರಾಂ. ಕಾಂಗ್ರೆಸ ಸಮಿತಿಯ ಅಧ್ಯಕ್ಷರಾದ ಪ್ರೊ. ಅಬ್ದುಲ ಬಾರಿಯವರು ಗಾಂಧೀಜಿಯನ್ನು ಪ್ರಾರ್ಥನಾ ಸ್ಥಳಕ್ಕೆ ಮೋಟಾರಿನಲ್ಲಿ ಕರೆತಂದಿದ್ದರು. ಪ್ರಾರ್ಥನೆ ಮುಗಿದ ನಂತರ ಗಾಂಧೀಜಿ ತಾವು ನಡೆಯುತ್ತ ಪ್ರಾರ್ಥನಾ ಸಭೆಗೆ ಬಾರದೆ ಮೋಟಾರಿನಲ್ಲಿ ಬಂದುದಕ್ಕೆ ಕ್ಷಮೆ ಬೇಡಿದರು. ಆದರೆ ಇದು ಬಿಹಾರಿಗಳಿಗೇ ಲಾಂಛನಾಸ್ಪದವೆಂದರವರು. ಏಕೆಂದರೆ ನಿಶ್ಶಬ್ದವಾಗಿ, ಗಂಭೀರವಾಗಿ ಸ್ವಾಗತಿಸುವ ಬದಲು ಬಿಹಾರಿಗಳು ಅತಿಥಿ ಸಂಕೋಚಪಡುವಂತೆ ಆಚರಿಸಿದ್ದಾರೆ. ತಮ್ಮ (ಗಾಂಧೀಜಿಯ) ವಯಸ್ಸನ್ನು ನೋಡಿಯಾದರೂ ಅವರು ತಮ್ಮ ಚೀರಾಟಗಳನ್ನು ಕಡಿಮೆ ಮಾಡಬೇಕಾಗಿತ್ತು. ಅವರ ಉದ್ದೇಶ ಒಳಿತಾಗಿರಬಹುದು ಆದರೆ ಅದು ತಮ್ಮ ಕಿವಿಗಳಿಗೆ ತೀರ ಅಸಹನೀಯವಾಗಿದೆ.

ಮುಂದುವರಿಸುತ್ತ ಗಾಂಧೀಜಿ ಅಂದದ್ದು: ನನ್ನದೆಂದು ಅಭಿಮಾನದಿಂದ ಕರೆಯುತ್ತಿದ್ದ ಬಿಹಾರಕ್ಕೆ ಬರುವ ಅವಶ್ಯಕತೆ ಬೀಳದೆಂದು ನಾನು ಭ್ರಮಿಸಿಕೊಂಡಿದ್ದೆ. ಆದರೆ ಡಾ. ಸಯ್ಯದ ಮಹಮ್ಮದರ ಪತ್ರ ಇಲ್ಲಿ ಎಲ್ಲವೂ ಇರಬೇಕಾದಂತೆ ಇಲ್ಲವೆಂದು ತಿಳಿಸಿತು. ಬಿಹಾರ ಹಿಂದುಗಳು ತಮ್ಮ ಬಂಧುಗಳಾದ ಮುಸ್ಲಿಮರಿಗೆ ಮಾಡಿದ್ದು ನೌಖಾಲಿಗಿಂತಲೂ ಎಷ್ಟೋ ಕೆಡಕಾಗಿತ್ತೆಂದು ನನಗೆ ಗೊತ್ತೇ ಇತ್ತು. ಆದರೆ ಪಾತಕದಷ್ಟೇ ಉದ್ದಾಮವಾದ ಪ್ರಾಯಶ್ಚಿತ್ತವನ್ನೂ ಅವರು ಮಾಡಿಕೊಳ್ಳುತ್ತಿದ್ದಾರೆಂದು ನಾನು ಬಗೆದಿದ್ದೆ. ನಿಜವಾದ ಪಶ್ಚಾತ್ತಾಪದ ದ್ಯೋತಕ ಅದೇ. ಕ್ಷಣಿಕ ಉನ್ಮಾದದಿಂದ ಮನುಷ್ಯತ್ವವನ್ನೇ ಮರೆತು ನಡೆದ ಬಿಹಾರಿಗಳು "ಗುಂಡ" ರ ಗುಂಪಿಗೆ ಸೇರಿದವರೆಂದೂ ಅದರ ಕರ್ಮಕ್ಕೆ ಕಾಂಗ್ರೆಸ್ಸಿಗರು ಹೊಣೆಯಲ್ಲವೆಂದೂ ಬಿಹಾರ ಹಿಂದುಗಳು ಆತ್ಮಸಮರ್ಥನೆ ಮಾಡಿಕೊಳ್ಳಲಿಕ್ಕಿಲ್ಲೆಂದು ನಾನು ಆಶಿಸಿದ್ದೆ. ಹಿಂದೀ ಸಂಸ್ಥೆಗಳಲ್ಲೆಲ್ಲ ಕಾಂಗ್ರೆಸ್ಸೆ ಸಮಗ್ರಭಾರತದ ಪ್ರತಿನಿಧಿಯೆಂದು ಹೇಳಿಕೊಳ್ಳಲಾಗುತಿದೆ. ಇದನ್ನೇ ನಾನು ಲಂಡನ್ನಿನಲ್ಲಿ ದುಂಡುಮೇಜಿನ ಪರಿಷತ್ತಿನಲ್ಲಿಯೂ ಉಚ್ಚರಿಸಿದ್ದೆ. ಸೇವಾಬಲದಿಂದ ಅದು ತನ್ನ ಸದಸ್ಯರ ಮಾತ್ರವಲ್ಲ ವೈರಿಗಳ ಪ್ರಾತಿನಿಧ್ಯಕ್ಕೂ ಅರ್ಹವಾಗಿದೆಯೆಂದು ನಾನು ವಾದಿಸಿದ್ದೆ. ಆದುದರಿಂದ ಕಾಂಗ್ರೆಸ್ಸು ಎಲ್ಲ ಜಾತಿ ವರ್ಗಗಳ ದುಷ್ಕರ್ಮಗಳ ಹೊಣೆಯನ್ನೂ ಹೊರಬೇಕು. ನಿಜವಾಗಿ ನೋಡಿದರೆ ಈ ಹುಚ್ಚು ಕುಣಿತದಲ್ಲಿ ಒಬ್ಬನೆ ಒಬ್ಬ ಕಾಂಗ್ರೆಸ್ಸಿಗನ ಅಂಗವೂ ಇಲ್ಲವೆಂದು ಹೇಳುವದು ತಪ್ಪಾದೀತು. ಕಾಂಗ್ರೆಸ್ಸಿಗರನೇಕರು ಜೀವದ ಹಂಗುದೊರೆದು ತಮ್ಮ ಮುಸ್ಲಿಂ ಬಾಂಧವರನ್ನು ರಕ್ಷಿಸಿದರೆಂಬುದು ಬಿಹಾರ ದುಷ್ಕರ್ಮಕ್ಕೆ ಇತಿಹಾಸದಲ್ಲೆ ದೊರೆಯಲ್ಲವೆಂದು ಹೇಳುವ ದುಃಖಿತ ಮುಸ್ಲಿಮರ ನ್ಯಾಯ್ಯವಾದ ಆರೋಪಕ್ಕೆ ಉತ್ತರವಲ್ಲ. ಇತಿಹಾಸದಲಿ ಬಿಹಾರ ಹಿಂದುಸ್ತಾನಗಳ ದುಷ್ಕರ್ಮಕ್ಕಿಂತಲೂ ಘೋರವಾದವುಗಳನ್ನು ಮಾಡಿದ ಮನುಷ್ಯರಾಕ್ಷಸರು ಇದ್ದರೆಂದು ತೋರಿಸಿಕೊಡುವದು ಅಸಾಧ್ಯವಲ್ಲ. ಆದರೆ ದುಷ್ಕರ್ಮಗಳ ಗುರುತ್ವವನ್ನು ಚಿನ್ನದ ತಕ್ಕಡಿಯಲ್ಲಿ ತೂಗಿ ಹೋಲಿಸುವದು ಸರಿಯಲ್ಲ. ನಿಜವಾಗಿ ಪಶ್ಚಾತ್ತಪಿಸುವಾತನು ಏನಾದರೂ ತಾನು ತನ್ನ ಪೂರ್ವಜರಷ್ಟು ದುಷ್ಟನಲ್ಲವಲ್ಲ ಎಂದು ಸಮಾಧಾನ ಹಚ್ಚಿಕೊಳ್ಳಲಾರನು. ಸತ್ಕರ್ಮ ಮಾಡುವದರಲ್ಲಿಯೇ ಮೇಲಾಟವಿರಬೇಕು. ಪೂರ್ವಜರನ್ನು ಸೇವೆಯಲ್ಲಿ ಮೀರಿಸುವ ಛಲವಿರಬೇಕು. ನೌಖಾಲಿಯಲ್ಲಿ ತೋರಿಬಂದ ದುರಾಚಾರವನ್ನು ಬಿಹಾರದ್ದು ತಡೆಯಿತೆಂದು ಬಗೆಯುವ ಹಿಂದುಗಳು ಹಿಂದುಸ್ತಾನದಲ್ಲೆಲ್ಲ ಇರುವದನ್ನು ನೋಡಿ ನನಗೆ ದುಃಖವಾಗಿದೆ. ಈ ಭಾವನೆ ಅಧಃಪಾತದ, ಗುಲಾಮಗಿರಿಯ ದ್ಯೋತಕ ಹೊರತು ಸ್ವಾತಂತ್ರ್ಯ,ಪೌರುಷಗಳ ಲಕ್ಷಣವಲ್ಲ. ಇತ್ತ ಹೇಡಿತನವಿದ್ದಲ್ಲಿಯೇ ಆತ್ಮದೌರ್ಜನ್ಯವಿದೆಯೆಂದು ನನಗೆ ಈಚೆಗೆ ಖಚಿತವಾಗಿದೆ. ಹಿಂದುಸ್ತಾನ ಸರ್ವ ವಿಧದಿಂದಲೂ ಸ್ವತಂತ್ರವಾಗಬೇಕೆಂಬ ಆಸೆಯಿದ್ದರೆ ದುರಾಚಾರಗಳನ್ನು ಅನುಕರಿಸಬಾರದೆಂದು ಸಮಸ್ತ ಹಿಂದುಸ್ತಾನಕ್ಕೆ ಎಚ್ಚರ ಕೊಡಬಯಸುವೆ. ಈ ರೀತಿಯನ್ನು ಆಶ್ರಯಿಸಿದವರು ಹಿಂದುಸ್ತಾನದ ವಿಮೋಚನೆಯನ್ನು ಮುಂದೂಡುವರು.

ಹೋಳಿಯನ್ನು ಹೇಗೆ ಆಚರಿಸಬೇಕು

ಹಿಂದಿನ ದಿನದಂತೆ ತಾ. ೬ಕ್ಕೆ ಗದ್ದಲವಿದ್ದಿಲ್ಲ. ಸ್ತ್ರೀ ಸ್ವಯಂಸೇವಕರ ಕಾವಲು ಸಾಲುಗಳ ನಡುವೆ ಗಾಂಧೀಜಿ ನಡೆದು ಹೋಗುತಿದ್ದಾಗ ಶುದ್ಧ ಶಾಂತಿ ನೆಲಸಿತ್ತು. ಜನಜಂಗುಳಿಯೂ ಹೆಚ್ಚು ವ್ಯವಸ್ಥಾಶೀಲವಾಗಿತ್ತು. ಅದಕಾಗಿ ಗಾಂಧೀಜಿ ಧನ್ಯವಾದ ಅರ್ಪಿಸಿದರು.

ಮರುದಿನ ಹೋಳಿಯಿದ್ದುದರಿಂದ ಅದನ್ನು ಹೇಗೆ ಆಚರಿಸಬೇಕೆಂಬ ಬಗ್ಗೆ ಗಾಂಧೀಜಿಯ ಅಭಿಪ್ರಾಯ ಕೇಳಲಾಯಿತು. ಹೋಳಿಯಂಥ ಹಬ್ಬದ ಕಾಲದಲ್ಲಿ ಹುಚ್ಚು ಮತ್ಸರಕ್ಕೆ ಡೆಗೊಡದೆ ಪರಮಾತ್ಮನಲ್ಲಿ ಬುದ್ಧಿಯನ್ನು ಲಯಗೊಳಿಸುವ ಪ್ರಯತ್ನ ಮಾಡಬೇಕೆಂದು ಗಾಂಧೀಜಿ ಉತ್ತರವಿತ್ತರು.

ಹಿಂದೂ ಮುಸಲ್ಮಾನರು ಗೆಳೆಯರಂತೆ ನೆರೆಹೊರೆಯಲ್ಲಿ ಬಾಳುತಿದ್ದ ಕಾಲವೊಂದಿತ್ತು. ಇಂದು ಅವರು ಪರಸ್ಪರ ಗೆಳೆಯರೆನ್ನಿಸಿಕೊಳ್ಳಲಾರದಂಥ ಪರಿಸ್ಥಿತಿ ಒದಗಿದ್ದರೂ ಪರಸ್ಪರ ವೈರಿಗಳೆಂಬ ಭಾವನೆಯಾದರೂ ಇಲ್ಲದಿರಲಿ. ಹೋಳಿಯ ಕಾಲದಲ್ಲಿ ತಮ್ಮ ಮೇಲೆ ಪುನಃ ದಾಳಿಯಾಗಬಹುದೆಂದು ಮುಸ್ಲಿಮರು ಹೆದರಿದ್ದಾರೆ. ಹಿಂದುಗಳು ನೌಖಾಲಿ ತಿಪ್ಪೇರಾಗಳಲ್ಲಿ ತಮಗೆ ಹೇಳಿದ್ದನ್ನೆ ಮುಸ್ಲಿಮರು ಇಲ್ಲಿ ಹೇಳುವದು ನೋಡಿ ಆಶ್ಚರ್ಯವಾಗುತ್ತದೆ. ಪಾಟನಾ ನೌಖಾಲಿಗಳೆರಡರಲ್ಲಿಯೂ ಒಂದೇ ಕಥೆ ಕೇಳಲು ನನಗೆ ನಾಚಿಕೆಯಾಗುತ್ತದೆ. ಆದ್ದರಿಂದ ನೌಖಾಲಿಯ ಹಿಂದುಗಳಿಗೆ ಕೊಟ್ಟ ಉಪದೇಶವನ್ನೆ ಇಲ್ಲಿಯ ಮುಸ್ಲಿಮರಿಗೆ ಕೊಡುವೆ. ದೇವರ ಮೇಲೆ ವಿಶ್ವಾಸವಿಟ್ಟು ಭಯವನ್ನು ಕಳೆದೊಗೆಯಿರಿ. ಇದು ಪರಿಪೂರ್ಣತೆಯ ಉಪದೇಶವೆಂದು ನಾ ಬಲ್ಲೆ.

ವಂದೇ ಮಾತರಂ, ಜಯಭಾರತ, ಜಯಹಿಂದ ಘೋಷಣೆಗಳು ಇಂದು ಮುಸ್ಲಿಮರಿಗೆ ಹೆದರಿಕೆಯುಂಟುಮಾಡುತ್ತಿವೆ. ಭಾರತಕೀ ಜಯ ಎಂದರೆ ಮುಸ್ಲಿಮಕೀ ಕ್ಷಯ ಎಂದರ್ಥವಾಗಬೇಕೆ? ಮುಸ್ಲಿಂ ಲೀಗ್ ಗೆಳೆಯರನೇಕರು ಮುಸ್ಲಿಮರನ್ನು ಬಿಹಾರದಲ್ಲಿ ಇರಗೊಡಿಸಲಾಗುವದೇ ಇಲ್ಲವೇ ಎಂದು ಕೇಳುತ್ತಾರೆ. ನಾವು ಒಂದು ಹುಚ್ಚು ಕುಣಿತಕ್ಕೆ ಇನ್ನೊಂದು ಹುಚ್ಚು ಕುಣಿತದಿಂದಲೇ ಉತ್ತರ ಕೊಡಬೇಕೆ? ಹಾಗಾದರೆ ಹಿಂದುಸ್ತಾನ ನೆತ್ತರ ಕಡಲಲ್ಲಿ ಮುಳುಗಿ ಹೋಗುವದೇ ಸೈ.

ಅಹಿಂಸೆ, ಆತ್ಮಬಲಿದಾನಗಳ ಪ್ರತೀಕಗಳಾದ ಸ್ತ್ರೀಯರಲ್ಲೇ ಗಾಂಧೀಜಿ ಹೆಚ್ಚು ಶ್ರದ್ಧೆಯನ್ನು ವ್ಯಕ್ತಗೊಳಿಸಿದರು. ಹಿಂದುಗಳು ಹೋಳಿಯನ್ನಾಚರಿಸುವ ರೀತಿಯಿಂದ ಮುಸ್ಲಿಮರಿಗೆ ಹಿಂದುಗಳು ಪಶ್ಚಾತ್ತಾಪ ಪಡುತಿದ್ದಾರೆಂದಿಷ್ಟೇ ಅಲ್ಲ, ಮೊದಲಿದ್ದುದಕಿಂತಲೂ ಹೆಚ್ಚು ತಮ್ಮಲ್ಲಿ ಪ್ರೀತಿಯಿಟ್ಟಿದ್ದಾರೆಂದು ಅನಿಸಿರಬೇಕು. ಹೀಗೆ ಹಿಂದಿನ ಸೌಹಾರ್ದದ ಪುನರುಜ್ಜೀವನದಲ್ಲಿ ಹೋಳಿ ಪರಿಣಮಿಸಿದರೆ ಆಗ ಅದು ನಿಜವಾದ ಧಾರ್ಮಿಕ ಉತ್ಸವವೆನಿಸುವದು.

ಇನ್ನೂ ಅನೇಕ ಹಿಂದೂ ಮನೆಗಳಲ್ಲಿ ಮುಸ್ಲಿಂ ಸ್ತ್ರೀಯರನ್ನು ಬಲಾತ್ಕಾರದಿಂದ ಇರಿಸಿಕೊಳ್ಳಲಾಗಿದೆಯೆಂದು ಕೇಳಿದ್ದೇನೆ ಅದು ನಿಜವಾಗಿದ್ದರೆ ಒಡನೆ ಅವರನ್ನು ಅವರವರ ಮನೆಗಳಿಗೆ ಕಳಿಸಿ, ದುರಾಚಾರ ಮಾಡಿದವರು ಪಶ್ಚಾತ್ತಾಪ ಪಡಬೇಕೆಂದು ಗಾಂಧೀಜಿ ಉಪದೇಶಿಸಿದರು. ಪಶ್ಚಾತ್ತಾಪ ಪಡುವದಲ್ಲದೆ ದುಷ್ಕರ್ಮಕ್ಕೆ ತಕ್ಕ ಶಿಕ್ಷೆಯನ್ನು ಕೂಡ ಪಡೆಯಲು ಸಿದ್ಧರಾಗಬೇಕು. ಇಷ್ಟು ಧೈರ್ಯವಿಲ್ಲದಿದ್ದರೆ ಕೊನೆಯ ಪಕ್ಷ ಆ ಸ್ತ್ರೀಯರನ್ನು ಸುರಕ್ಷಿತವಾಗಿ ರಾಜೇಂದ್ರಬಾಬುಗಳಿದ್ದಲ್ಲಿಗಾದರೂ ಮುಟ್ಟಿಸಬೇಕು.

ಹಿಂದುಗಳು ಬಲಿ ಕುರಿಸಾಲಿಗೆಯು ಪಶ್ಚಾತ್ತಾಪವನ್ನು ವ್ಯಕ್ತಗೊಳಿಸಿ ಪೀಡಿತರಿಗೆ ಧನರೂಪ ಪರಿಹಾರ ಕೊಟ್ಟರೆ ಸಾಲದು. ನಿಜವಾಗಿ ಬೇಕಾಗಿರುವದೆಂದರೆ ನಿಮ್ಮ ಹೃದಯಗಳು ಪರಿಶುದ್ಧವಾಗಬೇಕು. ನಿಮ್ಮನ್ನು ಮುತ್ತಿರುವ ದ್ವೇಷ ಅಥವಾ ಉದಾಸೀನ್ಯದ ಸ್ಥಾನದಲ್ಲಿ ಪ್ರೇಮದ ರಾಜ್ಯ ಸ್ಥಾಪಿತವಾಗಬೇಕು, ಆದರ ನೆರಳಲ್ಲಿ ಪ್ರತಿಯೊಬ್ಬ ಮುಸ್ಲಿಂ ಸ್ತ್ರೀಪುರುಷ ಬಾಲಕರು ನಿರ್ಭಯರಾಗಿ ತನ್ನ ಧರ್ಮವನ್ನು ಯಾವ ಅಡ್ಡಿಯೂ ಇಲ್ಲದೆ ಆಚರಿಸುವಂತಾಗಬೇಕು ಹೋಳಿಯ ಸಮಾರಂಭ ಈ ಎರಡು ಬಂಧು ಧರ್ಮಗಳ ನಡುವೆ ಈ ಸಂಬಂಧವನ್ನು ಸ್ಥಾಪಿಸುವದರ ಮಂಗಲಾಚರಣೆಯಾಗಲೆಂದು ನನ್ನ ಪ್ರಾರ್ಥನೆ.

ಗಾಂಧೀ ಯಾತ್ರೆ

(೯ ನೇ ಪುಟದಿಂದ)

ಒಂದಾಗಿರಬೇಕೆಂದು ನಿರ್ಬಂಧಿಸಿದರೆ ಅದನ್ನೂ ತಾವು ವಿರೋಧಿಸುವದೇ ಸರಿ. ಒತ್ತಾಯದ ವಿಭಜನೆಯಂತೆ ಒತ್ತಾಯದ ಐಕ್ಯಕ್ಕೂ ತಾವು ಬದ್ಧವಿರೋಧಿಗಳು.

ಗಾಂಧೀಜಿ ಮುಂದುವರಿಯುತ್ತ ಹೇಳಿದ್ದು: ಬ್ರಿಟಿಶ ಆಳಿಕೆಯ ಹಿಂದಿನ ಇತಿಹಾಸವೆಂತೇ ಇರಲಿ, ಬೇಗನೆ ಅವರು ಹಿಂದುಸ್ತಾನವನ್ನು ಬಿಟ್ಟು ಹೋಗುವರೆಂಬಲ್ಲಿ ಲೇಶವೂ ಸಂದೇಹವಿಲ್ಲ. ಆದುದರಿಂದ ಹಿಂದೂ ಮುಸ್ಲಿಮರು ಶಾಂತಿ ಸಮಾಧಾನಗಳಿಂದ ಬಾಳಲು ನಿಶ್ಚಯಿಸಬೇಕು. ಇಲ್ಲದಿದ್ದರೆ ಯಾದವೀ ಯುದ್ಧವಾಗಿ ದೇಶ ಹರಿಹಂಚಾಗಿ ಹೋಗುವದರಲ್ಲಿ ಸಂದೇಹವಿಲ್ಲ. ಮುಂದೇನೇನು ಒದಗುವದೋ ಯಾರಿಗೂ ಗೊತ್ತಿಲ್ಲ. ಆದರೆ ಪ್ರಮಾಣಬುದ್ಧಿಯಿಂದ, ಶುದ್ಧಾಂತಃಕರಣದಿಂದ, ಒಮ್ಮನಸಿನಿಂದ ಮನುಷ್ಯೋಚಿತವಾದುದೇನನ್ನಾದರೂ ನಾವು ಬಯಸಿದರೆ ತನ್ನ ದಾಸರ ದಾಸನೆನಿಸಿಕೊಳ್ಳುವ ಪರಮಾತ್ಮನು ಆ ಇಚ್ಛೆಯನ್ನು ಪೂರೈಸುವನೆಂದು ಹೇಳಲಡ್ಡಿಯಿಲ್ಲ.

ಸ್ತ್ರೀಯರೇನು ಮಾಡಬೇಕು ?

ತಾ ೩ಕ್ಕೆ (ಮಾರ್ಚ) ಕಿಕ್ಕಿರಿದ ಸಭೆಯಲ್ಲಿ ಬಜಾಪ್ಟಿಯಿಂದಲೂ ಅನೇಕ ಸ್ತ್ರೀಪುರುಷರು ಸೇರಿದ್ದರು. ಬಜಾಪ್ಟಿಯನ್ನು ಕಾರ್ಯಕ್ರಮದಿಂದ ತೆಗೆದು ಹಾಕಿದ್ದಕ್ಕೆ ದೂರಿಕೊಳ್ಳಲು ಅವರು ಬಂದಿದ್ದರು. ಮರಳಿ ಬಂದ ನಂತರ ತಾವು ಬಜಾಪ್ಟಿಗೂ ಭೆಟ್ಟಿ ಕೊಡಲೆತ್ನಿಸುವದಾಗಿ ಗಾಂಧೀಜಿ ಹೇಳಿದರು. ಹೃದಯ ಸಖ್ಯವನ್ನು ಸ್ಥಾಪಿಸದೆ ತಾವು ನೌಖಾಲಿ ತಿಪ್ಪೇರಾಗಳನ್ನು ಬಿಟ್ಟು ಹೋಗುವದಿಲ್ಲ. ಬಿಹಾರದಲ್ಲಿ ಬಹಳ ದಿನ ಉಳಿಯುವ ವಿಚಾರ ತಮಗಿಲ್ಲ.

ಪ್ರ:— ನೀವು ನಮ್ಮಲ್ಲಿ ಪ್ರಚಲಿತವಾಗಿರುವ ಅನೇಕ ಸಾಮಾಜಿಕ ದುಸ್ಸಂಪ್ರದಾಯಗಳನ್ನು ಎತ್ತಿ ತೋರಿಸಿದ್ದೀರಿ. ಅವು ಇರುವದು ನಿಜ ಆದರೆ ಗಂಡಸರಿಗೆ ಬೇಡವಾಗಿದ್ದರೆ ಆ ಬಗ್ಗೆ ಹೆಂಗಸರೇನು ಮಾಡಬೇಕು ?

ಉತ್ತರ:— ಸ್ತ್ರೀಯರು ತಾವು ಪುರುಷರಿಗಿಂತ ಕೀಳೆಂದು ತಿಳಿದುಕೊಳ್ಳಬೇಕಾದ ಪ್ರಸಂಗವೇ ಇಲ್ಲ. ಪುರುಷನ ಅರ್ಧಾಂಗಿ ಸ್ತ್ರೀಯೆಂದು ರೂಢಿಮಾತು ಹೇಳುತ್ತದೆ. ಅರ್ಥಾತ್ ಪುರುಷನು ಸ್ತ್ರೀಯ ಅರ್ಧವಿದ್ದಂತಾಯಿತು. ಅವರು ಎರಡು ಬೇರೆ ಬೇರೆ ವಸ್ತುಗಳಾಗಿರದೆ ಒಂದೇ ವಸ್ತುವಿನ ಎರಡು ಹೋಳುಗಳು. ಇಂಗ್ಲೀಷ ಭಾಷೆಯಂತೂ ಅದಕ್ಕೂ ಮುಂದೆ ಹೋಗಿ ಸ್ತ್ರೀಯರನ್ನು ಪುರುಷನ ಉತ್ತಮಾರ್ಧವೆಂದು ಸಾರುತ್ತದೆ. ಆದುದರಿಂದ ಸ್ತ್ರೀಯರು ಅಯೋಗ್ಯವೂ ಅನಪೇಕ್ಷಣೀಯವೂ ಆದ ನಿರ್ಬಂಧಗಳನ್ನು ಮುರಿಯಲು ಸವಿನಯ ಬಂಡಾಯ ಹೂಡಬೇಕೆಂದು ಗಾಂಧೀಜಿ ಸೂಚಿಸಿದರು. ಯಾವುದೇ ನಿರ್ಬಂಧ ಹಿತಾವಹವಾಗಬೇಕಿದ್ದರೆ ಅದು ಸ್ವೇಚ್ಛಾಪೂರ್ವಕವಾಗಿರಬೇಕು. ಸವಿನಯ ಬಂಡಾಯದಿಂದ ಹಾನಿಯೇನೂ ಆಗದು. ಆದರಲ್ಲಿ ಪಾರಿಶುದ್ಧ್ಯವೂ ವಿವೇಕ ಶೀಲ ಪ್ರತಿಭಟನೆಯೂ ಇದ್ದೇ ತೀರಬೇಕಾಗುವದು.

ಬಂಗಾಲ ವಿಭಜನೆಯನ್ನು ಕುರಿತ ಇನ್ನೊಂದು ಪ್ರಶ್ನೆಗೆ ಗಾಂಧೀಜಿ ಉತ್ತರಿಸಿದ್ದು:

ಎರಡು ಆಡಳಿತ ವಿಭಾಗಗಳನ್ನು ಮಾಡುವದೂ ಪ್ರಜೆಗಳ ಸ್ಥಳಾಂತರದಷ್ಟೇ ಅವ್ಯವಹಾರ್ಯ. ಅದರಿಂದ ಸಶಸ್ತ್ರ ತಾಟಸ್ಥ್ಯ ಪರಿಣಮಿಸಿ ಯೋಗ್ಯ ಬೆಳವಣಿಗೆ ಕುಂಠಿತವಾಗುವದು. ಎರಡೂ ಜಾತಿಯ ಮುಂದಾಳುಗಳು ಸೇರಿ ತಮ್ಮ ಭಿನ್ನಾಭಿಪ್ರಾಯಗಳನ್ನು ಕಡಿಮೆ ಮಾಡಿಕೊಂಡು ಉಳಿದವುಗಳನ್ನು ಸಹಿಸಬೇಕು. ಇದಲ್ಲದೆ ಬೇರೆ ಹಾದಿ ಹಿಡಿದರೆ ಬರ್ಬರತೆಯಲ್ಲಿಯೂ ಮೂರನೆಯವರ ಆಕ್ರಮಣದಲ್ಲಿಯೂ ಪರಿಣಮಿಸದಿರದು.

ವನಸ್ಪತಿ ತುಪ್ಪದ ಮೋಸ

(೬ ನೇ ಪುಟದಿಂದ ಮುಂದುವರಿದುದು)

ಉತ್ಪಾದಕ ಶಕ್ತಿಯ ಮೇಲೆ ದುಷ್ಪರಿಣಾಮವುಂಟಾಗುವದೆಂದು ಸಿದ್ಧಮಾಡಿ ತೋರಿದರು. [illegible] ವನಸ್ಪತಿ ತುಪ್ಪದ ಮೇಲೆ [illegible] ಇಡಲ್ಪಟ್ಟ ಇಲಿಗಳು [illegible] ಹೊಂದಿದವು. [illegible] ದರೂ ಹೆಚ್ಚು ಬೆಳವಣಿಗೆ [illegible] ಅವರ ಪ್ರಯೋಗಗಳಿಂದ ಸಿದ್ಧವಾದ [illegible] ಪ್ರಗತಿ, ಉತ್ಪಾದನೆ ಸ್ತನ್ಯೋತ್ಪಾದನೆ [illegible] ಲಾದ ಯಾವ ದೃಷ್ಟಿಯಿಂದ ವಿಚಾರ [illegible] ಬೆಣ್ಣೆ ಸರ್ವೋತ್ಕೃಷ್ಟ ಪೌಷ್ಟಿಕ ಪದಾರ್ಥವೆಂದು ಡಾ. ಪಟವರ್ಧನರು ಅಭಿಪ್ರಾಯಪಟ್ಟರು. ಶುದ್ಧ ಎಣ್ಣೆಯು ಅಷ್ಟೇ ಪೌಷ್ಟಿಕ ಪದಾರ್ಥವಾದ್ದರಿಂದ ವನಸ್ಪತಿ ಎಣ್ಣೆಯ ಶುದ್ಧೀಕರಣ ಮತ್ತು ನಿರ್ಗಂಧೀಕರಣದಿಂದ ಯಾವ ವಿಶಿಷ್ಟ ಪೌಷ್ಟಿಕತೆಯೂ ಉಂಟಾಗುವದಿಲ್ಲ. ಕದ್ದರಿಂದವಾಗಿ ಇಂಥ ಎಣ್ಣೆಯನ್ನು ಪಯೋಗಿಸುವ ಪ್ರಾಣಿಗಳ ಎರಡನೆ ಮೂರನೆ ತಲೆಮಾರಿನವರಲ್ಲಿ ಅದರ ದುಷ್ಪರಿಣಾಮಗಳು ಕಂಡು ಬರುತ್ತವೆಂದು ತೋರಿಬಂದಿದೆ.

"ವನಸ್ಪತಿ ತುಪ್ಪವನ್ನು ಮಾಡುವುದಕ್ಕಾಗಿ ಎಣ್ಣೆಯನ್ನು ಶುದ್ಧೀಕರಿಸುವ ಮತ್ತು ನಿರ್ಗಂಧೀಕರಿಸುವ ಎರಡು ಮುಖ್ಯ ವಿಧಾನಗಳಿವೆ. ಈ ವಿಧಾನಗಳಿಂದ ಬಹುಶಃ ಎಣ್ಣೆಯಲ್ಲಿಯ ಸತ್ವ ಇಲ್ಲದಂತಾಗುವದು. ಅದರಲ್ಲಿದ್ದ ಮುಖ್ಯವಾದ ಆಹಾರಸತ್ವಗಳು ಇಲ್ಲದಂತಾಗುವವು. ಅಲ್ಲದೆ ವಿಶುದ್ಧ ನೆಣ ಪದಾರ್ಥಗಳು ಮತ್ತು ಬೆಳವಣಿಗೆಗೆ ಅವಶ್ಯವಾದ ಪದಾರ್ಥಗಳು ನಾಶವಾಗುವವು. ಮಿಸ್ ಡಿಸೋಜಾ ಇವರು ಇಂಡಿಯನ್ ಸಾಯಿನ್ಸ ಇನ್ಸಿಟ್ಯೂಟಿನ ಫರ್ಮೆಂಟೇಶನ ಟೆಕ್ನಾಲಜಿ ವಿಭಾಗದಲ್ಲಿ ನಡೆಸಿದ ಕ್ರಿಮಿ ಆಹಾರ ಪ್ರಯೋಗಗಳಿಂದಲೂ ಈ ಮಾತಿಗೆ ಪುಷ್ಟಿದೊರೆಯುತ್ತದೆ.

ಪೌಷ್ಟಿಕತೆಯ ದೃಷ್ಟಿಯಿಂದಲೂ ಇಷ್ಟೊಂದು ಪ್ರಚಾರಹೊಂದಿದ ಘಾತಕ ರೀತಿಯಲ್ಲಿ ಲೋಕಪ್ರಿಯವಾದ ಶುದ್ಧೀಕರಣ ಮತ್ತು ನಿರ್ಗಂಧೀಕರಣ ಹೊಂದಿದ ವನಸ್ಪತಿ ತುಪ್ಪ ಬೆಣ್ಣೆಯಿಂದ ತುಪ್ಪಕ್ಕಿಂತ ಬಹಳ ಕಡಮೆ ಗುಣಕಾರಿಯಾಗಿರುವದಲ್ಲದೆ ಬಹುಶಃ ಅದನ್ನು ಬಳಸುವವರಿಗೆ ಅಪಾಯಕರವಾಗಿದೆ. ಶಕ್ಯವಾದರೆ ಬೆಣ್ಣೆಯನ್ನು ತಿನ್ನಿರಿ ಇಲ್ಲದಿದ್ದರೆ ಯಾವದೇ ಬಗೆಯ ವಿಕಾರವನ್ನು ಹೊಂದದ ಶುದ್ಧ ಒಳ್ಳೆಣ್ಣೆಯನ್ನು ತಿನ್ನಿರೆಂದು ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದ ಶಾಸ್ತ್ರಿಗಳೆಲ್ಲರು ಸ್ಪಷ್ಟ ನಿಃಸಂದಿಗ್ಧ ನಿರ್ಣಯ ಮಾಡಿದರು.

ವನಸ್ಪತಿ ತುಪ್ಪದ ಉತ್ಪಾದನೆಯಲ್ಲಿ ಜನಸಾಮಾನ್ಯರ ಸುಲಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಆಗುತಿದೆ. ಕಾಂಗ್ರೆಸ್ ಮಂತ್ರಿಗಳು ಆದಷ್ಟು ಬೇಗ ಈ ವನಸ್ಪತಿ ತುಪ್ಪದ ಮಾರಾಟದ ಮೇಲೆ ನಿಯಂತ್ರಣ ಹಾಕುವ ಅವಶ್ಯಕತೆಯನ್ನು ಕಂಡುಕೊಳ್ಳಬೇಕಾಗಿದೆ. ವಸ್ತುತಃ ವನಸ್ಪತಿ ಎಣ್ಣೆಯನ್ನು ವಿಕಾರಗೊಳಿಸುವದನ್ನು ನಿರ್ಬಂಧಿಸಬೇಕು ವನಸ್ಪತಿ ತುಪ್ಪ ಆರೋಗ್ಯಕ್ಕೆ ಅನಪಾಯಕಾರಿಯಾಗಿರುವವೆಂದು ಜನತೆಯನ್ನು ಮೋಸಗೊಳಿಸುತಿರುವ ಜಾಹೀರಾತುಗಳನ್ನೆಲ್ಲ ಕಾಯದೆಯಿಂದ ನಿರ್ಬಂಧಿಸಬೇಕು. ತುಪ್ಪ ಕೊಳ್ಳುವ ಶಕ್ತಿ ಯಾರಿಗೆ ಇಲ್ಲವೊ ಅಂಥವರು ಶುದ್ಧ ವನಸ್ಪತಿ ಎಣ್ಣೆಯನ್ನು ಕೊಳ್ಳಬೇಕು. ಆದರೆ 'ತುಪ್ಪ' ವನ್ನು ಕೊಳ್ಳಕೂಡದೆಂದು ಜನರ ಮನವೊಲಿಸಬೇಕು. ಆದುದರಿಂದ ಈ ವಿಷಯದಲ್ಲಿ ಸಾರ್ವಜನಿಕರ ಅಭಿಪ್ರಾಯವನ್ನು ಜಾಗೃತಗೊಳಿಸುವದು ಅವಶ್ಯವಾಗಿದೆ. ಸಮಾಜದ್ರೋಹಿಯಾದ ಈ ಅಪರಾಧದ ವಿರುದ್ಧ ಸುಸಂಸ್ಕೃತ ಸಾರ್ವಜನಿಕರೂ ತಮ್ಮ ಸಮರ್ಥ ಪಡೆ ಗೂಡಿಸಬೇಕಾಗಿದೆ — ಎಸ್. ಎನ್. ಅಗರವಾಲ

ಕರ್ನಾಟಕ

ಧಾರವಾಡ

ಗದಗದ ಶ್ರೀ ಬಸಪ್ಪ ಕೃಷ್ಣ ಗವಾಣೆ ಎಂಬ ಡ್ರೈವರನು ತನ್ನ ಗೂಡ್ಸ ಮೋಟರ ಗಾಡಿಯಲ್ಲಿ ಅಳತೆ ಮೀರಿ ಸರಕು ತುಂಬಿಕೊಂಡು ಹೋಗುತ್ತಿರುವಾಗ ಬಂಕಾಪುರ ಹತ್ತಿರ ಪೋಲೀಸರಿಗೆ ೧೦ ರೂ. ಲಂಚ ಕೊಡಲು ಪ್ರಯತ್ನಿಸಿದರು. ಈ ಬಗ್ಗೆ ಖಟ್ಲೆ ನಡೆದು ಅವರಿಗೆ ಒಂದು ತಿಂಗಳ ಶಿಕ್ಷೆ ಮತ್ತು ೧ ರೂ. ದಂಡ ವಿಧಿಸಲಾಯಿತು.

ಕರ್ನಾಟಕ ಕಾಮ್ಯುನಿಸ್ಟ ಪಕ್ಷದ ವತಿಯಿಂದ ಜನಶಕ್ತಿ ಎಂಬ ವಾರ ಪತ್ರಿಕೆಯನ್ನು ಬೇಗ ಹೊರಡಿಸಬೇಕೆಂದು ನಿರ್ಧರಿಸಿದ್ದು ಇದಕ್ಕಾಗಿ ೨೫೦೦೦ ರೂ. ಕೂಡಿಸಬೇಕೆಂದು ಗೊತ್ತು ಪಡಿಸಿಕೊಂಡಿರುತ್ತಾರಂತೆ.

ಹುಬ್ಬಳ್ಳಿ ಭಾರತ ಮಿಲ್ಲಿನ ಬಟ್ಟೆಯ ಶಾಖೆಯಲ್ಲಿಯ ಒಬ್ಬ ಕಾಮಗಾರನು ಗೈರ ಹಾಜರ ಇದ್ದ ಮೂಲಕ ಕೆಲಸ ಕಳೆದುಕೊಂಡಿದ್ದನು. ಅವನನ್ನು ಪುನಃ ಕಾಯಂ ಕೆಲಸದ ಮೇಲೆ ತೆಗೆದುಕೊಳ್ಳಬೇಕೆಂದು ತಕರಾರು ಹೂಡಿ ಕೆಲ ಕೂಲಿಕಾರರು ೧೫ ನೇ ತಾರೀಕು ಕೆಲಸ ನಿಲ್ಲಿಸಿದ್ದರು. ಉಳಿದ ಶಾಖೆಗಳ ಹಲವು ಕೆಲಸಗಾರರೂ ಕೆಲಸ ಮಾಡಲಿಲ್ಲ. ಈ ರೀತಿ ಕೆಲಸ ತಪ್ಪಿಸುವದು ಸರಿಯಲ್ಲವೆಂದು ಎಚ್ಚರಿಕೆ ಕೊಟ್ಟಿದ್ದಾರೆ.

ಮುಂಡರಗಿ ಪೇಟಾದ ಹಳ್ಳಿಕೇರಿ ಗ್ರಾಮದಲ್ಲಿ ಬಸನಗೌಡಾ ಎಂಬವನನ್ನು ಯಾರೊ ಬಡಿದು ಕೊಂದಿರುವರೆಂದು ತಿಳಿದು ಬಂದಿದೆ. ಆ ಬಗ್ಗೆ ಪೋಲೀಸ ಶೋಧ ನಡೆದಿದೆ.

ಹುಬ್ಬಳ್ಳಿಯ ಮಲ್ಲಿಕಾರ್ಜುನಪ್ಪಾ ಶಿವಲಿಂಗಪ್ಪಾ ಹರ್ತಿ ಎಂಬವರು ಸೀದಾ ಅಜ್ಞೆಯನ್ನು ಮೀರಿದ ಬಗ್ಗೆ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರು ಅವರಿಗೆ ೧೫೦ ರೂ. ದಂಡ ವಿಧಿಸಿದರು.

ಗದಗ ವಿದ್ಯಾದಾನ ಸಮಿತಿಯ ಹೈಸ್ಕೂಲಿನ ಕುಮಾರವ್ಯಾಸ ಬಳಗದ ವಾರ್ಷಿಕೋತ್ಸವ ಶ್ರೀ ನಾಯಕ ವೆಂಕಟರಾಯರ ಅಧ್ಯಕ್ಷತೆಯಲ್ಲಿ ೧೬ನೇ ತಾರೀಕು ವಿಜೃಂಭಣೆಯಿಂದ ಜರುಗಿತು. ಕುಮಾರವ್ಯಾಸ ಸಂಸ್ಕೃತಿ ಎಂಬ ವಿಷಯವಾಗಿ ಶ್ರೀ ನಾಯಕರು ವಿಸ್ತಾರಪೂರ್ವಕ ಭಾಷಣ ಮಾಡಿದರು. ವಿವಿಧ ವಿನೋದಾವಳಿಗಳು ನಡೆದುವು.

ಧಾರವಾಡ ಮುನಿಸಿಪಾಲಿಟಿಯ ಭಂಗೀ ಜನರು ಹಾಗು ಕಸಗೂಡಿಸುವವರು ತಮಗೆ ೬೦ ರೂಪಾಯಿ ಬೋನಸ ಬೇಕೆಂದು ೧೭ ನೇ ತಾರೀಕಿನಿಂದ ಸಂಪು ಹೂಡಿರುವರು. ಚೀಫ ಆಫೀಸರ ಪೋಲೀಸ ಇನಸ್ಪೆಕ್ಟರ ಮೊದಲಾದವರ ಮಧ್ಯಸ್ತಿಕೆ ಯಶಸ್ವಿಯಾಗಲಿಲ್ಲ. ಸ್ವಚ್ಛತೆಯ ಕಾರ್ಯ ಕೈಕೊಳ್ಳಲು ಸೈನಿಕರನ್ನು ಕರೆಯಿಸಬೇಕೆಂದು ಕಲೆಕ್ಟರರಿಗೆ ಬಿನ್ನವಿಸಿಕೊಳ್ಳಲಾಗಿದೆ.

ಹುಬ್ಬಳ್ಳಿ ರೇಲ್ವೆ ವರ್ಕಶಾಪಿನ ಕೂಲಿಕಾರರು ಅಹಾರ ಧಾನ್ಯದ ಹಂಚಿಕೆಯ ಬಗ್ಗೆ ಅಧಿಕಾರಿಗಳು ತಳೆದ ಉದಾಸೀನ ಧೋರಣವನ್ನು ಪ್ರತಿಭಟಿಸುವದಕ್ಕಾಗಿ ೧೫ನೇ ತಾರೀಕು ಧರಣಿ ಸತ್ಯಾಗ್ರಹ ಹೂಡಿದ್ದರು.

ಧಾರವಾಡ ಪಾಲಗೇರಿ ಶ್ರೀ ಹಣಮಂತದೇವರ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ಕೆ ೨೦೦ ರೂಪಾಯಿ ಕಾಣಿಕೆಯನ್ನು ನ್ಯಾಯಮೂರ್ತಿ ಲೋಕೂರರು ಕೊಟ್ಟಿರುತ್ತಾರೆ.

ಶ್ರೀ ಕೇಶವಾನಂದ ಶತ ಸಾಂವತ್ಸರಿಕ ಜಯಂತಿ ಮಹೋತ್ಸವದ ಅಂಗವಾಗಿ ಇದೇ ಚೈತ್ರ ಬಹುಳದಲ್ಲಿ ಎಪ್ರಿಲ ೮ ರಿಂದ ೧೦ ರ ವರೆಗೆ ಅಗಡಿ ಸಾಧುವರ್ಯರಿಂದಾದ ಸೇವೆಯನ್ನು ಸಂಸ್ಮರಿಸಲಾಗುವದು. ಈ ವರೆಗೆ ಶ್ರೀಗುರುಸ್ಥಾನ ಆನಂದವನದಿಂದ ಪ್ರಕಟವಾದ ವಾಙ್ಮಯ ಪ್ರದರ್ಶನ ಸದ್ಗುರುವಿನ ಚರಿತ್ರ ಧರ್ಮ ಹಾಗು ಸಾಹಿತ್ಯದ ಬಗ್ಗೆ ಕನ್ನಡದ ಮಾನ್ಯ ವಿದ್ವಾಂಸರಿಂದ ಏರ್ಪಡಿಸಲಾಗುವದು. ಎಲ್ಲರೂ ಇದಕ್ಕೆ ಸಹಾಯ ಮಾಡಬೇಕೆಂದು ಕೋರಿಕೆ.

ಧಾರವಾಡ ಜಿಲ್ಹಾ ಬೋರ್ಡಿಗೆ ಆರಿಸಿ ಬಂದ ಶ್ರೀ. ಬಿ. ಆರ್ ತಂಡಾಕದ ಇವರು ಕಾಂಗ್ರೆಸ್ ಸಿವಿಲ್ ಬೋರ್ಡಿಗೆ ಅವಿಧೇಯವಾಗಿ ನಡೆದರೆಂದು ಮುಂತಾಗಿ ಆರೋಪಿಸಿ ಅವರು ಕಾಂಗ್ರೆಸ ಪಕ್ಷದ ಸಭೆಗೆ ಬರತಕ್ಕದ್ದಲ್ಲೆಂದು ಸಿವಿಲ್ ಬೋರ್ಡಿನವರು ವಿಧಿಸಿದ್ದಾರೆ. ಹೀಗೆ ವಿಧಿಸಲು ಸಿವಿಲ್ ಬೋರ್ಡಿಗೆ ಅಧಿಕಾರವಿಲ್ಲೆಂತಲೂ ಇದುದರಿಂದ ಅವರಿಗೆ ಕಾಂಗ್ರೆಸ್ ಪಕ್ಷದ ಸಭೆಗೆ ಬರಲು ಅಪ್ಪಣೆ ಕೊಡಬೇಕೆಂದೂ ಬೋರ್ಡಿಗೆ ಕಾಂಗ್ರೆಸ್ಸಿನ ಪರವಾಗಿ ಆರಿಸಿ ಬಂದ ೧೬ ಜನ ಸದಸ್ಯರು ಪ್ರಕಟನೆ ಮೂಲಕ ಬಿನ್ನವಿಸಿಕೊಂಡಿದ್ದಾರೆ.

ಬೆಳಗಾವಿ

ಸವದತ್ತಿ ಮತ್ತು ಬೈಲಹೊಂಗಲದ ಅಗರ್ಭ ಶ್ರೀಮಂತರೂ ದೊಡ್ಡ ವ್ಯಾಪಾರಿಗಳೂ ಆಗಿದ್ದ ಬಸಪ್ರಭಪ್ಪನವರು ಹಂಪಣ್ಣನವರ ಇವರ ಮಗ ಬಾಬೂರಾಯರು ವಯಸ್ಸಿನ ೪೨ ನೇ ವರ್ಷಕ್ಕೆ ಅಕಾಲ ನಿಧನ ಹೊಂದಿದರು. ಇವರು ರಾವಸಾಹೇಬರಾಗಿದ್ದರಲ್ಲದೆ ಅನರರಿ ಮ್ಯಾಜಿಸ್ಟ್ರೇಟರೂ ಆಗಿದ್ದರು. ಇವರ ನಿಧನದ ನಿಮಿತ್ತ ೧೮ನೇ ತಾರೀಕು ಸವದತ್ತಿಯಲ್ಲಿ ಹರತಾಳ ಆಚರಿಸಲ್ಪಟ್ಟಿತು.

ಬೈಲಹೊಂಗಲದಿಂದ ಬೆಳಗಾವಿಗೆ ೧೫ ನೇ ತಾರೀಕು ರಾತ್ರಿ ಒಂದು ಕಾರು ಅತಿವೇಗದಿಂದ ಬರುತ್ತಿದ್ದಾಗ ಗಿಡಕ್ಕೆ ಹಾಯ್ದು ಅಪಘಾತಕ್ಕೀಡಾದ್ದರಿಂದ ಅದರಲ್ಲಿದ್ದ ಡಾ. ಹುದಲಿ, ಶ್ರೀಮತಿ ಖಾಸನೀಸ ಮತ್ತು ಅವರ ಮಗ ಹಾಗು ಡ್ರಾಯವರ ತತ್ಕಾಲಕ್ಕೆ ನಿಧನ ಹೊಂದಿದರು. ಡಾ. ಖಾಸನೀಸ ಮತ್ತು ಶ್ರೀ ದೇಶಪಾಂಡೆಯವರಿಗೆ ತೀವ್ರ ಗಾಯಗಳಾಗಿವೆ.

ಗೋಕಾಕ ತಾಲೂಕಿನ ಕಿನ್ನಾಳ ಗ್ರಾಮದಲ್ಲಿ ಕೆಲ ಜನ ಪುಂಡರು ಊರಲ್ಲಿಯ ಸಂಭಾವಿತ ನಾಗರಿಕರ ಮೇಲೆ ಏರಿ ಹೋಗಿ ನಿಮ್ಮ ವಿತ್ತ ಜೀವಗಳನ್ನು ಹರಣ ಮಾಡುವದಾಗಿ ಹೆದರಿಸುತ್ತಲೂ ಕೆಲವರ ಮನೆಯತ್ತ ಕುಡುಗೋಲು ಕೊಡಲಿ, ಪಿಸ್ತೂಲು ಮೊದಲಾದ ಆಯುಧಗಳಿಂದ ಸುಸಜ್ಜಿತರಾಗಿ ದರೋಡೆ ಮಾಡಲು ಪ್ರಯತ್ನಿಸಿದರೆಂದೂ ಈ ಬಗ್ಗೆ ಕುಲಗೋಡ ಪೋಲೀಸ ಠಾಣೆಗೆ ವರದಿಯಾಗಿದ್ದರೂ ವಿಚಾರಣೆ ಆಗದ್ದರಿಂದ ವಿಪತ್ತಿನಲ್ಲಿರುವ ನಾಗರಿಕರು ಭಯದಿಂದ ಊರು ಬಿಡುವ ಪ್ರಸಂಗ ಬಂದಿದೆಯಾಗಿ ತಿಳಿಯುತ್ತದೆ.

ವಿಜಾಪುರ

ಬಾಗಲಕೋಟೆಯ ಮುದ್ರಣಾಲಯಗಳ ಕೆಲಸಗಾರರು ಸಂಪು ಹೂಡಿ ೨೦ ದಿನಗಳಾದವು. ಇನ್ನೂ ಯಾವದೂ ಬಗೆಹರಿದಿಲ್ಲ. ಮುದ್ರಣಾಲಯಗಳು ಮುಚ್ಚಿಯೇ ಇವೆ. ಒಡಂಬಡಿಕೆಗಾಗಿ ಕೆಲಸಗಾರರು ಶ್ರೀ. ಸಕ್ರಿ ವೆಂಕಪ್ಪಣ್ಣನವರ ಕಡೆಗೆ ಹೋಗಿರುವದಾಗಿ ತಿಳಿಯುತ್ತದೆ.

ಬಾಗಲಕೋಟೆಯಲ್ಲಿ ಉರುವಲ ಕಟ್ಟಿಗೆಯ ಅಭಾವವಾಗಿ ೮-೧೦ ದಿನಗಳಾದವು. ಕಳೆದ ೨-೩ ದಿನವಂತೂ ತೀರ ಅಭಾವವಾಗಿ ಕೆಲ ಕುಟುಂಬಗಳಲ್ಲಿ ಒಲೆಯನ್ನೇ ಹೊತ್ತಿಸದ ದೈನ್ಯಾವಸ್ಥೆಯ ಪರಿಸ್ಥಿತಿಯುಂಟಾಗಿದೆ. ಕಾಳು ನೆನಿಸಿ ತಿನ್ನುವ ಪರಿಸ್ಥಿತಿಯೂ ಉಂಟಾಗಿದೆ.

ಸರಕಾರಿ ಕಾಳಿನ ಲೆವಿ ಎತ್ತುವಾಗ ಜಾಳಣಿಗೆ ಹಾಕುವಾಗ ಕೆಳಗೆ ಬಿದ್ದ ಸಣ್ಣ ಜೋಳವನ್ನೆಲ್ಲ ಕೂಲಿಯವರೆ ತೆಗೆದುಕೊಂಡು ಬಿಡುವರೆಂದು ಕೆಲ ಹಳ್ಳಿಗಳಿಂದ ತಕರಾರು ಕೇಳಬರುತ್ತವೆ.

ಇಲಕಲ್ಲ ಮ್ಯುನಿಸಿಪಾಲಿಟಿಯ ಅಧ್ಯಕ್ಷ ಶ್ರೀ ಮಾಲಿಂಗಪ್ಪಾ ಗೊಂಗಡಶೆಟ್ಟಿ ಮತ್ತು ಇಬ್ಬರು ಸದಸ್ಯರು ಮುನಿಸಿಪಾಲಿಟಿ ಕಾಗದ ಪತ್ರಗಳಲ್ಲಿ ಖೊಟ್ಟಿ ನಮೂದ ಮಾಡಿದರೆಂಬ ಆರೋಪದಿಂದ ಮ್ಯಾಜಿಸ್ಟ್ರೇಟರು ಅವರಿಗೆ ಒಂದು ದಿನದ ಸಾದಾ ಶಿಕ್ಷೆ ವಿಧಿಸಿದ್ದರಷ್ಟೇ. ಇದರ ವಿರುದ್ಧ ಅಪೀಲ ಮಾಡಲಾಗಿ ಹಾಯಕೋರ್ಟಿನವರು ಅಧ್ಯಕ್ಷರಿಗಾದ ಈ ಶಿಕ್ಷೆಯನ್ನು ೧೮ ತಿಂಗಳಿಗೇರಿಸಿದರು. ಇಬ್ಬರು ಸದಸ್ಯರ ಶಿಕ್ಷೆ ೧೨ ತಿಂಗಳಿಗೇರಿಸಿದರು. ಮ್ಯಾಜಿಸ್ಟ್ರೇಟರು ಆರೋಪಿಗಳ ಸ್ಥಾನಮಾನಗಳಿಗಂಜಿ ಕಡಿಮೆ ಶಿಕ್ಷೆ ವಿಧಿಸಿದ್ದರೆಂದು ಹಾಯಕೋರ್ಟ ನ್ಯಾಯಾಧೀಶರು ಅಭಿಪ್ರಾಯಪಟ್ಟಿರುವರು.

ಬಳ್ಳಾರಿ

ಶ್ರೀ ಮಕ್ತಾ, ಧ್ಯಾನತೀರ್ಥ ಶ್ರೀಪಾದಂಗಳವರ ಆರಾಧನಾ ಮಹೋತ್ಸವ ಬಳ್ಳಾರಿಯಲ್ಲಿ ಶ್ರೀ ಲಕ್ಷ್ಮೀ ನರಸಿಂಹ ದೇವಾಲಯದಲ್ಲಿ ಚೈತ್ರ ಶುದ್ಧ ೭-೮-೯ ಮೂರು ದಿನ ಜರುಗುವದು. ಪ್ರಾತಃಕಾಲ ಪಂಚಾಮೃತಾಭಿಷೇಕ ಪಾರಾಯಣ ಮತ್ತು ಸಾಯಂಕಾಲ ಪಂಡಿತ ಜಾಲಿಹಾಳ ಶ್ರೀನಿವಾಸಾಚಾರ್ಯರ ಉಪನ್ಯಾಸ ಜರಗುವವು ಸೋಮವಾರ ೯ ನೆಯ ದಿನ ಪ್ರಾತಃಕಾಲ ೮ ಗಂಟೆಗೆ ರಥೋತ್ಸವ ಆಗುವದು. ಎಲ್ಲರೂ ಉತ್ಸವದಲ್ಲಿ ಭಾಗಿಗಳಾಗಬೇಕೆಂದು ಪೂಟಾಕೂರು ವೇದವ್ಯಾಸಾಚಾರ್ಯರು ಬಿನ್ನವಿಸುತ್ತಾರೆ.

ಬಳ್ಳಾರಿ ಜಿಲ್ಹಾ ಏಕೀಕರಣ ಮೊದಲನೇ ಪರಿಷತ್ತನ್ನು ಬದನೇಹಾಳಿನಲ್ಲಿ ಇದೇ ಎಪ್ರಿಲ ೧೨-೧೩ ಎರಡು ದಿನ ಕೂಡಿಸಬೇಕೆಂದು ಗೊತ್ತಾಗಿದೆ. ಅಧ್ಯಕ್ಷ ಸ್ಥಾನಕ್ಕೆ ಯಾರನ್ನ ಆರಿಸಬೇಕೆಂಬ ವಿಚಾರ ನಡೆದಿದೆ. ಎಲ್ಲರೂ ಈ ಪರಿಷತ್ತನ್ನು ಯಶಸ್ವಿಗೊಳಿಸಬೇಕೆಂದು ಸ್ವಾಗತ ಸಮಿತಿಯ ಪರವಾಗಿ ಶ್ರೀ ಶಿ. ವೆ. ದೇಸಾಯರು ಬಿನ್ನವಿಸುತ್ತಾರೆ.

ಮದ್ರಾಸ ಶಾಸನ ಸಭೆಗೆ ಬಳ್ಳಾರಿ ಜಿಲ್ಹೆಯಿಂದ ನಡೆದ ಉಪಚುನಾವಣೆಯಲ್ಲಿ ಜನಾಬ ಹಾಜಿ ಮಹಮ್ಮದ ಇಸ್ಮಾಯಿಲ್ ಎಂಬ ಲೀಗ ಹುರಿಯಾಳುಗಳು ೬೪೧೧ ಮತಗಳನ್ನು ಪಡೆದು ಆರಿಸಿಬಂದರು. ಇವರ ಪ್ರತಿಸ್ಪರ್ಧಿ ಜನಾಬ ಎಸ್ ಅಬ್ದುಲ್ ರಜಾಕ ಇವರಿಗೆ ೬೫೬೨ ಮತಗಳು ಬಿದ್ದವು ಲೀಗ ಹುರಿಯಾಳುವಿಗೆ ಅದವಾನಿ ಹೊಸಪೇಟೆ ನಗರ ಮತ್ತು ತಾಲೂಕುಗಳಿಂದ ೬೦೦೦ ಮತಗಳು ಬಿದ್ದವು. ಸ್ವತಂತ್ರ ಹುರಿಯಾಳುವಿಗೆ ಉಳಿದ ತಾಲೂಕುಗಳಿಂದ ಮತ ಬಿದ್ದವು.

ಎಮ್ಮಿಗನೂರಿನ ಎನ್ ಕೈರುಪ್ಪಳಪ್ಪನವರು ಸ್ಥಳೀಯ ಹಾಯಸ್ಕೂಲ ಕಟ್ಟಡಕ್ಕೆ ೫೦ ಸಾವಿರ ರೂಪಾಯಿ ದಾನ ಮಾಡಿ ಅದಕ್ಕೆ ಕೀರ್ತಿಶೇಷ ಮಾಮಿಡಿ ಈಶ್ವರ ತಿಪ್ಪಣ್ಣ ಹಾಯಸ್ಕೂಲ ಎಂದು ಹೆಸರಿಡಬೇಕೆಂದು ಕೇಳಿಕೊಂಡ ಪ್ರಕಾರ ಹೆಸರಿಡಬೇಕೆಂದು ವ್ಯವಸ್ಥಾಪಕರು ನಿರ್ಧರಿಸಿದ್ದಾರೆ. ಅ. ಭಾ. ನೇಕಾರ ಮಂಡಳದ ಸದಸ್ಯರಾದ ಎಂ ಸೋಮಪ್ಪನವರು ಅದೇ ಹಾಯಸ್ಕೂಲಿನ ವಸತಿ ಗೃಹಕ್ಕಾಗಿ ೫೦ ಸಾವಿರ ರೂಪಾಯಿ ಕೊಟ್ಟು ತಮ್ಮ ಅಣ್ಣ ಎಂ ಗಂಗಪ್ಪನವರ ಹೆಸರಿಡಬೇಕೆಂದು ಕೋರಿದ್ದಾರೆ. ಅದಕ್ಕೂ ಒಪ್ಪಿಗೆ ದೊರೆತಿದೆ.

ಉತ್ತರ ಕನ್ನಡ

ಭಟಕಳ ಸಬ್ ಟ್ರೆಜರಿಯಲ್ಲಿನ ೮೦೦೦ ರೂಪಾಯಿಗಳ ನೋಟುಗಳು ಮಾಯವಾಗಿವೆ. ಈ ಸುದ್ದಿಯನ್ನು ಕೇಳಿ ನಿರ್ಸಿ ಭಾಗದ ಪ್ರಾಂತ ಆಫೀಸರರು ಭಟಕಳಕ್ಕೆ ಹೋಗಿದ್ದಾರೆ. ಪೋಲೀಸರ ತಪಾಸಣೆ ನಡೆದಿದೆ.

ಉತ್ತರ ಕನ್ನಡ ಜಿಲ್ಹೆಯ ಏಕೀಕರಣ ಪರಿಷತ್ತು ಹೆಗಡೆಯಲ್ಲಿ ಇದೇ ಎಪ್ರಿಲ ಮೊದಲನೇ ವಾರದಲ್ಲಿ ಕೂಡಿಸಬೇಕೆಂದು ಗೊತ್ತಾಗಿದೆ. ಇದರ ಜೊತೆಗೆ ಗ್ರಾಮೋದ್ಯೋಗ ಪ್ರದರ್ಶನವೂ ನಡೆಯುವದು. ಎಲ್ಲರೂ ಇದನ್ನು ಪ್ರೋತ್ಸಾಹಿಸಬೇಕೆಂದು ಸ್ವಾಗತ ಸಮಿತಿಯವರು ಬಿನ್ನವಿಸುತ್ತಾರೆ.

ಸಿದ್ದಾಪೂರ ತಾಲೂಕಿನ ಹಸರಗೋಡ ಗ್ರಾಮದಲ್ಲಿ ಹೊಸದಾಗಿ ಪ್ರಾಥಮಿಕ ಕನ್ನಡ ಶಾಲೆ ತೆರೆದಿದ್ದು ಅದರ ಜತೆಯಲ್ಲಿ ಶ್ರೀ ಲಕ್ಷ್ಮೀನರಸಿಂಹ ವಾಚನಾಲಯವೂ ಸ್ಥಾಪಿತವಾಗಿದೆ. ಇವೆರಡಕ್ಕೂ ಸರಕಾರದ ಮನ್ನಣೆ ದೊರೆತಿದೆ.

ಕನ್ನಡ ಸಂಸ್ಥಾನ

ನಿಜಾಮ ಪ್ರಭುಗಳು ಶಾಸನ ಸಭೆಯ ಸ್ವತಂತ್ರ ಪಕ್ಷದ ಧುರೀಣರಾದ ಪಿಂಗಲಂ ವೆಂಕಟರಾಮರೆಡ್ಡಿ ಇತ್ತೇಹಾದುಲ ಮುಸಲಮೀನ ಪಕ್ಷದ ಅಬ್ದುಲ್‌ರಹಿಮಾನ ಇವರನ್ನು ಮಂತ್ರಿಗಳನ್ನಾಗಿ ನೇಮಿಸಿರುವರು. ಪೂರೈಕೆ ಅಹಾರ ಬಟ್ಟೆ ಸೀದಾ ಒಕ್ಕಲತನ ಅರಣ್ಯ ಮೀನಗಾರಿಕೆ ಸ್ಟೇಶನರಿ ಮೊದಲಾದ ಖಾತೆಗಳನ್ನು ಶ್ರೀ ರೆಡ್ಡಿಯವರ ಕಡೆಗೆ ಮತ್ತು ಮ್ಯುನಸಿಪಲ್ ಕಾರ್ಪೊರೇಶನ, ಮುನಸಿಪಾಲಿಟಿ, ಲೋಕಲ್ ಬೋರ್ಡ, ಟ್ರೇಡ ಯೂನಿಯನ, ಕೂಲಿಕಾರ ಮನರಂಜನೆ ಮೊದಲಾದವುಗಳನ್ನು ಅಬ್ದುರ ರಹಿಮಾನರ ಕಡೆಗೆ ಒಪ್ಪಿಸಲಾಗಿದೆ.

ಮೈಸೂರ ಕಾಂಗ್ರೆಸ್ಸಿನ ಸದ್ಯದ ಧೋರಣ ಸರಿಬಾರದ್ದರಿಂದ ಶಿವಮೊಗ್ಗಾ ಜಿಲ್ಹಾ ಬೋರ್ಡ ಕಾಂಗ್ರೆಸ ಸದಸ್ಯರಾದ ಶ್ರೀ ಸದಾಶಿವರಾಯರು ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿರುವರು.

ಮಕ್ಕಳನ್ನು ಎತ್ತಿಕೊಂಡು ಹೋಗುವರೆಂಬ ಸುದ್ದಿ ಈ ಭಾಗದಲ್ಲಿ ಹರಡಿತ್ತಷ್ಟೆ. ಈ ಬಗ್ಗೆ ೧೭ ನೇ ತಾರೀಕು ಕಲೆಕ್ಟರ ಕಚೇರಿಯಲ್ಲಿ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಇಂಥ ಸುಳ್ಳು ಸುದ್ದಿಗಳನ್ನು ನಂಬಬಾರದೆಂದು ಹೇಳಲಾಯಿತು. ತುಂಗಭದ್ರಾ ಯೋಜನೆಯನ್ನು ನಡೆಸುವ ಸರಕಾರದ ಚೀಫ ಎಂಜಿನಿಯರ ಶ್ರೀ ಗೋವಿಂದರಾಜು ಅಯ್ಯಂಗಾರ್ಯರು ಕೂಡ ಇಂಥ ಸುಳ್ಳು ಸುದ್ದಿಗಳನ್ನು ನಂಬಬಾರದೆಂದು ಹೇಳಿದರು.

ಕೋರಣಗಲ್ಲಿನ ಅಂಗಡಿ ದೊಡ್ಡಪ್ಪ ಮತ್ತು ಬನ್ನೀಹಟ್ಟಿಯ ಕೊಟ್ರೆಪ್ಪ ಮತ್ತು ಮಟ್ಟಿಯಲ್ಲನ್ನು ಇವರಿಗೆ ಹೊಲ ಹೊಕ್ಕು ಕಳವು ಮಾಡಿದ ಆರೋಪಕ್ಕಾಗಿ ೧೫೦ ರೂ ದಂಡ ವಿಧಿಸಲಾಯಿತು.

ಖಾದಿ ಮತ್ತು ಗ್ರಾಮೋದ್ಯೋಗಗಳ ಪ್ರದರ್ಶನ

ರಾಷ್ಟ್ರೀಯ ಸಪ್ತಾಹ ಬೇಗ ಬರಲಿದೆ. ಅಲಹಾಬಾದಿನಲ್ಲಿ ಪಾಸಾದ ಗೊತ್ತುವಳಿಗಳನ್ನು ನೋಡಿದರೆ ಕಾಂಗ್ರೆಸ್ಸು ಈಗ ತನ್ನ ಲಕ್ಷವನ್ನೆಲ್ಲ ವಿಧಾಯಕ ಕಾರ್ಯಕ್ರಮದತ್ತ ಒಳ್ಳೆ ಆಸ್ಥೆಯಿಂದ ಹೊರಳಿಸಿದೆಂದು ಗೊತ್ತಾಗುವದು. ಈ ಸಮಯದಲ್ಲಿ ನಮ್ಮ ಪ್ರದರ್ಶನಗಳನ್ನೆಂತು [illegible]ರ್ಪಡಿಸಬೇಕೆಂಬುದನ್ನು ತಿಳಿದುಕೊಳ್ಳುವದು [illegible]ಪಯುಕ್ತವಾಗಬಹುದು.

೧) ಉದ್ದೇಶ

ನಮ್ಮ ದೇಶದಲ್ಲಿಯ ಪ್ರಂಚಡ ನಿರಕ್ಷರಿ ದರಿದ್ರ ಹಳ್ಳಿ ಜನರಿಗೆ ಖಾದಿ ಮತ್ತು ಗ್ರಾಮೋದ್ಯೋಗಗಳಲ್ಲಿಡಕವಾಗಿರುವ ಮೂಲಭೂತ ರಹಸ್ಯವನ್ನು ತೋರಿಸಿಕೊಡಬೇಕಾದರೆ ಪ್ರದರ್ಶನವೊಂದು ಪರಿಣಾಮಕಾರಿಯಾದ ಮಾಧ್ಯಮವಾಗಿದೆ. ಹಳ್ಳಿ ಚಳವಳಿಯ ರಹಸ್ಯವೇನೆಂಬುದನ್ನು ಅವರಿಗೆ ಅದರ ಸಾಧನಗಳಿಂದ ತಿಳಿಸಬಹುದು. ಅದನ್ನು ಸಂಪಾದಿಸುವ ಬಗೆಯಾವುದೆಂಬುದನ್ನೂ ಅವೇ ಸಾಧನಗಳಿಂದ ತೋರಿಸಬಹುದು ಆದುದರಿಂದ ಹಳ್ಳಿ ಚಳವಳಿ ಯಶಸ್ವಿಯಾಗಬೇಕಾದರೆ ಯಾರ ಸಹಾಯ ಅತ್ಯವಶ್ಯವೊ ಅಂಥ ನಮ್ಮ ಹಳ್ಳಿ ಜನರನ್ನು ಸುಶಿಕ್ಷಿತರನ್ನಾಗಿ ಮಾಡುವ ಒಂದೇ ಒಂದು ಮತ್ತು ನಿಃಸ್ವಾರ್ಥ ಉದ್ದೇಶ[illegible]ದ ಇಂಥ ಪ್ರದರ್ಶನಗಳ ಏರ್ಪಾಡ ಮಾಡುವ[illegible] ಅವಶ್ಯವೆಂದು ಇದರಿಂದ ಸ್ಪಷ್ಟವಾಗುವದು. ಸಾರ್ವಜನಿಕರಿಂದ ಹಣವನ್ನು ಸೆಳೆದುಕೊಂಡು ಲಾಭ ಹೊಡೆಯುವ ದೃಷ್ಟಿಯಿಂದ ಈ ಪ್ರದರ್ಶನಗಳನ್ನು ಏರ್ಪಡಿಸಬಾರದು.

೨) ಪ್ರವೇಶಫೀ

ಹೆಸರಿಗಾಗಿ ಪ್ರವೇಶ ಫೀಯನ್ನು ತೆಗೆದುಕೊಳ್ಳತಕ್ಕದು.

೩) ಶೃಂಗಾರ

ಪ್ರದರ್ಶನವನ್ನು ಶೃಂಗಾರಗೊಳಿಸುವಲ್ಲಿ ಹೆಚ್ಚು ಹಣ ವೆಚ್ಚ ಮಾಡುವ ಅವಶ್ಯಕತೆಯಿಲ್ಲ. ಕೇವಲ ಸಾದಾ ಮತ್ತು ಪರಿಣಾಮಕರವಾಗುವಂತೆ ಪ್ರದರ್ಶನವನ್ನು ಶಿಂಗರಿಸಬಹುದು. ಹಳ್ಳಿ ಕಲಾಕೌಶಲ್ಯಕ್ಕನುಗುಣವಾಗಿ ಅದು ರಚಿತವಾಗಬೇಕು. ಹಳ್ಳಿಗಳಲ್ಲಿ ಸಿಕ್ಕುವ ವಸ್ತುಗಳನ್ನೇ ಪ್ರದರ್ಶನವನ್ನು ಶಿಂಗರಿಸಲು ಉಪಯೋಗಿಸಬೇಕು. ಬಟ್ಟೆಯ ಕೊರತೆಯ ಈ ದಿನಗಳಲ್ಲಿ ಪ್ರದರ್ಶನ ಸ್ಥಾನವನ್ನು ಸಿಂಗರಿಸುವದಕ್ಕಾಗಿ ಖಾದಿಯನ್ನು ಮನಬಂದಂತೆ ಉಪಯೋಗಿಸಬಾರದು.

೪) ಸ್ಟಾಲುಗಳು

ಹೆಚ್ಚು ಸ್ಟಾಲಗಳು ಕೇವಲಪ್ರಾತ್ಯಕ್ಷಿಕೆ ಮಾಡಿ ತೋರಿಸುವದಕ್ಕಾಗಿಯೇ ಇರತಕ್ಕದ್ದು.

೫) ಪ್ರಾತ್ಯಕ್ಷಿಕೆಗಳು

ಯಾವದೊಂದು ಉದ್ಯೋಗದ ಎಲ್ಲ ವಿಧಾನಗಳನ್ನು ಅಂದರೆ ಹಸಿ ಸರಕಿನಿಂದ ಸಿದ್ಧ ಸರಕಾಗುವ ವರೆಗಿನ ಎಲ್ಲ ವಿಧಾನಗಳನ್ನು ಅವನ್ನು ಸಿದ್ಧ ಮಾಡುವ ವಿವರಗಳೊಂದಿಗೆ ಪ್ರೇಕ್ಷಕರಿಗೆಲ್ಲ ತೋರಿಸತಕ್ಕದ್ದು.

೬ ಮಾರಾಟದ ಸ್ಟಾಲುಗಳು

ಪ್ರದರ್ಶನದಲ್ಲಿ ಸಿದ್ಧ ಮಾಡಿದ ಸರಕುಗಳನ್ನೆಲ್ಲ ಈ ಸ್ಟಾಲುಗಳಲ್ಲಿ ಮಾರಾಟಮಾಡುವದಕ್ಕೆ ಅವಕಾಶವಿರಬೇಕು. ಪ್ರದರ್ಶಿಸಲ್ಪಡುತಿ[illegible] ಆಯಾ ಉದ್ಯೋಗ ಧಂದೆಗಳಿಗೆ ಸಂಬಂಧಿಸಿದ ಪುಸ್ತಕ ಮತ್ತು ಸಾಹಿತ್ಯ ಹಾಗು ಹಳ್ಳಿಯ ಉದ್ಯೋಗವನ್ನು ತಿಳಿಸಿಕೊಡುವ ಪುಸ್ತಕಗಳ ಮಾರಾಟಕ್ಕೂ ಈ ಸ್ಟಾಲುಗಳಲ್ಲಿ ಆಸ್ಪದ[illegible]ರತಕ್ಕದ್ದು.

೭ ಉಪಹಾರ ಗೃಹಗಳ ಸ್ಟಾಲುಗಳು

ಆಹಾರ ಸುಧಾರಣೆ ಪೌಷ್ಟಿಕತೆ ಮೊದಲಾದವುಗಳ ಶಿಕ್ಷಣವನ್ನು ಹಳ್ಳಿಗಳಿಗೆ ಕೊಡುವದೂ ಬಹಳ ಮಹತ್ವದ್ದಾಗಿದೆ. ಆದುದರಿಂದ ಉಪಹಾರ ಗೃಹಗಳು ಇಂಥ ಪ್ರದರ್ಶನಗಳ ಮುಖ್ಯ ಅಂಗಗಳಾಗಿರತಕ್ಕದ್ದು ಆದರೆ ಕೇವಲ ನೋಡಲು ಬಂದವರ ಸುಖಸೌಕರ್ಯಗಳ ಸಾಧನಗಳಾಗಿ ಮಾತ್ರ ಅವಿರಕೂಡದು. ಆದುದರಿಂದ ಪ್ರದರ್ಶನ ಸಂಸ್ಥೆಯವರು ಇಂಥ ಸ್ಟಾಲುಗಳನ್ನಿಡತಕ್ಕದ್ದು. ಆಕಳ ಹಾಲು, ಮಜ್ಜಿಗೆ ಕೆನೆತೆಗೆದ ಹಾಲು, ಮೊಸರು ಮೊದಲಾದವುಗಳನ್ನು ಹಳ್ಳಿಗರಿಗೆ ಸ್ವಲ್ಪೇ ಹಣದಲ್ಲಿ ಒದಗಿಸಬೇಕು. ಚೈನಿಯ ತಿಂಡಿ ತಿನುಸುಗಳಿಗೆ ಅವಕಾಶವಿರಕೂಡದು. ಗಿರಣಿಗಳಲ್ಲಿ ತಯಾರಾದ ಸಕ್ಕರೆ, ವನಸ್ಪತಿ ತುಪ್ಪ ಗಿರಣಿಗಳಲ್ಲಿ ತಯಾರಾದ ಎಣ್ಣೆ, ಗಿರಣಿಗಳಲ್ಲಿ ಬೀಸಿದ ಹಿಟ್ಟು, ಗಿರಣಿಗೆ ಹಾಕಿದ ಅಕ್ಕಿ ಮತ್ತು ಇಂಥವೆ ಪದಾರ್ಥಗಳನ್ನು ಯಾವ ತಿನಸುಗಳಲ್ಲಿಯೂ ಉಪಯೋಗಿಸಲಿಕ್ಕೆ ಅವಕಾಶವಿರಕೂಡದು.

೮ ಪ್ರಾತ್ಯಕ್ಷಿಕೆಗಳ ವ್ಯವಸ್ಥೆ

ಪ್ರಾತ್ಯಕ್ಷಿಕೆ ಮಾಡಿತೋರಿಸಲ್ಪಡುವ ಎಲ್ಲ ಉದ್ಯೋಗ ಧಂದೆಗಳೇನು ಸ್ಥಳೀಯವಾಗಿರಲಾರವು. ಇವನ್ನೆಲ್ಲ ಏರ್ಪಡಿಸಲು ಹೊರಗಿನಿಂದ ಪ್ರಾತ್ಯಕ್ಷಿಕೆ ಮಾಡಿತೋರಿಸುವವರನ್ನು ಕರೆಸಬೇಕಾಗುವದು. ಇಂಥ ಜನರಿಗಾಗಿ ಸಮಾಧಾನಕರ ಯೋಗ್ಯ ವಸತಿ ಮತ್ತು ಭೋಜನದ ವ್ಯವಸ್ಥೆ ಮಾಡತಕ್ಕದ್ದು. ಪ್ರದರ್ಶನ ಸ್ಥಳದಲ್ಲಿಯೆ ಇಂಥವರಿಗಾಗಿ ಒಂದು ಅಡಗೆ ಮನೆಯನ್ನು ನಡೆಸಬೇಕಾಗುವದು. ಈ ಅಡಿಗೆ ಮನೆ ಒಳ್ಳೆ ಚೊಕ್ಕಾಗಿ ಮತ್ತು ಸಮರ್ಥ ರೀತಿಯಿಂದ ನಡೆಯಲ್ಪಡಬೇಕು. ಅಗ್ಗ ಮತ್ತು ಪೌಷ್ಟಿಕ ಆಹಾರದ ಪ್ರಚಾರ ದೃಷ್ಟಿಯಿಂದ ಈ ಅಡಿಗೆಮನೆಗಳನ್ನು ಪಯೋಗಿಸಬೇಕು. ಇಲ್ಲಿಯಾದರೂ ಗಿರಣಿಗಳಲ್ಲಿ ತಯಾರಾದ, ಯಾವ ವಸ್ತುಗಳ ಸಂಪರ್ಕವಿರತಕ್ಕದ್ದಲ್ಲ. ಆಕಳ ಹಾಲು ಮತ್ತು ತುಪ್ಪವನ್ನು ಮಾತ್ರ ಹಾಕಬೇಕು ಇಲ್ಲವೆ ಒದಗಿಸಬೇಕು. ಸ್ಥಳೀಯ ಕಾರ್ಯಕರ್ತರು ಕೂಡ ಪ್ರದರ್ಶನದಲ್ಲಿಯ ಅಡಿಗೆ ಮನೆಯಲ್ಲಿ ತಯಾರಾದ ಅಡಿಗೆಯನ್ನೆ ಉಣ್ಣಬೇಕು.

೯ ಕೋಠಿ ಪದಾರ್ಥಕೊಳ್ಳುವದು

ಪ್ರತಿಯೊಂದು ಪದಾರ್ಥವೂ ಹಳ್ಳಿಯಲ್ಲಿ ತಯಾರಾದ ಶುದ್ಧ ಪದಾರ್ಥವಾಗಿರತಕ್ಕದ್ದೆಂದು ಬೇರೆಹೇಳಬೇಕಿಲ್ಲ. ಕೋಠಿಗೆ ಸಾಮಾನುಗಳನ್ನು ಕೊಳ್ಳುವ ಅಧಿಕಾರಿ ಒಳ್ಳೆ ಧ್ಯೇಯವಾದಿಯಾಗಿರತಕ್ಕದ್ದು. ಅಗ್ಗವೆಂದು ತೋರುವ ಪದಾರ್ಥಗಳನ್ನು ಕೊಳ್ಳಲು ಅವರು ಮೋಹಗೊಳ್ಳಬಾರದು ಗ್ರಾಮೋದ್ಯೋಗ ಮತ್ತು ಖಾದಿಗೆ ಪ್ರೋತ್ಸಾಹನೆ ಕೊಡುವದೆ ಅವನ ಮುಖ್ಯ ಧ್ಯೇಯವಾಗಿರತಕ್ಕದ್ದು. ಇಂಥ ಪದಾರ್ಥಗಳು ಒಂದು ವೇಳೆ ಸಿಕ್ಕದಿದ್ದರೆ ಪ್ರದರ್ಶನ ಸ್ಥಳದಲ್ಲಿಯೆ ಅಂಥ ಪದಾರ್ಥಗಳನ್ನುತ್ಪಾದಿಸುವ ಉದ್ಯೋಗಗಳನ್ನು ಮೊದಲು ಪ್ರಾರಂಭಿಸಬೇಕು. ಉದಾಹರಣೆಗಾಗಿ ಪಾಲಿಶ್ ಮಾಡದಿದ್ದ ಅಕ್ಕಿ ಸಿಕ್ಕದಿದ್ದರೆ ಕೈಯಿಂದ ಭತ್ತ ಕುಟ್ಟುವ ಉದ್ಯೋಗವನ್ನು ಕೆಲ ದಿನಗಳ ಹಿಂದ್ದೆಯೆ ಪ್ರಾರಂಭಿಸಿ ತಮಗೆ ಬೇಕಾಗುವಷ್ಟು ಬೇಡಿಕೆಯನ್ನು ಪೂರಯಿಸಿಕೊಳ್ಳಬೇಕು. ಭತ್ತ ಕೈಯಿಂದ ಕುಟ್ಟಿ ಪಾಲಿಶ್‌ಮಾಡದಿದ್ದ ಅಕ್ಕಿಯ ಪ್ರಚಾರವನ್ನು ಪ್ರದರ್ಶನದಲ್ಲಿ ಮಾಡುತಿರುವಾಗಲೆ ಗಿರಣಿ ಅಕ್ಕಿಯನ್ನು ತಿನ್ನಹತ್ತಿದರೆ ಪ್ರದರ್ಶನದ ಮೂಲ ಧ್ಯೇಯಕ್ಕೇ ಕೊಡ್ಲಿ ಪೆಟ್ಟನ್ನು ಹಾಕಿದಂತಾಗುವದು.

೧೦ ಯಾವಾಗ ಪ್ರದರ್ಶನವನ್ನು ಪ್ರಾರಂಭಿಸುವದು

ಸಮಸ್ಯೆಯ ಮಹತ್ವವನ್ನು ವಿಚಾರಿಸಿದರೆ, ಸಿದ್ಧತೆಗಾಗಿ ಸಾಕಷ್ಟು ಸಮಯವನ್ನು ಇಟ್ಟುಕೊಳ್ಳದೆ ಅವಸರದಿಂದ ಯಾವ ಪ್ರದರ್ಶನವನ್ನು ಏರ್ಪಡಿಸುವ ವಿಚಾರವನ್ನು ಮಾಡಕೂಡದು. ಪ್ರದರ್ಶನಗಳನ್ನು ಮೊದಲೆ ಯೋಚಿಸಬೇಕು ಸಾಮುಗ್ರಿಗಳನ್ನೆಲ್ಲ ಸಂಗ್ರಹಿಸಲು ಸಾಕಷ್ಟು ಸಮಯವನ್ನಿಟ್ಟುಕೊಳ್ಳಬೇಕು. ಯಂತ್ರೋಪಕರಣ ಮತ್ತು ಇತರ ಉಪಕರಣಗಳನ್ನು ಯೋಗ್ಯರೀತಿಯಿಂದ ಅಣಿಗೊಳಿಸಬೇಕು ಉದ್ಯೋಗಗಳು ಪೂರ್ಣ ಪ್ರಗತಿಪಥದಲ್ಲಿದ್ದಾಗ ಕೂಡ ಪ್ರೇಕ್ಷಕರಿಗಾಗಿ ಪ್ರದರ್ಶನಗಳ [illegible]ಸಬಹುದಾಗಿದೆ.

೧೧ ಕಟ್ಟಡ ಮತ್ತು ಚಪ್ಪರ

ಪಕ್ಕಾ ಕಟ್ಟಡವನ್ನು ಕಟ್ಟುವ ಅವಶ್ಯಕತೆಯೇನಿಲ್ಲ. ಕೇವಲ ಸಂಗ್ರಹಾಲಯ, ಅಡಿಗೆ ಮನೆ ಮತ್ತು ಊಟದ ಮನೆಗಳು ಪ್ರದರ್ಶನ ಮುಗಿಯುವವರೆಗಾದರೂ ಮಳೆಗಾಳಿಗೆ ಜಗ್ಗದಂತಹವಾಗಿರಬೇಕು. ಉದ್ಯೋಗಗಳಿಗಾಗಿ ಏರ್ಪಡಿಸುವ ಚಪ್ಪರಗಳೂ ಹುಲ್ಲು ಹಾಸಿಗೆಯವಾಗಿರಬೇಕು. ಪಕ್ಕಗಳಿಗೆ ಚಾಪೆಗಳನ್ನು ಹೆಣೆಯಬೇಕು. ಈ ಚಪ್ಪರಗಳನ್ನು ಹಾಕುವಾಗ ಕೇವಲ ಹಳ್ಳಿ ಸಾಮಾನಗಳನ್ನೇ ಉಪಯೋಗಿಸತಕ್ಕದ್ದು. ತಗಡಿನ ಚಪ್ಪರಗಳನ್ನು ಹಾಕಿದ್ದಾದರೆ ಪ್ರದರ್ಶನಗಳ ಅಂದ ಕೆಟ್ಟು ಹೋಗುವದು ತಮ್ಮ ಧ್ಯೇಯಗಳಿಗೂ ಅವು ಸರಿ ಹೋಗಲಾರವು.

೧೨ ದೀಪ

ದೀಪದ ವ್ಯವಸ್ಥೆಯೆಲ್ಲ ವನಸ್ಪತಿ ಎಣ್ಣೆಗಳದಿರತಕ್ಕದ್ದು. ಸೀಮೆ ಎಣ್ಣೆಯ ಪ್ರವೇಶ ಪ್ರದರ್ಶನದಲ್ಲಿ ಇರಕೂಡದು.

೧೩ ಸ್ವಚ್ಛತೆ

ಪ್ರತಿ ದಿನ ಇಡೀ ಪ್ರದರ್ಶನ ಸ್ಥಳವನ್ನೆಲ್ಲ ಉಡುಗಿ ಸ್ವಚ್ಛವಾಗಿಡತಕ್ಕದ್ದು. ಯೋಗ್ಯ ಉಚ್ಚಿ ಮನೆಗಳು, ಶೌಚ ಕೂಪಗಳು ಇರತಕ್ಕದ್ದು. ಪ್ರದರ್ಶನವನ್ನು ನೋಡಲು ಬಂದ ಹಳ್ಳಿಗರಿಗೆ ಮಾದರಿಯಾಗುವ ರೀತಿಯಲ್ಲಿ ಇವು ಇರತಕ್ಕದ್ದು. ಈ ಬಗೆಯ ಪ್ರದರ್ಶನಗಳಲ್ಲಿ ಫ್ಲಶ್ ಪದ್ಧತಿ ಮೊದಲಾದದ್ದು ಇರತಕ್ಕದ್ದಲ್ಲ. ಶೌಚವನ್ನು ಹೊರತೆಗೆಯುವ ಶೌಚಕೂಪಗಳು, ತೆಗ್ಗುಗಳು ಬಕೆಟ ಪದ್ಧತಿಯನ್ನು ಇಡಬೇಕು. ಇವುಗಳನ್ನು ಯೋಗ್ಯ ರೀತಿಯಿಂದ ಹೇಗೆ ಉಪಯೋಗಿಸಬೇಕೆಂಬ ಬಗ್ಗೆ ಹಳ್ಳಿಗರಿಗೆ ಸ್ವಯಂಸೇವಕರು ಸಲಹೆ ಸೂಚನೆಗಳನ್ನು ಕೊಡತಕ್ಕದ್ದು. ಇಂಥ ಶೌಚ ಕೂಪಗಳ ಉಪಯುಕ್ತತೆ ಮತ್ತು ಅದನ್ನು ಗೊಬ್ಬರವನ್ನಾಗಿ ಎಂತು ಉಪಯೋಗಿಸಬೇಕು ಮುಂತಾದ್ದನ್ನೆಲ್ಲ ವಿವರವಾಗಿ ತಿಳಿಸಿ ಹೇಳಬೇಕು.

೧೪ ಭಿತ್ತಿ ಪತ್ರಿಕೆ, ನಕ್ಷೆಗಳು

ಪ್ರೇಕ್ಷಕರಿಗೆ ಸಂಪೂರ್ಣ ಸಮಾಧಾನವಾಗುವ ರೀತಿಯಲ್ಲಿ ಪ್ರತಿಯೊಂದು ಉದ್ಯೋಗದ ವಿಧಾನ ಮತ್ತು ವಿವರಗಳೆಲ್ಲ ದಕ್ಷತೆಯಿಂದ ವಿವರಿಸಲ್ಪಡಬೇಕು. ಇದಕ್ಕಾಗಿ ಭಿತ್ತಿ ಪತ್ರಿಕೆಗಳು ವಿವರಣೆಯ ನಕ್ಷೆಗಳು ಸ್ಥಳೀಯ ಭಾಷೆಗಳಲ್ಲಿರತಕ್ಕದ್ದು. ಬರಿ ಅಕ್ಷರಗಳಿಂದ ವಿವರಿಸಿದ್ದಾದರೆ ಆವಶ್ಯಕ ಪರಿಣಾಮವಾಗಲಾರದು. ನಮ್ಮ ನಿರಕ್ಷರಿ ಹಳ್ಳಿಗರಿಗಾಗಿ ನಕ್ಷೆ ಚಿತ್ರ ಮೊದಲಾದವುಗಳಿಂದ ವಿವರಿಸುವುದು ಹೆಚ್ಚು ಹಿತಕರ ಮತ್ತು ಪರಿಣಾಮಕರವಾದುದು.

೧೫ ಉಡುಪು ಮತ್ತು ಸಮವಸ್ತ್ರ

ಪ್ರಾತ್ಯಕ್ಷಿಕೆ ಮಾಡಿ ತೋರಿಸುವವರೆಲ್ಲರು, ಕಾರ್ಯಕರ್ತರು ಸ್ವಯಂಸೇವಕರು ಅಧಿಕಾರಿಗಳು ಮತ್ತು ಕಾರಕೂನರು ಪ್ರದರ್ಶನದಲ್ಲಿ ಕೆಲಸ ಮಾಡುವವರೆಲ್ಲ ಶುದ್ಧ, ಮನ್ನಣೆ ಪಡೆದ ಖಾದಿ ಉಡುಪನ್ನೇ ಧರಿಸಬೇಕು.

೧೬ ಸ್ಟೇಶನರಿ

ಬೇಕಾದ ಎಲ್ಲ ಸ್ಟೇಶನರಿಯನ್ನು ಅಂದರೆ ಬರೆವ ಕಾಗದ, ಪಾಕೀಟು, ಬ್ಯಾಜ್ಜುಗಳು, ತಿಕೀಟುಗಳು, ಪಾಸುಗಳು, ರಜಿಸ್ಟರುಗಳು, ರಿಕಾರ್ಡು ಬುಕ್ಕುಗಳು, ಹಸ್ತಪತ್ರಿಕೆಗಳು ಭಿತ್ತಿ ಪತ್ರಿಕೆಗಳು ಮೊದಲಾದವುಗಳೆಲ್ಲ ಕೈಕಾಗದಗಳಿಂದ ಮಾಡಿದವುಗಳೇ ಇರತಕ್ಕದ್ದು.

೧೭ ಮನೋರಂಜನೆ

ಕೇವಲ ಕಾಲಕ್ಷೇಪ ಮಾಡಲು ಇವನ್ನು ಏರ್ಪಡಿಸತಕ್ಕದ್ದಲ್ಲ. ಹಳ್ಳಿಲಾವಣಿ, ನೃತ್ಯ ಮತ್ತು ಸಂಗೀತ ಮೊದಲಾದವುಗಳೆಲ್ಲ ಉಚ್ಚ ತರಗತಿಯವಿರಬೇಕು. ನಮ್ಮ ಸಂಸ್ಕೃತಿ ಮತ್ತು ಕಲೆಯ ಅತ್ಯುಚ್ಚ ಸ್ಥಾನದ ನಿದರ್ಶಕಗಳಾಗಿರಬೇಕು ಇವು.

ರಾಜಕೀಯ ಆವೇಶಯುಕ್ತ ವ್ಯಾಖ್ಯಾನಗಳನ್ನೇರ್ಪಡಿಸಬಾರದು. ಆದರೆ ಕೇವಲ ಬೋಧಪ್ರದ ಸುದ್ದಿಸಂಗತಿಗಳಿಂದೊಡಗೂಡಿದ ಜ್ಞಾನವರ್ಧಕ ವ್ಯಾಖ್ಯಾನಗಳನ್ನು ಏರ್ಪಡಿಸತಕ್ಕದ್ದು.

೧೮ ವಿಧಾಯಕ ಕಾರ್ಯಕ್ರಮ

ಆಯಾ ಸಂಸ್ಥೆಗಳ ಸಲಹೆ ಮತ್ತು ಸಹಕಾರಗಳಿಂದ ವಿಧಾಯಕ ಕಾರ್ಯಕ್ರಮದ ಉಳಿದ ವಿಷಯಗಳ ಪ್ರಾತ್ಯಕ್ಷಿಕೆಗಳನ್ನೂ ತೋರಿಸತಕ್ಕದ್ದು.

—ಜೆ. ಸಿ. ಕುಮಾರಪ್ಪ

ವಿಧಾಯಕ ಕಾರ್ಯಕ್ರಮ

೧೯೪೭ ನೇ ಇಸ್ವಿಯ ಮಾರ್ಚ ೭ ನೇ ತಾರೀ[illegible] ದಿನ ಕೂಡಿದ ಕಾಂಗ್ರೆಸ್ ಕಾರ್ಯ ಸಮಿತಿಯು ಕೆಳಗಿನ ಗೊತ್ತುವಳಿಯನ್ನು ಸ್ವೀಕರಿಸಿತು.

ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷರು ಕಾರ್ಯದರ್ಶಿಗಳು ಮತ್ತು ಅಖಿಲ ಭಾರತ ಗ್ರಾಮೋದ್ಯೋಗ ಸಂಘ ಹಾಗು ತಾಲೀಮು ಸಂಘದ ಪ್ರತಿನಿಧಿಗಳು ಅಲಹಾಬಾದಿನಲ್ಲಿ ಕೂಡಿದ ಪರಿಷತ್ತಿನಲ್ಲಿ ವಿಧಾಯಕ ಕಾರ್ಯಕ್ರಮದ ಸಂಬಂಧದಲ್ಲಿ ಸ್ವೀಕರಿಸಿದ ಗೊತ್ತುವಳಿಯನ್ನು ಸಾಮಾನ್ಯವಾಗಿ ಕಾಂಗ್ರೆಸ್ ಕಾರ್ಯ ಸಮಿತಿ ಮನ್ನಿಸುತ್ತದೆ. ಕಾಂಗ್ರೆಸ್ ಕಾರ್ಯ ಸಮಿತಿಯು ನೇಮಿಸುವ ಈ ಕೆಳಗಿನ ವಿಧಾಯಕ ಕಾರ್ಯ ಸಮಿತಿಯ ಸಲಹೆಯ ಮೇರೆಗೆ ಜನರಲ್ ಸೆಕ್ರೆಟರಿಗಳು ಅದನ್ನು ಕಾರ್ಯರೂಪದಲ್ಲಿ ತರಬೇಕೆಂದು ಈ ಮೂಲಕ ಆದೇಶಿಸುತ್ತದೆ.

ಅಲ್ಲದೆ ಕೆಳಗೆ ನಿರ್ದಿಷ್ಟ ಪಡಿಸಿದ ಖಾದಿ, ಗ್ರಾಮೋದ್ಯೋಗ, ಮೂಲ ಶಿಕ್ಷಣ, ಹರಿಜನ ಕಾರ್ಯ, ಸಾಕ್ಷರತೆ ಮತ್ತು ಹಿಂದುಸ್ತಾನಿ ಪ್ರಚಾರ ಮೊದಲಾದ ವಿಷಯಗಳಲ್ಲಿ ಕಾಂಗ್ರೆಸ್ ಸಮಿತಿಗಳಿಗೆ ಮತ್ತು ಸಾರ್ವಜನಿಕರಿಗೆ ಸಲಹೆ ಸೂಚನೆಗಳನ್ನು ಕೊಡುವದಕ್ಕಾಗಿ ಕಾಂಗ್ರೆಸ್ ಕಾರ್ಯ ಸಮಿತಿಯು ಕೆಳಗೆ ಬರೆದ ಸದಸ್ಯರುಳ್ಳ ವಿಧಾಯಕ ಕಾರ್ಯಸಮಿತಿಯನ್ನು ನೇಮಿಸುತ್ತದೆ.

ಶ್ರೀ ಶಂಕರರಾವ ದೇವ
ಶ್ರೀ ಪ್ರಫುಲ್ಲ ಚಂದ್ರ ಘೋಷ
ಶ್ರೀ ಜುಗಲ್ ಕಿಶೋರ
ಶ್ರೀ ಜಯರಾಮದಾಸ ದೌಲತರಾಮ
ಶ್ರೀ ರಂಗನಾಥ ದಿವಾಕರ
ಶ್ರೀಮತಿ ಸುಚೇತಾ ಕೃಪಲಾನಿ

ಮತ್ತು ಚರಕಾ ಸಂಘ ಗ್ರಾಮೋದ್ಯೋಗ ಸಂಘ ಮತ್ತು ತಾಲೀಮು ಸಂಘಗಳ ಒಬ್ಬೊಬ್ಬ ಪ್ರತಿನಿಧಿಗಳು ಅಂದರೆ—

ಶ್ರೀ. ಜೆ. ಸಿ. ಕುಮಾರಪ್ಪ
ಶ್ರೀ ಜಾಜೂಜಿ ಮತ್ತು
ಶ್ರೀ ಅರಣ್ಯ ನಾಯಕಮ್.

ಮೇಲೆ ನಿರ್ದಿಷ್ಟ ಪಡಿಸಿದ ವಿಧಾಯಕ ಸಂಘಗಳ ಪ್ರತಿನಿಧಿಗಳನ್ನು ಬಿಟ್ಟು ವಿಧಾಯಕ ಕಾರ್ಯ ಸಮಿತಿಯ ಉಳಿದ ಸದಸ್ಯರ ಕಡೆಗೆ ಆ ಸಮಿತಿಯು ಗೊತ್ತುಪಡಿಸುವ ವಿಧಾಯಕ ಕಾರ್ಯದ ಒಂದೊಂದು ಶಾಖೆಯನ್ನು ಒಪ್ಪಿಸಿ ಕೊಡಬೇಕೆಂದು ಈ ಮೂಲಕ ಸೂಚಿಸುತ್ತದೆ.

ತನ್ನ ಚಟುವಟಿಕೆಗಳ ಹಾಗು ವಿಧಾಯಕ ಕಾರ್ಯಕ್ರಮದಲ್ಲಿ ಆದ ಪ್ರಗತಿಯ ವರದಿಯನ್ನು ವಿಧಾಯಕ ಕಾರ್ಯ ಸಮಿತಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕಾಂಗ್ರೆಸ ಕಾರ್ಯ ಸಮಿತಿಗೆ ಒಪ್ಪಿಸತಕ್ಕದ್ದು.

ವಿಧಾಯಕ ಕಾರ್ಯ ಸಮಿತಿಯವರು ಆಗ್ಗಾಗೆ ಹಾಕಿಕೊಡುವ ಕಾರ್ಯಕ್ರಮವನ್ನು ಯಶಸ್ವಿ ಮಾಡುವಲ್ಲಿ ಕಾಂಗ್ರೆಸ್ ಸಂಸ್ಥೆಗಳೆಲ್ಲ ವಿಧಾಯಕ ಕಾರ್ಯ ಸಮಿತಿಯ ವರೆಗೆ ಸಂಪೂರ್ಣ ಸಹಕಾರವನ್ನು ನೀಡಬೇಕೆಂದು ಕಾಂಗ್ರೆಸ್ ಕಾರ್ಯ ಸಮಿತಿಯು ಈ ಮೂಲಕ ಆದೇಶಿಸುತ್ತದೆ.

ಓಮಂದೂರ ರಾಮಸ್ವಾಮಿ ರೆಡ್ಡಿಯಾರ

ಮದ್ರಾಸ ಶಾಸನ ಸಭೆಯ ಕಾಂಗ್ರೆಸ ಪಕ್ಷದ ಹೊಸ ಧುರೀಣರು

ಮದ್ರಾಸ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆ ೨೧ ನೇ ತಾರೀಕು ಸೇರಿ ಓಮಂದೂರ ರಾಮಸ್ವಾಮಿ ರೆಡ್ಡಿಯಾರ ಇವರು ಹೊಸ ಧುರೀಣರಾಗಿ ಆರಿಸಲ್ಪಟ್ಟರು. ಇವರಿಗೆ ೧೧೬ ಮತಗಳು ಶ್ರೀ ಟಿ. ಪ್ರಕಾಶಂ ಇವರಿಗೆ ೭೩ ಮತಗಳು ಬಿದ್ದವು. ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರು ಪಕ್ಷದ ಸಭೆಯಲ್ಲಿ ಉಪಸ್ಥಿತರಾಗಿದ್ದು ಮೊದಲು ೧೫ ನಿಮಿಷ ಭಾಷಣ ಮಾಡಿದರು.

ಗಾಂಧೀ ಯಾತ್ರೆ

ಘೋಷಾ ಪದ್ಧತಿ

ತಾ ೨೩ ಕ್ಕೆ ಗಾಂಧೀಜಿಗೆ ಪ್ರಾರ್ಥನಾ ಸಭೆಯಲ್ಲಿ ಕೆಲ ಪ್ರಶ್ನೆಗಳನ್ನು ಕೇಳಲಾಯಿತು.

ಪ್ರ:- ಪರದಾ (ಘೋಷಾ) ಪದ್ಧತಿಯನ್ನು ನಿಷ್ಠುರವಾಗಿ ಪ್ರಯೋಗಿಸುವದರಿಂದ ಸ್ತ್ರೀಯರಿಂಥ ಪಾವಿತ್ರ್ಯವನ್ನು ಸುಧಾರಿಸಿದಂತಾಗದೆ ?

ಉತ್ತರ:- ಪರದಾ ಪದ್ಧತಿಯನ್ನು ಕೆಲವು ದುರಾಚಾರದೆಂದು ಮುಸ್ಲಿಂ ಟೀಕಾಕಾರರು ಕೆಲವರು ತಮ್ಮಷ್ಟಕ್ಕೆ ಸ್ಪಷ್ಟರಿಸಿದ್ದಾರೆಂದು ಗಾಂಧೀಜಿ ಹೇಳಿದರು. ಆದರೂ ಪರದಾ ಅನುಸರಿಸುವ ಅನೇಕ ಹಿಂದೂ ಸ್ತ್ರೀಯರೂ ಅದನ್ನಾಚರಿಸದ ಅನೇಕ ಮುಸ್ಲಿಂ ಸ್ತ್ರೀಯರೂ ಇರುವದರಿಂದ ಈ ಪದ್ಧತಿಗೆ ಪವಿತ್ರತೆ ತರುವ ಶಕ್ತಿ ಇದೆ. ಹಿಂದುಸ್ಥಾನದಲ್ಲಿಯೂ ಅದನ್ನನುಸರಿಸದ ಅನೇಕ ಮುಸ್ಲಿಂ ಸ್ತ್ರೀಯರ ಪರಿಚಯ ತಮಗುಂಟು. ನಿಜವಾದ ಪರದೆಯೆಂದರೆ ಹೃದಯದ್ದು. ಪರದೆಯಿಲ್ಲದ ಪಡತಿ ಎದುರು ಬಂದ ಪುರುಷನಲ್ಲಿ ಕೆಟ್ಟ ಹುಡುಗಿ ಅವನ ಇಂಗಿತವನ್ನು ಉಲ್ಲಂಘಿಸುತ್ತಾಳೆ. ಅವರ ಇಂಗಿತವನ್ನು ಅನುಸರಿಸಿದಾಳೆ ದೈವಂಬರನ ಆದೇಶವನ್ನು ಪಾಲಿಸುತ್ತಾಳೆ.

ಇಂಗಿತಾರ್ಥವೇ ಸಂಜೀವನ, ಬರಿ ಶಬ್ದ ಮೃತ್ಯುಸ್ವರೂಪ. ಆನೆಯ ಚಿತ್ರರಿಸಿದ ರುಂಡಿ ಗಣಪತಿ ವಿಶ್ವಸನಂತೆ ಕಂಡರೆ ಓಂಕಾರ ಸ್ವರೂಪ ಗಣಪತಿ ತಾರಕ ಸಂಕೇತವಾಗುತ್ತಾನೆ. ಹತ್ತು ತಲೆಯ ರಾವಣ ಅಡಗೂಲಜ್ಜಿ ಕಥೆಯ ಮೂಢ; ತನ್ನ ಬುದ್ಧಿಯನ್ನು ನಿಗ್ರಹಿಸಲಾರದೆ ಇಂದ್ರಿಯಗ್ರಾಮದಿಂದ ಸಿಕ್ಕಾಬಟ್ಟೆ ವಿಚಲಿತನಾದ ಮನುಷ್ಯನವನೆಂದು ಅರ್ಥ ಮಾಡಿದರೆ, ಅವನು ಆವೇಳೆ ಶಿರಸ್ಸಿನ ರಕ್ಕಸನೆಂಬುದು ನಿಜ.

ಸವರ್ಣೀಯರ ಕರ್ತವ್ಯ

ಪ್ರ:- ಸವರ್ಣ ಹಿಂದುಗಳು ಅಸ್ಪೃಶ್ಯರ ಹಿತವನ್ನು ಹೇಗೆ ನೋಡಿಕೊಂಡಾರು ? ತಮ್ಮ ಕೈಲಿ ಸಿಕ್ಕು ಇಷ್ಟು ಕಾಲ ಒದ್ದಾಡಿದ ನಿಮ್ನ ವರ್ಗಗಳವರನ್ನು ಅವರು ಹೇಗೆ ಮನಗಂಡಾರು ? ಅದರಿಂದ ಅಸ್ಪೃಶ್ಯರ ಹಿತವನ್ನು ಅವರ ಜಾತಿಯವರಿಗೇ ಒಪ್ಪಿಸುವದು ಲೇಸಲ್ಲವೆ ?

ಉತ್ತರ:- ಅಸ್ಪೃಶ್ಯರೆನಿಸಿಕೊಳ್ಳುವವರಿಗೆ ಮೇಲ್ಜಾತಿಯವನು ಮಾಡಬೇಕಾದ ಪುಣ್ಯ ಕರ್ತವ್ಯಗಳಿವೆಯೆಂದು ನನ್ನ ತಿಳುವಳಿಕೆ. ಅವನು ಕಾಯಾ ವಾಚಾ ಭಂಗಿಯಾಗಬೇಕು. ಅದು ಕೈಗೂಡಿದಾಗ ಅಸ್ಪೃಶ್ಯರು ಒಂದೇ ಉಸಿರಿಗೆ ಉದ್ಧಾರ ಹೊಂದುವರು. ಅಗಲೇ ಹಿಂದೂತ್ವ ಜಗತ್ತಿಗೊಂದು ಉಜ್ವಲ ಆದರ್ಶವಾಗುವದು. ಹೀಗಾದರೆ ಪಾಯಖಾನೆ ಬಳಿಯುವದರಲ್ಲಿ ದೊಡ್ಡ ಪಲ್ಲಟವಾದೀತು. ಇಂಗ್ಲೆಂಡಿನಲ್ಲಿ ನಿಜವಾದ ಭಂಗಿಗಳು ಪ್ರಸಿದ್ಧ ಇಂಜಿನಿಯರರೂ ಸ್ವಚ್ಛತಾತಜ್ಞರೂ ಆಗಿದ್ದಾರೆ. ಸಮಾಜ ಉದಾಸವೂ ಮುಂದಗಾಮಿಯೂ ಆಗದಿರುವಷ್ಟು ದಿನ ಹಿಂದುಸ್ಥಾನದಲ್ಲಿ ಅದು ಸಾಧ್ಯವಿಲ್ಲ.

ಕೇಂದ್ರ ಮತ್ತು ಪರಿಘ

ಕೇಂದ್ರದಲ್ಲಿ ಎಲ್ಲವೂ ಹದಗೆಟ್ಟು ಹೋಗಿರುವಾಗ ಐಕ್ಯವನ್ನುಳಿಸಲು ಸಾಮಾನ್ಯ ಜನರೇನು ಮಾಡಬಲ್ಲರು ? ಎಂದು ತಾ. ೨೩ ರ ಸಭೆಯಲ್ಲಿ ಗಾಂಧೀಜಿಯನ್ನು ಕೇಳಲಾಯಿತು.

ಉ:- ವಿಜ್ಞಾನಶಾಸ್ತ್ರದಲ್ಲಿ ಏಕಕಾಲಕ್ಕೆ ಎರಡು ತತ್ವಗಳು ಪ್ರವೃತ್ತಿಯಲ್ಲಿರುವವೆಂದು ಹೇಳಲಾಗಿವೆ. ಒಂದು ಕೇಂದ್ರೋನ್ಮುಖ ಇನ್ನೊಂದು ಕೇಂದ್ರವಿಮುಖ. ಈ ನಿಯಮ ಜೀವನಕ್ಕೂ ಅನ್ವಯಿಸಬೇಕು. ಕೇಂದ್ರ ಅಥವಾ ಸರಕಾರವನ್ನೆಲ್ಲರನ್ನು ಆಕರ್ಷಿಸುತ್ತದೆ. ಸರಕಾರ ಒಳ್ಳೆದಾಗಿದ್ದರೆ ಆ ಕೇಂದ್ರೋನ್ಮುಖ ಆಕರ್ಷಣೆಗೆ ನಾವು ಅನುಕೂಲರೂ ಆಗುತ್ತೇವೆ. ಅದೇ ಪ್ರಕಾರ ಕೇಂದ್ರವಿಮುಖ ಆಕರ್ಷಣ ನಿಯಮವನ್ನು ಅನುಸರಿಸಿ ನಾವು, ಹೈದರಾಬಾದ ಗ್ರಾಮವಾಸಿಗಳು, ಕೇಂದ್ರವನ್ನು ನಮ್ಮೆಡೆಗೆ ಸೆಳೆಯುತ್ತೇವೆ. ಹೀಗೆ ಎರಡೂ ಶಕ್ತಿಗಳು ಸರಿಯಾಗಿ ಕೆಲಸಮಾಡಿದರೆ ಕೇಂದ್ರದಲ್ಲಿಯೂ ಪರಿಘದಲ್ಲಿಯೂ ವ್ಯವಸ್ಥಿತ ಸರಕಾರ ಇರಬಲ್ಲದು. ಆದರೆ ಕೇಂದ್ರ ತಪ್ಪುದಾರಿ ಹಿಡಿದಾಗ ೭ ಲಕ್ಷ ಹಳ್ಳಿಗಳ ಮೇಲೆ ಅದು ಪ್ರಭುತ್ವ ನಡೆಸುವದಕ್ಕೆ ಅರ್ಥವಿಲ್ಲ. ಜನರಿಗೆ ಕೇಂದ್ರವನ್ನೂ ಅದರ ಘನ ರಾಜಕಾರಣವನ್ನೂ ಅವುಗಳ ಪಾಡಿಗೆ ಬಿಟ್ಟು ಹಳ್ಳಿಗರು ಸೌಹಾರ್ದದಿಂದ ಬಾಳಬೇಕು.

ಪ್ರ:- ಜಾತಿಗಾಗಿ ಸ್ವಾರ್ಥವನ್ನು ಬಲಿಗೊಡುವವನು ಅಷ್ಟು ಮಟ್ಟಿಗಾದರೂ ಸ್ವಾರ್ಥತ್ಯಾಗಿಯಲ್ಲವೆ ? ಅಂಥ ಮನುಷ್ಯನಿಂದ ರಾಷ್ಟ್ರಕ್ಕಾಗಿ ಜಾತಿ ಸ್ವಾರ್ಥವನ್ನು ಬಲಿಗೊಡಿಸುವಂತೆ ಮಾಡುವ ಬಗೆ ಹೇಗೆ ?

ಉ:- ಯಾರ ತ್ಯಾಗದ ಸೀಮೆ ಜಾತಿ ಹಿತದಿಂದಾಚೆಗೆ ಹೋಗಲಾರದೋ ಅವನು ತಾನೂ ಸ್ವಾರ್ಥಿಯಾಗಿ ತನ್ನ ಜಾತಿಯನ್ನೂ ಸ್ವಾರ್ಥಕ್ಕೆಳೆಯುವವನು. ವ್ಯಕ್ತಿ ಸಮಾಜಕ್ಕೂ ಸಮಾಜ ಜಿಲ್ಲೆಗೂ ಜಿಲ್ಲೆ ಪ್ರಾಂತಕ್ಕೂ ಪ್ರಾಂತ ರಾಷ್ಟ್ರಕ್ಕೂ ರಾಷ್ಟ್ರ ಜಗತ್ತಿಗೂ ಬೇಕಾಗಿ ಸ್ವಾರ್ಥತ್ಯಾಗ ಮಾಡುವದೇ ಯೋಗ್ಯ ಮಾರ್ಗ. ಸಮುದ್ರದಿಂದ ಬೇರಾದ ಒಂದು ಹನಿ ಏಕಕ್ಕೂ ಬಾರದೆ ಹೆಸರಳಿದು ಹೋಗುವದು. ಅದೇ ಸಮುದ್ರದಲ್ಲಿದ್ದರೆ ಹಿರಿ ಹಡಗುಪಡೆಯನ್ನು ಉಡಿಯಲ್ಲಿ ಹೊತ್ತ ಗೌರವದಲ್ಲಿ ಅದೂ ಪಾಲು ಪಡೆಯುವದು.

ಪ್ರ:- ಸ್ವತಂತ್ರ ಹಿಂದುಸ್ಥಾನದಲ್ಲಿ ಯಾರ ಹಿತ ವರಿಷ್ಠವಾಗಿರಬೇಕು ? ನೆರೆರಾಜ್ಯ ಕಷ್ಟದಲ್ಲಿದ್ದರೆ ಸ್ವತಂತ್ರ ಹಿಂದುಸ್ಥಾನವೇನು ಮಾಡಬೇಕು ?

ಉ:- ಇದಕ್ಕೆ ಹಿಂದಿನ ಪ್ರಶ್ನೆಯಲ್ಲಿಯೇ ಉತ್ತರ ದೊರಕಿದೆ. ನಿಜವಾದ ಸ್ವತಂತ್ರ ಹಿಂದುಸ್ಥಾನ ನೆರೆಹೊರೆಯವರ ದೈನ್ಯದಲ್ಲಿ ಸಹಾಯಕ್ಕೆ ಬಂದೇ ತೀರುವದು. ಅಫಗಾಣಿಸ್ಥಾನ, ಸಿಂಹಳ, ಬ್ರಹ್ಮದೇಶಗಳನ್ನು ಗಾಂಧೀಜಿ ನಿರ್ದೇಶಿದರು. ಈ ಪ್ರಕಾರದಿಂದಲೇ ವ್ಯಕ್ತಿಯ ತ್ಯಾಗ ಸತ್ವಶಾಲಿಯಾದೀತು, ಮಾನವ್ಯವನ್ನೆ ವ್ಯಾಪಿಸೀತು.

ಸ್ವದೇಶಿಯ ಸತ್ಯಾರ್ಥ

ಗಲಭೆಯಲ್ಲಿ ಹಾಳಾಗಿ ಮತ್ತೆ ಸರಕಾರದಿಂದ ಪುನಃ ಕಟ್ಟಲ್ಪಟ್ಟ ಪ್ರಾರ್ಥನಾಲಯವೊಂದರಲ್ಲಿ ತಾ ೨೭ ಕ್ಕೆ ಗಾಂಧೀಜಿ ಪ್ರಾರ್ಥನೆ ಜರುಗಿಸಿದರು. ಆ ಮಂದಿರದ ಪೂಜಾರಿ ಮೂರ್ತಿಯನ್ನು ಬೇರೆ ಕಡೆ ಬಚ್ಚಿಟ್ಟು ಪ್ರಸಂಗಾವಧಾನ ತೋರಿಸಿದರಿಂದ ಗರ್ಭಗುಡಿಯೊಂದು ಧ್ವಂಸದಿಂದ ಪಾರಾಗಿತ್ತು. ಪ್ರಾರ್ಥನಾಲಯವನ್ನು ತಿರುಗಿ ಕಟ್ಟುವಾಗ ಹಳೆ ತುಕ್ಕು ಹಿಡಿದ ತಗಡುಗಳನ್ನು ಉಪಯೋಗಿಸಲಾಯಿತೆಂದು ದೂರಲಾಗಿತ್ತು. ತುಕ್ಕು ಹಿಡಿದ ತಗಡುಗಳಿಗೆ ಬಣ್ಣ ಬಳಿದು ಇನ್ನೂ ಕೆಡದಂತೆ ನೋಡಿಕೊಳ್ಳಬೇಕೆಂದು ಗಾಂಧೀಜಿ ಹಾರೈಸಿದರು.

ಪ್ರ:- ತನ್ನ ಹತ್ತಿರದವರನ್ನು ಸೇವಿರುತ್ತ ಇರುವಾಗಲೇ ಒಬ್ಬನು ಮಾನವ್ಯದ ಸೇವೆಮಾಡಬಹುದೆ ? ಸ್ವದೇಶಿಯ ಅರ್ಥವೇನು ?

ಉ:- ಹಿಂದಿನ ಸಂಜೆಯೇ ಈ ಪ್ರಶ್ನೆಗೆ ಉತ್ತರ ಕೊಡಲಾಗಿದೆಯೆಂದು ಗಾಂಧೀಜಿ ತಿಳಿಸಿದರು. ನೆರೆಯುವರನ್ನೂ ಮಾನವ್ಯವನ್ನೂ ಏಕಕಾಲಕ್ಕೆ ಸೇವಿಸಬಹುದೆಂಬ ಸತ್ಯದಲ್ಲಿ ತಮಗೆ ಪೂರ್ಣ ವಿಶ್ವಾಸವುಂಟು. ಆದರೆ ಆ ನೆರೆಯವರ ಸೇವೆಯಲ್ಲಿ ಯಾವುದೇ ಸ್ವಾರ್ಥವಾಗಲಿ ಸಂಕುಚಿತತೆಯಾಗಲಿ ಇರಬಾರದು. ಅರ್ಥಾತ್ ಅದರಲ್ಲಿ ಇನ್ನಾವ ವ್ಯಕ್ತಿಯ ಶೋಷಣೆಯಿರಬಾರದು. ಅಗ ಆ ನೆರೆಹೊರೆಯವರು ಆ ಸೇವೆಯ ಇಂಗಿತವರಿತು ಅದೇ ಪ್ರಕಾರ ತಮ್ಮ ನೆರೆಯವರಿಗೆ ಸೇವೆ ಸಲ್ಲಿಸುವದು ಧರ್ಮವೆಂದು ತಿಳಿಯುವರು. ಹನಿಹನಿ ಸೇರಿ ಹಳ್ಳ, ಹಳ್ಳಹಳ್ಳ ಸೇರಿ ಸಮುದ್ರವೆಂಬಂತೆ ಈ ಸೇವಾಧರ್ಮ ಜಗತ್ತನ್ನೆ ವ್ಯಾಪಿಸುವದು.

ಆದರಿಂದ ಸ್ವದೇಶಿಯೆಂದರೆ ದೂರದವನನ್ನು ಬಿಟ್ಟು ಹತ್ತಿರದವನ ಸೇವೆಯೆಂದು ಅರ್ಥವಾಗುವದು. ಮೊದಲೇ ಹೇಳಿದಂತೆ ಆ ಹತ್ತಿರದವನು ತನ್ನ ನೆರೆಯವನಿಗೆ ಸೇವೆ ಸಲ್ಲಿಸಬೇಕು. ಈ ಪ್ರಕಾರದ ಸ್ವದೇಶಿಯ ಸಂಕುಚಿತತೆಯಿಲ್ಲ. ಮಾನವನ ಸೇವಾಸಾಮರ್ಥ್ಯಕ್ಕೆ ಮಿತಿಯುಂಟೆಂಬ ಶಾಸ್ತ್ರೀಯ ಸತ್ಯವನ್ನು ಒಪ್ಪಿಕೊಂಡಂತೆ ಮಾತ್ರ ಆಯಿತು ಅಷ್ಟೆ.

ಔದ್ಯೋಗೀಕರಣ

ಪ್ರ:- ಸರಕಾರದವರು ದೇಶದ ಕಚ್ಚಾ ಸಾಮಗ್ರಿಗಳನ್ನು ಪರಮಾವಧಿ ಅಭಿವೃದ್ಧಿಗೆ ತರುವ ಗೋಸುಗ ಔದ್ಯೋಗೀಕರಣ ಯೋಜನೆಗಳನ್ನು ಪ್ರಾರಂಭಿಸುತ್ತಿದ್ದಾರೆ. ಆದರೆ ಅನುಪಯುಕ್ತವಾಗಿರುವ ಉಳಿದ ಮನುಷ್ಯ ಶಕ್ತಿಯನ್ನು ಕೊಳೆಯಗೊಡಲಾಗುತ್ತಿದೆ. ಇಂಥ ಯೋಜನೆಗಳನ್ನು ಸ್ವದೇಶಿಯೆನ್ನಬಹುದೆ ?

ಉ:- ಪ್ರಶ್ನೆ ಕೇಳಿದ ರೀತಿ ಉಚಿತವಾಗಿದೆಯೆಂದು ಗಾಂಧೀಜಿ ಒಪ್ಪಿದರು. ಸರಕಾರದ ಯೋಜನೆಯೇನೆಂದು ತಮಗೆ ಗೊತ್ತಿಲ್ಲ. ಆದರೂ ಕಚ್ಚಾ ಸಾಮಗ್ರಿಗಳ ಪ್ರಯೋಜನ ಪಡೆದು ಅದಕ್ಕಿಂತ ಎಷ್ಟೋ ಸತ್ವಶಾಲಿಯಾದ ಮನುಷ್ಯ ಶಕ್ತಿಯನ್ನು ಕಡೆಗಣಿಸುವ ಯೋಜನೆಗಳು ಒಗ್ಗಾಲಿ ಯೋಜನೆಗಳೆಂದೂ ಅವು ಎಂದೆಂದೂ ಮಾನವ ಸಮಾನತೆಯನ್ನು ಸ್ಥಾಪಿಸಲಾರವೆಂದೂ ಅವರು ಸಾರಿ ಹೇಳಿದರು.

ಜಗತ್ತಿನಲ್ಲೆಲ್ಲ ಅತ್ಯಂತ ಔದ್ಯೋಗೀಕೃತ ರಾಷ್ಟ್ರವಾಗಿರುವ ಅಮೇರಿಕೆ ಕೂಡ ದಾರಿದ್ರ್ಯ ನೀಚತೆಗಳನ್ನು ದಬ್ಬಲು ಸಮರ್ಥವಾಗಿಲ್ಲ. ವಿಶ್ವವ್ಯಾಪಿ ಮನುಷ್ಯ ಶಕ್ತಿಯನ್ನು ಅಲಕ್ಷಿಸಿ ಕೆಲವೇ ಕೈಗಳಲ್ಲಿ ಅಧಿಕಾರವನ್ನು ಸಂಚಯಗೊಳಿಸಿದ್ದರಿಂದ ಹಲವರನ್ನು ಬಡಿದು ಕೆಲವರು ಸಂಪತ್ತನ್ನು ಕೂಡಹಾಕಿದರು. ಪರಿಣಾಮವಾಗಿ ಅದರ ಔದ್ಯೋಗೀಕರಣ ಅಲ್ಲಿರುವ ಬಡವರಿಗೂ ಇಡೀ ಜಗತ್ತಿಗೂ ಸೇರಿಯೆ ಗಂಡಾಂತರಪ್ರಾಯವಾಗಿದೆ.

ಹಿಂದುಸ್ಥಾನ ಇಂಥ ಅನಾಹುತದಿಂದ ತಪ್ಪಿಸಿಕೊಳ್ಳಬೇಕಾದರೆ ಅದು ಅಮೇರಿಕೆಯಲ್ಲಿಯೂ ಇತರ ಪಾಶ್ಚಿಮಾತ್ಯ ದೇಶಗಳಲ್ಲಿಯೂ ಇರುವ ಗುಣಗಳನ್ನಷ್ಟೇ ಅನುಕರಿಸಿ ತೋರಿಕೆಗೆ ಮೋಹಕವಾಗಿದ್ದರೂ ಪರಿಣಾಮಭಯಂಕರವಾದ ಆರ್ಥಿಕ ಧೋರಣಗಳನ್ನು ಬಿಟ್ಟುಬಿಡಬೇಕು. ಆದ್ದರಿಂದ ನಿಜವಾದ ಯೋಜನೆ ಬೇಕಾಗಿರುವದು ಹಿಂದುಸ್ಥಾನದ ಎಲ್ಲ ಮನುಷ್ಯ ಶಕ್ತಿಯ ಉಪಯೋಗಮಾಡಿಕೊಳ್ಳಲೋಸುಗ. ಅದಕಾಗಿ ದೇಶದ ಕಚ್ಚಾ ಸಾಮಗ್ರಿಗಳನ್ನು ಹಳ್ಳಿಗಳಲ್ಲಿ ಹಂಚಬೇಕು ಹೊರತು ಅವುಗಳನ್ನು ಹೊರಗೆ ಕಳಿಸಿ ಸಿದ್ಧ ಸಾಮಗ್ರಿಗಳಾಗಿ ಮಾಡಿಸಿ ಅಸಾಧ್ಯರೊಕ್ಕ ಕೊಟ್ಟು ತಿರುಗಿ ಪಡೆಯುವದರಲ್ಲಿ ಅರ್ಥವಿಲ್ಲ.

ಪ್ರಶ್ನೋತ್ತರ ಮುಗಿದ ನಂತರ ತಮ್ಮಲ್ಲಿಗೆ ನಿಮ್ನ ವರ್ಗದ ಕೆಲ ಜನರು ಬಂದ ಸಂಗತಿಯನ್ನು ಗಾಂಧೀಜಿ ಅರುಹಿದರು. "ಜನರಿಗೆ ನಿಜವಾಗಿ ಧೀರರಾಗುವ ಬಗೆಯನ್ನು ಕಲಿಸಲು ನಾನು ಇಲ್ಲಿಗೆ ಬಂದುದೆಂದು ಅವರಿಗೆ ತಿಳಿಸಿದೆ. ಮೇಲ್ಜಾತಿಯವರು ಇನ್ನೂ ಮರಳದಿದ್ದುದರಿಂದ ಹಿಂದುಳಿದವರು ಭಯಪಡುವ ಕಾರಣವಿಲ್ಲ. ಭಯವನ್ನೊಂದು ತ್ಯಜಿಸಿದವರಿಗೆ ಶತ್ರುಗಳೇ ಇಲ್ಲ. ಅವರು ಧೀರರಾಗಿರುವದನ್ನು ಕಂಡರೆ ಮುಸ್ಲಿಮರೂ ಅವರ ಗೆಳೆಯರಾಗುವರು. ಹೇಡಿಗಳನ್ನು ಕಂಡರೆ ಮುಸ್ಲಿಮರಿಗೂ ಎಲ್ಲರಿಗೂ ವೈರ-ಶೌರ್ಯಸಾಧನೆಯ ರೀತಿ ಎದುರಾಳಿಯನ್ನು ಕೊಲ್ಲುವ ಕೌಶಲದಲ್ಲಿಲ್ಲ; ಯಾವದೇ ಮನುಷ್ಯ ಪ್ರಾಣಿಯನ್ನು ಶತ್ರುವೆಂದು ಬಗೆಯಲೊಪ್ಪದೆ, ಖಡ್ಗಧಾರೆಯ ಮುಂದೆ ಶರಣಾಗತನಾಗುವ ಬದಲು ಪ್ರಾಣದಾನಮಾಡುವ ನಿರ್ಧಾರದಲ್ಲಿದೆ.

ಆಮೇಲೆ ಗಾಂಧೀಜಿ ಬಾಲ್ಯವಿವಾಹ ವಿಧವಾವಿವಾಹದ ಅಭಾವ ಮೊದಲಾದ ಕೆಲ ಸಾಮಾಜಿಕ ಕುಸಂಪ್ರದಾಯಗಳನ್ನು ಟೀಕಿಸಿದರು.

ನಾಮ ಶೂದ್ರರ ಶಿಕ್ಷಣ

ತಾ ೨೮ಕ್ಕೆ ಗಾಂಧೀಜಿ ಹಿಂದಿನ ದಿನ ನಾಮ ಶೂದ್ರ ಸಮಾಜದ ಬಗೆಗೆ ಅಂದ ಮಾತುಗಳನ್ನೆ ಬೆಳೆಸಿದರು. ಅವರ ಶಿಕ್ಷಣ ಅಲಕ್ಷಿಸಲ್ಪಟ್ಟದ್ದರ ತಪ್ಪು ಸವರ್ಣ ಹಿಂದುಗಳ ಸೆರಗಿಗೇ ಇಕ್ಕಬೇಕಾದ ಗಂಟು. ಅವರಿಂದ ದಬ್ಬಾಳಲ್ಪಟ್ಟವರು ತಾವಾಗಿ ಶಿಕ್ಷಣ ತೆಗೆದುಕೊಳ್ಳಬೇಕೆಂದು ನಿರೀಕ್ಷಿಸುವದು ಸರಿಯಲ್ಲ. ಆದರೂ ನಾಮಶೂದ್ರರಲ್ಲಿ ಕೆಲವರು ಮೇಲ್ಜಾತಿಯವರೆನಿಸಿಕೊಳ್ಳುವವರಿಂದ ಸದ್ದಾನಗಳನ್ನು ಕೂಡಸ್ವೀಕರಿಸಬೇಡಿರೆಂದು ತಮ್ಮವರಿಗೆ ಉಪದೇಶಿಸುವದು ವಿಷಾದಕರ. ಅದು ಕಿಡಿಗೇಡಿ ಪ್ರಚಾರವೆನ್ನಬೇಕು. ಆದುದರಿಂದ ಭೂಮಿ ಮತ್ತು ಹುಡುಗಹುಡುಗಿಯರ ಹಾಜರಿಯ ವಿಷಯದಲ್ಲಿ ನಿಶ್ಚಿತ ಆಶ್ವಾಸನ ಕೊಡಬೇಕು. ಹಾಗೆ ಮಾಡಿದರೆ ಅನೇಕ ಹಿಂದುಗಳು ಪಶ್ಚಾತ್ತಾಪಗೊಂಡು ನಾಮಶೂದ್ರ ಬಾಲಬಾಲಿಕೆಯರಿಗೆ ಶಿಕ್ಷಣ ಕೊಡಲು ಮುಂದೆ ಬರಬಹುದು. ನಾಮಶೂದ್ರರು ಅವಶ್ಯಕ ಆಶ್ವಾಸನಗಳನ್ನು ಠಕ್ಕರ ಬಾಪಾ ಅವರಿಗೆ ಕಳಿಸಲಿ. ಬಾಪಾ ಅವರು ಮುಂದಿನದನ್ನು ಮಾಡುವರೆಂದು ಖಂಡಿತ ನಂಬಬಹುದು. ಈ ಮಕ್ಕಳಿಗೆ ಶಿಕ್ಷಣ ಕೊಡುವ ಅಭಿಮಾನಾಸ್ಪದ ಕರ್ತವ್ಯವನ್ನು ನೆರವೇರಿಸಲು ಸಾಕಷ್ಟು ಹಣವನ್ನೂ ಯೋಗ್ಯತೆಯನ್ನೂ ಸ್ಥಾನಿಕ ಹಿಂದುಗಳು ಒದಗಿಸುವರೆಂದು ಹಾರೈಸಲಾಗಿದೆ.

ಬಿಹಾರದ ಕರೆ

ಅನಂತರ ಗಾಂಧೀಜಿ ತಾವು ಬಿಹಾರಕ್ಕೆ ಹೋಗುವ ಪ್ರಸಂಗ ಬರಬಹುದೆಂದು ತಿಳಿಸಿದರು. ಅಲ್ಲಿ ಹಿಂದುಗಳು ಮುಸ್ಲಿಮರ ಮೇಲೆ ಮಾಡಿದ ಅತ್ಯಾಚಾರಗಳ ಮುಂದೆ ನೌಖಾಲಿ ತಿಪ್ಪೇರಾಗಳವು ತೃಣಪ್ರಾಯವಾಗಿದ್ದವೆಂದು ಅವರು ಹೇಳಿದರು. ತಾವು ಬಿಹಾರಕ್ಕೆ ಹೋಗಬೇಕೆಂದು ಬಂಗಾಲ ಮುಸ್ಲಿಮರು ಬಹಳ ಒತ್ತಾಯಗೊಳಿಸುತಿದ್ದರು. ಆದರೆ ಬಿಹಾರಕ್ಕೆ ಹೋಗದೆನೆ ಅಲ್ಲಿಯ ಹಿಂದುಗಳ ಮೇಲೆ ಬೇಕಾದಷ್ಟು ಪ್ರಭಾವ ಬೀರಬಲ್ಲೆನೆಂಬ ಧೈರ್ಯದಿಂದ ಈ ಒತ್ತಾಯವನ್ನು ಲಕ್ಷಿಸಿರಲಿಲ್ಲ. ಆದರೆ ಡಾ. ಸಯ್ಯದ ಮಹಮ್ಮದರ ಕಾರ್ಯದರ್ಶಿ ತಮ್ಮಲ್ಲಿಗೆ ಬಂದಿದ್ದರು. ಅವರು ಡಾ. ಮಹಮ್ಮದರಿಂದ ಉದ್ದನ್ನ ಪತ್ರವೊಂದನ್ನು ತಂದಿದ್ದರು. ಡಾ. ಮಹಮ್ಮದರು ತಮ್ಮ (ಗಾಂಧೀಜಿಯ) ಅಭಿಮಾನದ ಗೆಳೆಯರೆಂದು ಎಲ್ಲರಿಗೂ ಗೊತ್ತು. ಬಿಹಾರ ಮಂತ್ರಿಮಂಡಲದ ಅಭಿವೃದ್ಧಿ ಮಂತ್ರಿಗಳು ಅವರು. ತಮ್ಮ ಪ್ರಶ್ನೆಗೆ ಉತ್ತರವಾಗಿ ಡಾ. ಮಹಮ್ಮದರು, ಆದಷ್ಟು ಬೇಗ ಬಿಹಾರಕ್ಕೆ ಬರಬೇಕೆಂದು ಬರೆದಿದ್ದರು. ಬಿಹಾರದ ಸ್ಥಿತಿ ಇರಬೇಕಾದಷ್ಟು ನೆಟ್ಟಗಿದ್ದಿಲ್ಲವೆಂದೂ ತಮ್ಮ (ಗಾಂಧೀಜಿಯ) ಸನ್ನಿಧಿಯಿಂದ ಪರಿಸ್ಥಿತಿ ಸುಗಮವಾಗಿ ಹಿಂದುಗಳ ಹಿತಕ್ಕೆಷ್ಟೋ ಅಷ್ಟೇ ಮುಸ್ಲಿಮರದಕ್ಕೂ ಗಾಂಧೀಜಿ ಮನಸು ಕೊಡುತ್ತಾರೆಂಬ ಧೈರ್ಯ ಮುಸ್ಲಿಮರಲ್ಲುಂಟಾಗುವದೆಂದೂ ಅವರು ಬರೆದಿದ್ದರು. ಡಾ. ಮಹಮ್ಮದರ ಪತ್ರವನ್ನು ವಿರೋಧಿಸುವದು ತಮ್ಮಿಂದಾಗಲಿಲ್ಲ. ಆದ್ದರಿಂದ ತಾವು ಬಿಹಾರಕ್ಕೆ ಧಾವಿಸಬಹುದೆಂದು ತಂತಿ ಕಳಿಸಿದುದಾಗಿ ಗಾಂಧೀಜಿ ತಿಳಿಸಿದರು. ಹಾಗಾದರೆ ನೌಖಾಲಿ ತಿಪ್ಪೆರಾಗಳ ಸಂಚಾರವನ್ನು ಸ್ವಲ್ಪ ತಡೆಹಿಡಿಯಬೇಕಾದೀತು. ಆದರೆ ತಮ್ಮ ಸಂಕ್ಷಿಪ್ತ ಪ್ರಯಾಣದ ಕಾಲದಲ್ಲಿ ಪರಸ್ಪರ ಬಂಧುಗಳಂತೆ ಬಾಳಬೇಕೆಂದು ಇಲ್ಲಿನ ಹಿಂದೂ ಮುಸ್ಲಿಮರಿಗೆ ತಮ್ಮ ಸಂದೇಶವಿದೆಯೆಂದು ಅವರು ಹೇಳಿದರು.

ಬಂಗಾಲ ವಿಭಜನೆ

ಅನಂತರ ಗಾಂಧೀಜಿ ಅಂದು ತಮಗೆ ಕೇಳಲ್ಪಟ್ಟ ಒಂದು ಪ್ರಶ್ನೆಯ ಕಡೆ ಹೊರಳಿದರು. ಬಂಗಾಲವನ್ನು ಹಿಂದೂ ಪ್ರಧಾನ ಮತ್ತು ಮುಸ್ಲಿಂ ಪ್ರಧಾನವೆಂದು ಎರಡು ಪ್ರಾಂತಗಳಾಗಿ ವಿಭಜಿಸುವ ಸಂಬಂಧದ್ದಿತ್ತು ಅದು. ಹಿಂದೊಂದು ಕಾಲದಲ್ಲಿ ಬಂಗಾಲಿಗಳು ವಿಭಜನೆಯ ವಿರುದ್ಧ ಹೋರಾಡಿ ಅದನ್ನು ರದ್ದುಗೊಳಿಸುವಂತೆ ಮಾಡಿದ್ದರು. ಆದರೆ ಈಗ ಅಂಥ ವಿಭಜನೆ ಮಾಡುವದು ಶಾಂತಿಯ ಹಿತದೃಷ್ಟಿಯಿಂದ ಅಪೇಕ್ಷಣೀಯವಾಗಿರುವ ಕಾಲ ಬಂದಿದೆಯೆಂದು ಕೆಲವರು ಬಗೆಯತೊಡಗಿದ್ದಾರೆ. ಸ್ವಯಂ ತಾವು ಯಾವಾಗಲೂ ವಿಭಜನೆಯ ವಿರೋಧಿಗಳೇ ಆಗಿರುವುದಾಗಿ ಗಾಂಧೀಜಿ ನುಡಿದರು. ಆದರೆ ಅಣ್ಣತಮ್ಮಂದಿರು ಕೂಡ ಬಡಿದಾಡಿ ಪಾಲು ಮಾಡಿಕೊಳ್ಳುವದು ಅಪರೂಪ ಘಟನೆಯಲ್ಲ. ನಿರ್ಬಂಧಕ್ಕೊಳಗಾಗಿ ಹಿಂದುಸ್ಥಾನ ಈ ಹಿಂದೆ ಎಷ್ಟೋ ಸಂಗತಿಗಳನ್ನು ಸಹಿಸಬೇಕಾಗಿ ಬಂದುದುಂಟು. ಆದರೆ ಸ್ವತಃ ತಮ್ಮ ವಿಚಾರ ಬೇರೆಯೆ ಬಗೆಯಾದುದು. ಅಂತೆಯೆ ಇಡಿ ಹಿಂದುಸ್ಥಾನದಲ್ಲಿ ಬಹುಸಂಖ್ಯಾಕರಾಗಿರುವ ಹಿಂದುಗಳು ಎಲ್ಲರನ್ನೂ

—೧೧ ನೇ ಪುಟಕ್ಕೆ

ಜಗತ್ತಿನ ದಿಗಂತದಲ್ಲಿ ಮತ್ತೆ ಯುದ್ಧದ ಕಾರ್ಮೋಡ

(ಮೊದಲನೆ ಪುಟದಿಂದ ಮುಂದರಿದುದು)

ಗಳೆಂಜು-ಟ್ರೂಮನ್ನರ ಕೋಶದಲ್ಲಿರುವ ಅರ್ಥ ಹಂಚಿ-ಬಗೆಯಲು ಸಾಧ್ಯವಿಲ್ಲ. ಕಳೆದ ವರ್ಷದ ವರೆಗೆ ಅಲ್ಲಿ ಏಕಪಕ್ಷದ ರಾಜಕಾರಣ ನಡೆದಿದ್ದು ಈಗ ಬರಿ ಹೆಸರಿಗಷ್ಟೆ ರಾಜಕೀಯ ಪಕ್ಷಸ್ವಾತಂತ್ರ್ಯೆಯ ಹಕ್ಕು ಜನರಿಗಿದೆ. ಇನ್ನು ಜನತೆಯ ಸ್ವಾತಂತ್ರ್ಯಾಪಹಾರ ಮಾಡಿದೆಯೆಂದು ಪೋಲೆಂಡಿನ ಸರಕಾರವನ್ನು ಟ್ರೂಮನ್ನರು ಹೆಗಳಿದ್ದರೂ ಅಲ್ಲಿ ಯುದ್ಧಪೂರ್ವದಲ್ಲಿ ಆಂಗ್ಲೋ ಅಮೇರಿಕನ್ನರಿಗೆ ಪ್ರಿಯವಾಗಿದ್ದ ಸರಕಾರ ಯಾವ ವಿಧದಲ್ಲಿಯೂ ಪ್ರಜಾತಂತ್ರಾತ್ಮಕವೆನಿಸಿಕೊಳ್ಳಲು ಯೋಗ್ಯವಾಗಿದ್ದಿಲ್ಲ. ಸದ್ಯದ ಸರಕಾರವನ್ನೋಡಿಸಿದರೆ ಆ ಪ್ರತಿಗಾಮಿ ಸರ್ವಾಧಿಕಾರಿಗಳೇ ಮತ್ತೆ ಅಧಿಕಾರಕ್ಕೆ ಬರುವರೆಂಬುದು ನಿಸ್ಸಂದೇಹ.

ಅಧಿಕಾರ ಲಾಲಸೆ

ಆದುದರಿಂದ ಮಾನವಸ್ವಾತಂತ್ರ್ಯದ ಬೆನ್ನು ಹಟ್ಟಿ ಅಮೇರಿಕೆ ೪೦ ಕೋಟಿ ಡಾಲರು ವೆಚ್ಚ ಮಾಡಲುಸಿದ್ಧವಾಗಿದೆಯೆಂಬುದು ತೀರ ಅಸತ್ಯ. ಕಮ್ಯುನಿಸ್ಟ್ ಪತ್ರಿಕೆಯೊಂದು ತೋರಿಸಿಕೊಟ್ಟಂತೆ ಝೆಕೊಸ್ಲೊವಾಕಿಯಾ ಪುನರ್ನಿರ್ಮಾಣಕ್ಕಾಗಿ ಸಾಲ ಬೇಡಿದರೆ ಕೊಡಲೊಪ್ಪದ ಅಮೇರಿಕೆ ಗ್ರೀಸಿಗೆ ಯುದ್ಧಶಕ್ತಿ ಬೆಳಸಿಕೊಳ್ಳಲು ಧರ್ಮದಾನಮಾಡಲು ಸಿದ್ಧವಾಗಿದೆ. ಈ ಔದಾರ್ಯದ ಅಂತರಂಗವೇ ಬೇರೆ. ಮೊನ್ನಿನ ಯುದ್ಧಾನಂತರ ಜಗತ್ತಿನಲ್ಲಿ ಎರಡೇ ರಾಷ್ಟ್ರಗಳು ಪ್ರಚಂಡವಾಗಿ ಉಳಿದು ಬಂದವು. ಅವೆಂದರೆ ಅಮೇರಿಕೆ ಮತ್ತು ರಶಿಯಾ. ಬ್ರಿಟನ್ ಮತ್ತು ಫ್ರಾನ್ಸ ಪ್ರಚಂಡ ರಾಷ್ಟ್ರಗಳ ನಕ್ಷತ್ರಲೋಕದಿಂದ ಬಿದ್ದು ಹೋದುದು ಈ ಯುದ್ಧದ ಇನ್ನೊಂದು ಮಹಾ ಘಟನೆ. ಯುರೋಪಿನ ಎಲ್ಲ ರಾಷ್ಟ್ರಗಳಲ್ಲಿಯೂ ಹೆಚ್ಚುಕಡಿಮೆ ಪ್ರಮಾಣದಲ್ಲಿ ಸಾಮ್ಯವಾದ ಮತ್ತು ಕಮ್ಯೂನಿಸ್ಟರುಗಳ ಪ್ರಾಬಲ್ಯ ಹೆಚ್ಚಿದ್ದು ಮೂರನೆ ಘಟನೆ. ಹೀಗೆ ಪೂರ್ಣ ಬಂಡವಲವಾದ ಮತ್ತು ಪೂರ್ಣ ಸಾಮ್ಯವಾದ ಇವೆರಡು ಬದ್ಧ ವಿರುದ್ಧ ತತ್ವಜ್ಞಾನಗಳುಳ್ಳ ಪ್ರಬಲ ರಾಷ್ಟ್ರಗಳಾದ ಅಮೇರಿಕೆ ರಶಿಯಾಗಳು ಜಗತ್ತನ್ನು ತಮ್ಮೊಳಗೆ ಪಾಲುಮಾಡಿಕೊಳ್ಳಲು-ಏಕೆ ಪೂರ್ಣ ನುಂಗಲು—ಹೆಣಗಾಡತೊಡಗಿವೆ. ಜರ್ಮನಿಯ ಆಕ್ರಮಣ ಭಾಗಗಳಲ್ಲಿ ನಡೆದ ಅತಂತ್ರ, ಶಾಂತಿಪರಿಷತ್ತಿನಲ್ಲಾದ ತಿಕ್ಕಾಟ ಇವೆಲ್ಲವೂ ಒಂದೇ ಸೆಳವಿನ ವಿವಿಧ ರೂಪಗಳಾಗಿದ್ದವು. ಪರಸ್ಪರ ಸಂಶಯಗ್ರಸ್ತವಾಗಿದ್ದ ಈ ಎರಡೂ ಶಕ್ತಿಗಳು ತಮ್ಮ ತಮ್ಮ ಪಕ್ಷದ ಬಲವನ್ನು ಹೆಚ್ಚಿಸಲು ಶತಪ್ರಯತ್ನ ಮಾಡತೊಡಗಿದವು. ಆದರೆ ರಶಿಯಾದ ಪಕ್ಷದಲ್ಲಿ ಕಾಲವೇ ಹೋರುತಿರುವಂತೆ ಕಂಡಿತು. ಪೂರ್ವ ಯುರೋಪಿನಲ್ಲಿ ಮಾತ್ರವಲ್ಲ ಪಶ್ಚಿಮ ಯುರೋಪಿನಲ್ಲಿಯೂ ಕಮ್ಯುನಿಸ್ಟರಿಗೆ ರಾಜಕಾರಣದಲ್ಲಿ ಹಿಂದೆಂದೂ ಇಲ್ಲದ ಮಹತ್ವ ಬಂತು. ಪೋಲಂಡ, ರುಮೇನಿಯಾ, ಬಲ್ಗೇರಿಯಾಗಳಲ್ಲಿ ಬೇಕಾದರೆ ರಶಿಯಾ ದಬ್ಬಾಳಿಕೆ ನಡೆಸಿತೆಂದು ಹೇಳೋಣ. ಆದರೆ ಝೆಕೊಸ್ಲೊವಾಕಿಯಾದಲ್ಲಿ ಕಮ್ಯುನಿಸ್ಟರ ಪ್ರಾಬಲ್ಯ ಸ್ವಾಭಾವಿಕವಾದುದೇ ಇತ್ತು. ಫ್ರಾನ್ಸ, ಇಟಲಿಗಳಲ್ಲಿಯಂತೂ ಸ್ಟಾಲಿನ್ನರ ಬೂಟುಗಾಲು ಇರಲಿಲ್ಲವಷ್ಟೆ? ಅಲ್ಲಿಯೂ ಕಮ್ಯುನಿಸ್ಟ ಚಳವಳಿ ಪೂರ್ಣ ಬಹುಮತವಿಲ್ಲದಿದ್ದರೂ ಪ್ರಬಲಪಕ್ಷಗಳಾಗಿ ರೂಪುಗೊಂಡಿದೆ. ಅವರಿಗೆ ಶಾಸನ ಸಭೆಯ ಸ್ಥಾನಗಳಿಗಿಂತ ಇಮ್ಮಡಿ ಪ್ರಭಾವವನ್ನು [illegible]ದಲ್ಲಿ ಬೀರಬಲ್ಲರವರು. ಕೂಲಿಕಾರ ಸಂಘಗಳು ಪೂರ್ತಿ ಅವರ ಕೈಸೇರಿರುವದರಿಂದ ಯಾವುದೇ ಕ್ಷಣದಲ್ಲಿ ಅವರು ದೇಶವನ್ನು ನಡುಗಿಸಬಲ್ಲರು. ಈ ಹೊರನಾಡ ಕಮ್ಯುನಿಸ್ಟರ ಮೂಲಕ ರಶಿಯಾ ತನ್ನ ಶಕ್ತಿಯನ್ನು ಬಹಳ ದೂರದ ವರೆಗೆ ಪ್ರದರ್ಶಿಸಬಲ್ಲದೆಂದು ಆಂಗ್ಲೋ ಅಮೇರಿಕನ್ನರಿಗೆ ಮನವರಿಕೆಯಾಯಿತು. ಈ ಏರುತ್ತಿರುವ ಪ್ರವಾಹದ ವಿರುದ್ಧ ತಂತ್ರ ಹೊರತು ಬೇರೇನೂ ಮಾಡುವ ಶಕ್ತಿ ಇಂಗ್ಲಂಡದಲ್ಲಿ ಉಳಿದಿಲ್ಲ. ಅಮೇರಿಕೆ ತನ್ನ ದಾನಗಳಿಂದ ಭೇದೋಪಾಯವನ್ನು ಉಪಯೋಗಿಸಿದ್ದು ಅಷ್ಟು ಫಲಕಾರಿಯಾಗಲಿಲ್ಲವಾಗಿ ಅದೀಗ ಪ್ರಕಾಶವಾಗಿ ಎದ್ದು ನಿಂತಿದೆ. ಅಮೇರಿಕೆಯ ಭೇದೋಪಾಯ ಹೆಚ್ಚಿದಂತೆ ಮಾಸ್ಕೋದ ಶಂಕೆಗಳೂ ಬೆಳೆದು ಅದು ತನ್ನ ಸಮೀಪದ ರಾಜ್ಯಗಳಲ್ಲಿ ಬಿಗಿಯಾದ ಧೋರಣವನ್ನನುಸರಿಸತೊಡಗಿತು. ಅದನ್ನೆದುರಿಸುವ ಗೋಸ್ಕರ ಅಮೇರಿಕೆ ಅತ್ಯಂತ ಪ್ರತಿಗಾಮಿ ಶಕ್ತಿಗಳನ್ನು ಕೂಡ ಎತ್ತಿಕಟ್ಟಲು ಹಿಂಜರಿಯುತ್ತಿಲ್ಲ.

ಬಾಲ್ಕನ್ನಿನ ಸೀಗೆ ಬಲ್ಲೆ

ಜಗತ್ತು ರೋಗಗ್ರಸ್ತವಾಗಿದೆ. ದುರ್ಬಲ ಭಾಗದಲ್ಲೆ ಹುಣ್ಣು ಮೊದಲು ಕಾಣಿಸಿಕೊಳ್ಳುವಂತೆ ಬಾಲ್ಕನ್ನಿನ ಹಿಂದುಳಿದ ದುರ್ಬಲ ಪ್ರದೇಶದಲ್ಲಿ ಈ ಪ್ರಬಲ ರಾಷ್ಟ್ರಗಳ ತಿಕ್ಕಾಟ ಉಗ್ರರೂಪದಲ್ಲಿ ಕಾಣಿಸಿಕೊಂಡಿದೆ. ಮೊದಲಿಂದಲೂ ಭೂಮಧ್ಯ ಸಮುದ್ರದಲ್ಲಿ ರಶಿಯಾದ ಪ್ರಭಾವವನ್ನು ಪ್ರವೇಶಿಸಗೊಡಬಾರದೆಂದು ಬ್ರಿಟನ್ನಿನ ಛಲ. ಅದಕ್ಕಾಗಿಯೆ ಪೂರ್ವ ಯುರೋಪನ್ನೆಲ್ಲ ರಶಿಯಾದ ಆಕ್ರಮಣಕ್ಕೆ ಬಿಟ್ಟರೂ ಗ್ರೀಸ್, ಇಟಲಿಗಳ ಆಕ್ರಮಣವನ್ನು ಆಂಗ್ಲೋ ಅಮೇರಿಕನ್ನರು ಮೀಸಲಿಟ್ಟುಕೊಂಡರು. ಗ್ರೀಸಿನಲ್ಲಿ ಪ್ರತಿಗಾಮಿಗಳಿಗೆ ಬೆಂಬಲ ಕೊಡದಿದ್ದರೆ ಸಾಮ್ಯವಾದಿಗಳು ಅಧಿಕಾರಕ್ಕೆ ಬಂದು ರಶಿಯಾದ ಪ್ರಭಾವ ಭೂಮಧ್ಯ ಸಮುದ್ರದಲ್ಲಿ ಪ್ರವೇಶಿಸಬಹುದೆಂಬ ಭಯದಿಂದ ಸಾಮ್ಯವಾದಿ ಬೆವಿನ್ನರು ಅಲ್ಲಿ ಫ್ಯಾಸಿಸ್ಟರಿಗೆ ಸಹಾಯ ಮಾಡಿದರು. ಡಾರ್ಡನೆಲ್ಸ ಜಲಸಂಧಿಯ ಮೇಲೆ ಪ್ರಭುತ್ವವನ್ನು ಬೇಡಿ ರಶಿಯಾ ತುರ್ಕಿಯನ್ನು ಒತ್ತಾಯಗೊಳಿಸಿತು. ತುರ್ಕಿ ಇದಕ್ಕೊಪ್ಪದಂತೆ ಆಂಗ್ಲೋ ಅಮೇರಿಕನ್ನರು ಪ್ರೇರೇಪಿಸಿದರು. ಡಾರ್ಡನೆಲ್ಸ ಜಲಸಂಧಿಯ ಮೇಲೆ ರಶಿಯಾಕ್ಕೆ ಪರಿಣಾಮಕರ ಪ್ರಭುತ್ವ ದೊರಕಿತೆಂದರೆ ಅದು ನಿರ್ಭಯವಾಗಿ ಪೂರ್ವ ಭೂಮಧ್ಯ ಸಮುದ್ರಕ್ಕೆ ಕಾಲಿಡಬಹುದಾಗಿತ್ತು. ಈಗಿರುವಂತಾದರೆ ರಶಿಯಾ ಕಪ್ಪು ಸಮುದ್ರದಲ್ಲಿ ಸೆರೆಯಾಳಾಗಿ ಅದರ ನೌಕಾ ಶಕ್ತಿಗೆ ಬೆಲೆಯಿಲ್ಲದಂತಾಗುವದು. ಆದರೆ ಬ್ರಿಟಿಶ ಸಾಮ್ರಾಜ್ಯದ "ಜೀವನಾಡಿ" ಗಳು ಪೂರ್ವ ಭೂಮಧ್ಯಸಮುದ್ರದ ಮೂಲಕ ಹಾದು ಹೋಗುತ್ತವೆ. ಪಾಲಿಸ್ತಾನ, ಸುಯೇಜ; ಇರಾಣದ ಎಣ್ಣೆ ಕಣಿಗಳು ಮೊದಲಾದ ಬ್ರಿಟಿಶ ಹಿತಸಂಬಂಧ ರಶಿಯನ್ ಭಯಕ್ಕೊಳಗಾಗುತ್ತದೆ. ಆದರೆ ಯುದ್ಧೋತ್ತರ ಪರಿಸ್ಥಿತಿಯಿಂದಾಗಿ ಬ್ರಿಟನ್ನು ಈಗ ತನ್ನ ಸಾಮ್ರಾಜ್ಯವನ್ನು ದಿವಾಳಿ ತೆಗೆಯಬೇಕಾಗಿ ಬಂದುದರಿಂದ ಅದು ನಿರ್ವಾಹವಿಲ್ಲದೆ ಗ್ರೀಸ, ಪಾಲಿಸ್ತಾನ, ಇಜಿಪ್ತ ಮೊದಲಾದ ಆಯಕಟ್ಟಿನ ಸ್ಥಳಗಳನು ಬಿಟ್ಟು ಹೊರಟಿದೆ. ಡಾರ್ಡನೆಲ್ಸ ಮತ್ತು ಗ್ರೀಸು ರಶಿಯನ್ ಪ್ರಭಾವಕ್ಕೀಡಾದರೆ, ರಶಿಯಾವನ್ನು ಪ್ರಚಂಡ ಸಮುದ್ರಶಕ್ತಿಯಾಗಿ ಮಾಡುವದು ತಡವಾಗದು. ಈಗಾಗಲೇ ಅದಮ್ಯ ಭೂಶಕ್ತಿಯಾಗಿರುವ ಅದನ್ನು ಸಮುದ್ರ ಶಕ್ತಿಯಾಗಗೊಡುವದು ಅಮೇರಿಕೆಯ ಮನಸ್ಸಿಲ್ಲ. ಮೇಲಾಗಿ ಅರಬಸ್ತಾನ ಮೊದಲಾದ ಮಧ್ಯಪೂರ್ವ ದೇಶಗಳಲ್ಲಿ ಅಮೇರಿಕೆ ದಾನ ಭೇದೋಪಾಯಗಳಿಂದ ಗಳಿಸಿಕೊಂಡಿರುವ ಎಣ್ಣೆಗಣಿಗಳ ಮೇಲೆ ರಶಿಯಾದ ಭಯ ಪಸರಿಸೀತು. ಈ ಕಾರಣದಿಂದ ಬ್ರಿಟಿಶರು ಕೈಲಾಗದೆ ಬಿಟ್ಟು ಹೋದ ಸಾಮ್ರಾಜ್ಯವನ್ನು ಅಮೇರಿಕನ್ನರು ಆಕ್ರಮಿಸಬೇಕೆಂದಿದೆ. ಅದಕ್ಕೆ ಬ್ರಿಟಿಶ ಸಮ್ಮತಿಯೂ ಇದೆ.

ರಶಿಯಾದ ಅಭಿಲಾಷೆ

ಜಗತ್ತಿನಲ್ಲೆಲ್ಲ ಕಮ್ಯುನಿಝಂ ಹಬ್ಬಬೇಕೆಂದು ರಶಿಯಾ ಬಯಸುತ್ತದೆಂಬಲ್ಲಿ ಸಂಶಯವಿಲ್ಲ. ಅದಕ್ಕೆ ಅದು ಜಗತ್ತಿನ ಕಮ್ಯುನಿಸ್ಟ್ ಪಕ್ಷಗಳನ್ನು ಪ್ರಯೋಗಿಸುತ್ತಿದೆಯೆಂಬುದೂ ನಿಜ. ಆದರೆ ಡಾರ್ಡನೆಲ್ಸ ಜಲಸಂಧಿಯ ಮೇಲೆ ಕಪ್ಪುಸಮುದ್ರ ಪ್ರದೇಶದ ರಾಷ್ಟ್ರಗಳದಷ್ಟೇ ಪ್ರಭುತ್ವವಿರಬೇಕೆಂದು ರಶಿಯಾ ಹೇಳುವದರಲ್ಲಿ ನ್ಯಾಯವಿದೆ. ಪನಾಮಾ ಜಲಸಂಧಿಯ ಮೇಲೆ ಅಮೇರಿಕನ್ನರದಷ್ಟೇ ಏಕೆ ಪ್ರಭುತ್ವ? ಪನಾಮಾದಲ್ಲಿ ಅಂತರ್ರಾಷ್ಟ್ರೀಯ ಪ್ರಭುತ್ವ ಸಲ್ಲದಾದರೆ ಡಾರ್ಡನೆಲ್ಸದ ಮೇಲೇ ನಿನೂ ಸಂಬಂಧವಿಲ್ಲದ ಅಮೇರಿಕೆಯ ಹಕ್ಕು? ಸ್ಪೇನಿನಲ್ಲಿರುವ ಜಿಬ್ರಾಲ್ಟರಕ್ಕೆ ಬ್ರಿಟಿಶ ಅಂಕೆಯಾದರೆ ಡಾರ್ಡನೆಲ್ಸಿಗೆ ರಶಿಯಾದ ಅಂಕೆಯೇಕಿರಕೂಡದು? ರಶಿಯಾ ತನ್ನ ಸುತ್ತಮುತ್ತ ಕಾಲು ಚಾಚುವದು ಅನ್ಯಾಯವಾದರೆ, ಸ್ಪಿಟ್ಸಬರ್ಗ ದ್ವೀಪಗಳಲ್ಲಿ ನೌಕಾ ಠಾಣೆ ಬೇಡುವದು ತಪ್ಪಾದರೆ, ಅಮೇರಿಕೆ ಶಾಂತಸಾಗರದ ಎಲ್ಲ ದ್ವೀಪಗಳ ಮೇಲೆ ಪ್ರಭುತ್ವ ಬೇಡುವದು, ಹಿಂದಿನ ಜಪಾನಿ ಅದಿಷ್ಟ ದ್ವೀಪಗಳನ್ನು ಆಕ್ರಮಿಸಿ ಯಾರು ಹೇಳಿದರೂ ಅಲ್ಲಿಂದ ಕದಲೆನೆಂಬುದು ಯಾವ ನ್ಯಾಯ?

ಅಮೇರಿಕನ್ ಅಹಂಕಾರ

ನಿಜ ಹೇಳಬೇಕಾದರೆ ಎರಡೂ ಪಕ್ಷಗಳು ಒಂದೇ ಉದ್ದೇಶದಿಂದ ಬೇರೆ ಬೇರೆ ಸಾಧನಗಳಿಂದ ಸ್ವಾರ್ಥಸಾಧಿಸಿಕೊಳ್ಳಹೊರಟಿವೆ. ರಶಿಯಾದ ದಬ್ಬಾಳಿಕೆ ಹೆಚ್ಚಲು ಆಂಗ್ಲೋ—ಅಮೇರಿಕನ್ ಕುತಂತ್ರದ ಭಯವೂ ಒಂದು ಕಾರಣ. ಆದರೆ ಶ್ಯಾಮಕಾಕನು (ಅಮೇರಿಕೆ) ಈಗ ಪ್ರಚಂಡ ಬಲಶಾಲಿಯಾಗಿದ್ದಾನೆ. ಜಾನ ಬುಲ್ಲನು (ಇಂಗ್ಲಂಡು) ಮುದುಕನಾದುದರಿಂದ ಅವನ ಸ್ಥಾನವನ್ನಾಕ್ರಮಿಸಿ ಜಗತ್ತನ್ನು ಹಣದ ಬಲದಿಂದಾಳುವ ಕೊಬ್ಬು ಆತನಿಗೇರಿದೆ. ಅಮೇರಿಕೆಯ ಕೈಯಲ್ಲಿ ಜಗತ್ತಿನ ಅತಿ ದೊಡ್ಡ ನೌಕಾ ಪಡೆ ವಿಮಾನಬಲಗಳಿವೆ ಸಾಲದ್ದಕ್ಕೆ ಅಣುಬಾಂಬಿನ ಗುಟ್ಟು ತನಗೆ ದೊರಕಿದೆಯೆಂಬ ಮದ ಅವನಿಗುಂಟು. ಧಾರಾಳ ಹಣ, ಪ್ರಕೃತಿ ಸಂಪತ್ತು ಅವನಿಗಿದೆ. ಸಾಲದ ಆಶೆ ತೋರಿಸಿ ಯುರೋಪಿನ ಉಧ್ವಸ್ತ ರಾಷ್ಟ್ರಗಳಲ್ಲಿ ತನಗೆ ಬೇಕಾದವರನ್ನು ಅಧಿಕಾರಕ್ಕೇರಿಸಲು ಸಾಧ್ಯವೆಂದು ಅದಕ್ಕೆ ಅನಿಸಿದೆ. ಅಣುಬಾಂಬಿನ ಬೆದರಿಕೆ ತೋರಿಸಿ ಬೇಕಾದವನ್ನು ತಣ್ಣಗೆ ಮಾಡಬಹುದೆನಿಸುತ್ತಿದೆ. "ಬಿಗಿ" ಧೋರಣೆ ವಹಿಸಿದ್ದರಿಂದ ರಶಿಯಾ ಕೆಲ ಮಟ್ಟಿಗೆ ಬಗ್ಗಿದ್ದೂ ಅದಕ್ಕೆ ಕಂಡು ಬಂತು. ಅದೇ ಧೋರಣೆಯನ್ನು ಮುಂದುವರಿಸಿ ವಿವಿಧ ರಾಷ್ಟ್ರಗಳಿಗೆ ೧೦೦ ಕೋಟಿ ಡಾಲರಗಳ ವರೆಗೂ ಧನಸಹಾಯ ನೀಡಿ ರಶಿಯಾದ ಮುನ್ನಡೆಯನ್ನು ತಡೆಯಬೇಕೆಂದು ಟ್ರೂಮನ್ನರ ಬಯಕೆ.

ಈ ದಾನೋಪಾಯದ ಲಾಭ ಪಡೆಯಲು ಹಸಿವೆಯಿಂದ ಬಳಲುತಿರುವ ಅನೇಕ ರಾಷ್ಟ್ರಗಳು ಮುಂದೆಬರಬಹುದು. ಅಷ್ಟೇ ಏಕೆ, ವಿಕಾಸ ಧೋರಣೆಯನ್ನು ಬದಲಿಸಿದರೆ ರಶಿಯಾಕ್ಕೆ ಕೂಡ ಅಮೇರಿಕೆ ಬಲು ದೊಡ್ಡ ಸಾಲ ಕೊಡಲು ಸಿದ್ಧವಿದೆಯೆಂದು ವಿದೇಶ ಮಂತ್ರಿ ಮಾರ್ಶಲ್ಲರು ಸ್ಟಾಲಿನ್ನರಿಗೆ ಹೇಳುವರಂತೆ. ಇಲ್ಲದಿದ್ದರೆ ಜನರಲ್ ಮಾರ್ಶಲ್ಲರು ಅಣುಬಾಂಬನ್ನು ಸ್ಟಾಲಿನ್ನರಿಗೆ ಕೊಡಲು ಸಿದ್ಧರಾಗಬಹುದು. ಆದರೆ ರಶಿಯಾ ಈ ಗಾಳವನ್ನು ನುಂಗೀತೆ? ಈಗಾಗಲೆ ಟ್ರೂಮನ್ನರ ಭಾಷಣಕ್ಕೆ ರಶಿಯನ್ ಪತ್ರಿಕೆಗಳು ಉಗ್ರ [illegible] ಮಾರ್ಶಲ್ಲರಿಗೆ [illegible] ಹುವರೆಂದು [illegible] ತಡೆಹಿಡಿಯಬಹುದು. ಆದರೆ ಇನ್ನು [illegible] ವರ್ಷಗಳಲ್ಲಿ ಭಯಂಕರ [illegible] ಅಣುಬಾಂಬಿನ ಗುಟ್ಟು ಅಮೇರಿಕನ್ನರ [illegible]ಗೆಯೆ ಆಗಿ ಉಳಿದರೆ ಅವರಿಗೆ ಯಶಸ್ಸು [illegible] ರಶಿಯನ್ನರೂ ಅದನ್ನು ಗುಟ್ಟಾಗಿ ತಯಾರಿಸುವ ಸಂಭವವಿದೆ. ಹಾಗಾದರೆ ಅಣುಬಾಂಬಿನ [illegible] ಟ್ಟದ್ದು. ಯು[illegible] ರಾಷ್ಟ್ರ ಸಂಘ [illegible] ಟ್ರೂಮನ್ನರು ಕೊಂದೇಬಿಟ್ಟಿದ್ದಾರೆ. [illegible]ರುವ ಸಮಸ್ಯೆ ಅತಿ ಅವಸರದ್ದಾದ್ದರಿಂದ [illegible] ರಾಷ್ಟ್ರಗಳು ಅದನ್ನು ತಡವಲಾರವು. ಆದರಿಂದ ಅಮೇರಿಕೆಯೊಂದೇ ಮುಂದಾಗುವೆನು, ಎಂದವರು ಹೇಳಿಬಿಟ್ಟಿದ್ದಾರೆ. ಕಳೆದ ಯುದ್ಧಾನಂತರ ರಾಷ್ಟ್ರಸಂಘವನ್ನು ಪ್ರಬಲ ರಾಷ್ಟ್ರಗಳು ಹೀಗೆಯೇ ಧಿಕ್ಕರಿಸಿದವು. ಪರಿಣಾಮ ಗೊತ್ತೇ ಇದೆ.

ಭಾರತದ ವಿದೇಶ ಧೋರಣೆ

ಪ್ರಬಲ ರಾಷ್ಟ್ರಗಳು ಹೀಗೆ ಕಚ್ಚಾಟದಲ್ಲಿ ತೊಡಗಿರುವದರಿಂದ ಇದೀಗ ಸ್ವಾತಂತ್ರ್ಯದ ಹೊಸಲಲ್ಲಿ ಕಾಲಿಟ್ಟ ಪೌರ್ವಾತ್ಯ ರಾಷ್ಟ್ರಗಳ ಪರಿಸ್ಥಿತಿ ವಿಷನ್ನವಾಗಿದೆ. ಯುರೋಪಿಯನ್ ಸಾಮ್ರಾಜ್ಯವಾದಿ ರಾಷ್ಟ್ರಗಳ ಬೆಂಬಲವನು ಕಾಯ್ದುಕೊಳ್ಳಲು ಅಮೇರಿಕೆ ಪೌರ್ವಾತ್ಯ ರಾಷ್ಟ್ರಗಳ—ಮುಖ್ಯವಾಗಿ ಇಂಡೋಚೀನ ಇಂಡೋನೇಶಿಯಾಗಳ—ಸ್ವಾತಂತ್ರ್ಯ ಸಂಗ್ರಾಮಕ್ಕೆ ಬೆಂಬಲ ನೀಡಲಿಕ್ಕಿಲ್ಲ. ಅದರಿಂದ ಸಾಮ್ರಾಜ್ಯವಾದಿಗಳು ಹಿಂದಿಟ್ಟ ಹೆಜ್ಜೆ ಮುಂದಿಡಲು ಪ್ರಯತ್ನಿಸಬಹುದು. ಹೊಸದಾಗಿ ಸ್ವಾತಂತ್ರ್ಯ ಮಂದಿರದಲ್ಲಿ ಕಾಲಿಟ್ಟ ಹಿಂದುಸ್ತಾನಕ್ಕಂತೂ ಒಳ್ಳೆ ಇಕ್ಕಟ್ಟಿನ ಪ್ರಸಂಗವಿದು. ವಿದೇಶ ಧೋರಣೆಯಲ್ಲಿ ಸಾಕಷ್ಟು ಅನುಭವಗಳಿಸಲು ಕೂಡ ಅದಕ್ಕೆ ಸಮಯವಿಲ್ಲದಾಗಿದೆ. ಅದು ಶುದ್ಧ ತಟಸ್ಥತೆಯನ್ನು ಕಾಯ್ದುಕೊಳ್ಳಲು ಬಯಸುತ್ತದೆ. ನಿಜ. ಆದರೆ ಇದು ಕಠಿನ. ಇಷ್ಟರಲ್ಲಿ ನಮ್ಮ ಪಕ್ಷವಾವುದೆಂಬುದನ್ನು ನಿರ್ಧರಿಸಲು ಪ್ರಯತ್ನಿಸಲಾಗುವದಂತೆ. ನಮಗೆ ದೊರೆಯುವ ಸ್ವಾತಂತ್ರ್ಯದ ರೂಪ,-ಐಕ್ಯ ಅಥವಾ ವಿಚ್ಛೇದ ಕೂಡ ನಾವು ಆಂಗ್ಲೊ—ಅಮೇರಿಕನ್ನರ ಸ್ನೇಹ ಗಳಿಸುವದನ್ನು ಹೊಂದಿಕೊಂಡಿದೆಯೆನ್ನಬೇಕು. ಅದೇ ಸಮಯ, ರಶಿಯಾವನ್ನು ನೋಯಿಸಲು ನಮಗೆ ಸಾಧ್ಯವಿಲ್ಲ. ಜವಾಹರಲಾಲರ ಮುಂದಿರುವ ಕಾರ್ಯ ಗಂಭೀರವಾದುದು.

ನಾಗಿ

ಕರ್ಮವೀರ
ಹರಿಜನ ಪುರವಣಿ

ಬುದಾಗಿ ಹೊತಗಾರ ಈ ಪಾದ್ರಿಗಳಿಗೇ ಈಗ ಎನಿಸಹತ್ತಿದೆ. ಕೇವಲ ನೀರಿನಿಂದ ಬಾಹ್ಯ ಧರ್ಮಾಂತರಕ್ಕೆ ಮಹತ್ವ ಕೊಡದೆ ಕ್ರಿಸ್ತನು ಮನಃಪೂರ್ವಕವಾಗಿ ಅಂತರ್ಧರ್ಮಾಂತರ ಹೊಂದುವದಕ್ಕೆ ಹೆಚ್ಚು ಮಹತ್ವ ಕೊಟ್ಟದ್ದುಂಟು. ಆದುದರಿಂದ ಪಾದ್ರಿಗಳು ಈ ಬಗೆಯಾಗಿ ಧರ್ಮಾಂತರ ಗೊಳಿಸಲು ಪ್ರಯತ್ನಿಸದೆ ಮಾನವ್ಯದ ಸಂದೇಶದ ಪ್ರಚಾರಮಾಡಿದರೆ ನಿಜವಾಗಿ ಕ್ರಿಸ್ತನ ಅಭಿಪ್ರಾಯದಂತೆ ನಡೆದಂತಾಗುವದು. ಎಲ್ಲ ಪಾದ್ರಿ ಸಂಸ್ಥೆಗಳು ಈ ಬಗೆಯ ವಿಶಾಲದೃಷ್ಟಿಯು[illegible] ಟ್ಟುಕೊಂಡು ಕಾರ್ಯಮಾಡಹತ್ತಿದರೆ ಸ್ವತಂತ್ರ ಹಿಂದುಸ್ತಾನ ಹಿಂದಿನಂತೆ ಈಗಲೂ ಅವರ ಸೇವೆಯನ್ನು ಸ್ವೀಕರಿಸಲು ಹಿಂದೆ ಮುಂದೆ ನೋಡುವದಕ್ಕೆ ಯಾವದೇ ಕಾರಣವುಳಿಯಲಾರದು.»

ಧಾರ್ಮಿಕ ಶಿಕ್ಷಣ, ಸೈನಿಕ ಶಿಕ್ಷಣ ಮತ್ತು ರೋಮನ್ ಲಿಪಿ

ಸಧ್ಯದ ಕ್ರಾಂತಿ ಕಾಲದಲ್ಲಿ ಸಾರ್ವಜನಿಕರ ಕಳಕಳಿಯನ್ನು ಕೆರಳಿಸುವ ಈ ಮೂರು ಮಹತ್ವದ ಮುದ್ದೆಗಳ ಸಂಬಂಧದಲ್ಲಿ ಗಾಂಧೀಜಿಯವರು ಹಿಂದುಸ್ತಾನೀ ತಾಲೀಮಿ ಸಂಘದ ಶ್ರೀ ಈ ಡಬ್ಲ್ಯು. ಅರ್ಯನಾಯಕಮ್ ಇವರಿಗೆ ಬರೆದ ಪತ್ರದಲ್ಲಿ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ರಾಷ್ಟ್ರ ಸ್ವತಂತ್ರ ರಾಷ್ಟ್ರವೆಂದು ಬೆಳವಣಿಗೆ ಹೊಂದಬೇಕಾದರೆ ಈ ಮೂರು ಮುದ್ದೆಗಳು ಬಹಳ [illegible] ಆ ಪತ್ರವನ್ನು ಇಲ್ಲಿ ಕೆಳಗೆ ಕೊಟ್ಟಿದ್ದೇವೆ. ಮೌ. ಅಜಾದರ ಸಂದರ್ಶನಮತ್ತು ಕೇಂದ್ರ ಸಲಹೆ ಸಮಿತಿಯವರ ಸೂಚನೆಗಳನ್ನು ಇದೇ ಸಂಚಿಕೆಯಲ್ಲಿ ಬೇರೆ ಕಡೆಗೆ ಅವಗಾಹನೆಗಾಗಿ ಕೊಟ್ಟದ್ದೇವೆ. —ಸಂಪಾದಕರು

«ಇಷ್ಟು ಅಲ್ಪಾವಧಿಯ ಭೆಟ್ಟಿಗಾಗಿ ಮತ್ತು ಸಾಮಾನ್ಯ ವಿಷಯಗಳ ಸಂಬಂಧದಲ್ಲಿ ಅದಕ್ಕೂ ಸ್ವಲ್ಪಾವಧಿಯಲ್ಲಿ ನಡೆಸಿದ ಚರ್ಚೆಗಾಗಿ ನನಗೆ ಸಂತೋಷವೆನಿಸುತ್ತದೆ.

«ಮೌಲಾನಾ ಅಬುಲ್ ಕಲಂ ಅಝಾದರು ಶಿಕ್ಷಣದ ಸಂಬಂಧದಲ್ಲಿ ಕೊಟ್ಟ ಅಭಿಪ್ರಾಯದ ವರದಿಯುಳ್ಳ ಹಿಂದುಸ್ತಾನ ಸ್ಟ್ಯಾಂಡರ್ಡ ಪತ್ರಿಕೆಯ ತುಂಡೊಂದನ್ನು ನೀವು ನನಗೆ ಕೊಟ್ಟಿರುವಿರಿ. ಈ ವರದಿಯು ಸತ್ಯಪೂರ್ಣವಾಗಿದೆಂದು ಗ್ರಹಿಸಿ, ಹಿಂದುಸ್ತಾನೀ ತಾಲೀಮಿ ಸಂಘದವರು ಈ ವರೆಗೆ ಅನುಸರಿಸುತ್ತ ಬಂದ ಪದ್ಧತಿಗೆ ಇದು ಸರಿ ಹೋಗುವದಿಲ್ಲೆಂದು ನಾನು ನಿಸ್ಸಂದೇಹವಾಗಿ ಹೇಳಬಯಸುತ್ತೇನೆ. ಹಿಂದುಸ್ತಾನದ ಸರ್ವಸ್ವವಾದ ಹಿಂದೀ ಹಳ್ಳಿಗಳಲ್ಲಿಯ ಅದು ಇರುವದಲ್ಲದೆ ಪರಕೀಯರ ಪ್ರಭುತ್ವದ ಆಧಾರ ಸ್ತಂಭಗಳಾಗಿರುವ ಪಾಶ್ಚಾತ್ಯ ಪದ್ಧತಿಯನ್ನನುಸರಿಸುವ ಕೆಲ ನಗರಗಳಲ್ಲಲ್ಲ.

«ಸರಕಾರ ಧಾರ್ಮಿಕ ಶಿಕ್ಷಣದ ಬಗ್ಗೆ ವಿಚಾರ ಮಾಡಬಲ್ಲದು ಇಲ್ಲವೆ ಆ ಬಗ್ಗೆ ವ್ಯವಸ್ಥೆ ಮಾಡಬಲ್ಲದೆಂದು ನನಗೆನಿಸುವದಿಲ್ಲ. ಧಾರ್ಮಿಕ ಶಿಕ್ಷಣ ಧಾರ್ಮಿಕ ಸಂಸ್ಥೆಗಳ ಮುಖ್ಯ ಜೊತ್ತಾಗಿರತಕ್ಕದ್ದೆಂದು ನನಗೆನಿಸುತ್ತದೆ. ಧರ್ಮ ಮತ್ತು ನೀತಿ ಇವೆರಡನ್ನೂ ಬೆರಸಬೇಡಿರಿ. ಮೂಲಭೂತ ನೀತಿಶಿಕ್ಷಣ ಎಲ್ಲ ಧರ್ಮಗಳಿಗೂ ಸಮಾನವಾಗಿದೆಂದು ನನ್ನ ನಂಬುಗೆ. ಮೂಲಭೂತ ನೀತಿ ಶಿಕ್ಷಣದ ವ್ಯವಸ್ಥೆ ಮಾಡುವದು ನಿಸ್ಸಂದೇಹವಾಗಿ ಸರಕಾರದ ಕರ್ತವ್ಯ. ಧರ್ಮ ಎಂದ ಕೂಡಲೆ ಮೂಲಭೂತ ನೀತಿತತ್ತ್ವಯ ವಿಚಾರ ನನ್ನ ಮನಸ್ಸಿನಲ್ಲಿ ಸುಳಿಯುವದಿಲ್ಲ. ಆದರೆ ಸಂಪ್ರದಾಯವಾದಿತ್ವವೆಂದು ಕರೆಯಿಸಿಕೊಳ್ಳುವ ಧರ್ಮ ನನ್ನ ತಲೆಯಲ್ಲಿ ಬರುವದು. ಸರಕಾರ ಕೃಪಾಪೋಷಿತ ಧರ್ಮ ಮತ್ತು ಸರಕಾರಿ ಧಾರ್ಮಿಕಸಂಸ್ಥೆಗಳಿಂದ ನಾವು ಬಹಳಷ್ಟು ಹಾನಿಗೊಳಗಾಗಿದ್ದೇವೆ. ತನ್ನ ಧರ್ಮಕ್ಕಾಗಿ ಸರಕಾರವನ್ನು ಅರ್ಧಮರ್ಧ ಇಲ್ಲವೆ ಪೂರ್ಣವಾಗಿ ಅವಲಂಬಿಸುವ ಯಾವುದೊಂದು ಸಮಾಜ ಇಲ್ಲವೆ ಗುಂಪು ಅಸ್ತಿತ್ವದಲ್ಲುಳಿಯಲಿಕ್ಕೇ ಯೋಗ್ಯವಾಗಿರುವುದಿಲ್ಲ. ಇಷ್ಟೇ ಅಲ್ಲ, ಧರ್ಮ ಎಂದು ಕರೆಯಿಸಿಕೊಳ್ಳಲಿಕ್ಕೆ ತಕ್ಕುದಾದ ಧರ್ಮ ಅದಾಗಿರುವದಿಲ್ಲ, ಇದು ಅಬಾಧಿತ ಸತ್ಯವೆಂದು ನನಗೆನಿಸುವುದರಿಂದ ಇದನ್ನು ಸಿದ್ಧಪಡಿಸಲು ಯಾವ ಉದಾಹರಣೆಗಳನ್ನು ಕೊಡುವ ಅವಶ್ಯಕತೆ ತೋರುವದಿಲ್ಲ.

ಉರ್ದು ಮತ್ತು ನಾಗರಿ ಲಿಪಿಗಳ ಬದಲು ರೋಮನ್ ಲಿಪಿಯನ್ನು ಉಪಯೋಗಿಸುವ ಪ್ರಶ್ನೆಯ ಸಂಬಂಧದಲ್ಲಿ ಈ ವರದಿಯಲ್ಲಿದ್ದ ಉಲ್ಲೇಖ ಗಮನಿಸತಕ್ಕ ಎರಡನೆ ಮುದ್ದೆಯಾಗಿದೆ ಈ ಸೂಚನೆ ಎಷ್ಟೇ ಮೋಹಕವೆಂದು ತೋರುತಿದ್ದರೂ ಹಿಂದೀ ಸೈನಿಕರ ಸಂಬಂಧದಲ್ಲಿ ಯಾವದೇ ಸತ್ಯವಾಗಿದ್ದರೂ ಈ ರೀತಿ ಬದಲಾವಣೆ ಮಾಡುವುದು ಮಹದಪರಾಧವಾಗುವದಲ್ಲದೆ ಹುರಿಯುವಹಂಚಿನಿಂದ ಉರಿಯುವ ಬೆಂಕಿಯಲ್ಲಿ ಬಿದ್ದಂತಾಗುವದೆಂದು ನನ್ನ ಅಭಿಪ್ರಾಯ ಕಳೆದ ಜಾನೇವಾರಿ ೩೦ ನೇ ತಾರೀಕಿಗೆ ನಾನು ಈ ವಿಷಯದ ಬಗ್ಗೆ ಕೊಟ್ಟ ಪ್ರಕಟನೆಯನ್ನು ಈ ಸಂಬಂಧದಲ್ಲಿ ಓದಬೇಕೆಂದು ನಾನು ಸೂಚಿಸಬಯಸುತ್ತೇನೆ.

«ಸೈನಿಕ ಶಿಕ್ಷಣದ ಸಂಬಂಧದಲ್ಲಿ ಮಾಡಿದ ಉಲ್ಲೇಖದಿಂದ ನನಗೆ ವಿಷಾದವಾಯಿತೆಂಬುದು ಮೂರನೆಯ ಮಾತಾಗಿದೆ. ಈ ಸಂಬಧದಲ್ಲಿ ರಾಷ್ಟ್ರವ್ಯಾಪಿಯಾದ ನಿರ್ಣಯಮಾಡಲ್ಪಡುವ ವರೆಗೆ ಅಂದರೆ ಬಹಳ ದಿನಗಳ ವರಗೆ ನಾವುದಾರಿ ಕಾಯಬೇಕಾಗುವದೆಂದು ನನಗೆನಿಸುತ್ತದೆ. ಇಲ್ಲದಿದ್ದರೆ ಜಗತ್ತಿಗೆ ನಾವು ಕಲ್ಯಾಣಕರರಾಗಿ ಪರಿಣಮಿಸದೆ ಕಂಟಕರಾಗಿ ಪರಿಣಮಿಸುವ ಸಂಭವವಿದೆ. ಧುರೀಣರು ಜನ್ಮತಃ ಧುರೀಣರು ಅವರನ್ನು ಹೊಸದಾಗಿ ಸೃಷ್ಟಿ ಮಾಡುವದು ಶಕ್ಯವಿಲ್ಲ. ಸಂಪೂರ್ಣ ಸ್ವಾತಂತ್ರ್ಯ ಸ್ಥಾಪಿತವಾಗುವ ಮೊದಲೇ ಈ ವಿಷಯದಲ್ಲಿ ಸರಕಾರ ಅವಸರ ಮಾಡಬೇಕೆ? ಈ ಪರಿಸ್ಥಿತಿಯಲ್ಲಿ ಕೇಂದ್ರ ಸಲಹೆ ಸಮಿತಿಯವರು ಇಂಥ ವ್ಯಾಪಕ ಸೂಚನೆ ಮಾಡಿದ್ದನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ.»

ಕಾಜಿರಖಿಲ ತಾ. ೨೦—೩—೪೭

ಮೌ. ಅಜಾದರ ಸಂದರ್ಶನದ ಸಾರ

(ಹಿಂದುಸ್ತಾನ ಸ್ಟ್ಯಾಂಡರ್ಡ ಪತ್ರಿಕೆಯ ೧೯—೩—೧೯೪೭ ರಲ್ಲಿ ಪ್ರಸಿದ್ಧವಾದಂತೆ)

ಸಾಲೆಗಳಲ್ಲಿ ಧಾರ್ಮಿಕ ಶಿಕ್ಷಣ ಕೊಡುವದರ ಸಂಬಂಧದಲ್ಲಿ ಮಾತಾಡುತ್ತ ಮೌಲಾನಾ ಅಝಾದರವರು ಹೀಗೆ ಹೇಳಿದರು. «ಹಿಂದುಸ್ತಾನದಲ್ಲಿ ಬೇರೆ ದೇಶಗಳಿಗಿಂತ ಧರ್ಮಕ್ಕೆ ಹೆಚ್ಚು ಜೋರು ಕೊಡಲಾಗುತ್ತಿತ್ತು, ಈಗಲೂ ಕೊಡಲಾಗುತ್ತದೆ. ಹಿಂದುಸ್ತಾನದ ಹಳೆಯ ಸಂಪ್ರದಾಯಗಳನ್ನು ಮತ್ತು ಈಗಿನ ಪರಂಪರೆಯನ್ನು ನೋಡಿದರೂ ಧಾರ್ಮಿಕ ಶಿಕ್ಷಣದ ಮಹತ್ವವನ್ನು ಒತ್ತಿ ಹೇಳುತಿರುವುದು ಕಂಡು ಬರುವದು ಶಿಕ್ಷಣದಲ್ಲಿ ಧಾರ್ಮಿಕ ಶಿಕ್ಷಣವನ್ನು ಸೇರಿಸಬೇಕೆಂದು ಸರಕಾರ ನಿರ್ಧರಿಸಿದರೆ ಅಂಥ ಧಾರ್ಮಿಕ ಶಿಕ್ಷಣ ಅತ್ಯಂತ ಉಚ್ಚ ದರ್ಜೆಯದಾಗಿರತಕ್ಕದ್ದು ಅವಶ್ಯವಾಗಿದೆ.

«ಹಿಂದುಸ್ತಾನದಲ್ಲಿ ಖಾಸಗಿ ಸಂಸ್ಥೆಗಳಲ್ಲಿ ಆಗಾಗ ಕೊಡಲಾಗುತಿರುವ ಧಾರ್ಮಿಕ ಶಿಕ್ಷಣದಿಂದ ವಿಶಾಲದೃಷ್ಟಿ, ಮನುಷ್ಯ ಮಾತ್ರರಲ್ಲಿ ಸಹಿಷ್ಣುತೆ ಮತ್ತು ಸುಹೃದ್ಭಾವನೆಗಳು ಉಂಟಾಗದೆ ಇವಕ್ಕೆ ತೀರ ವಿರುದ್ಧವಾದ ಪರಿಣಾಮಗಳುಂಟಾಗುತಿವೆ. ಸಾಂಪ್ರದಾಯಿಕ ಶಿಕ್ಷಣವನ್ನು ಕೂಡ ಖಾಸಗಿ ನಿಯಂತ್ರಿತ ಸಾಲೆಗಳಲ್ಲಿ ಗಿಂತ ಸರಕಾರನಿಯಂತ್ರಿತ ಸಾಲೆಗಳಲ್ಲಿ ಹೆಚ್ಚು ಉದಾರ ಭಾವನೆಯಿಂದ ಕೊಡುವ ಸಂಭವವಿದೆ. ಮಾನವರನ್ನು ಹೆಚ್ಚು ಸಹಿಷ್ಣುಗಳನ್ನಾಗಿ ಮತ್ತು ವಿಶಾಲ ಮನಸ್ಕರನ್ನಾಗಿ ಮಾಡುವದೆ ಎಲ್ಲ ಧಾರ್ಮಿಕ ಶಿಕ್ಷಣದ ಧ್ಯೇಯವಾಗಿರತಕ್ಕದ್ದು. ಖಾಸಗಿ ಜನರಿಗಿಂತ ಸರಕಾರದವರೆ ಈ ವಿಷಯವನ್ನು ಕೈಕೊಂಡರೆ ಹೆಚ್ಚು ಪರಿಣಾಮಕರವಾಗಿ ಇದನ್ನು ಮಾಡಬಲ್ಲರೆಂಬುದಾಗಿ ನನ್ನ ಅಭಿಪ್ರಾಯ. ಈ ವಿಷಯದಲ್ಲಿ ಸರಕಾರದ ನಿರ್ಣಯವನ್ನು ಅಲ್ಪಾವಧಿಯಲ್ಲಿಯೇ ನಾನು ತಿಳಿಸುವೆ.

«ಪಾದ್ರಿ ಸಂಸ್ಥೆಗಳು ನಡೆಸುತಿರುವ ಶೈಕ್ಷಣಿಕ ಚಟುವಟಿಕೆಗಳ ಸಂಬಂಧದಲ್ಲಿ ನನ್ನ ಅಭಿಪ್ರಾಯವನ್ನು ವ್ಯಕ್ತಮಾಡಬೇಕೆಂದು ನನಗೆನಿಸುತ್ತದೆ. ಆಧುನಿಕ ಶಿಕ್ಷಣದ ಪ್ರಸಾರಕಾರ್ಯದಲ್ಲಿ ಪಾದ್ರಿ ಸಂಸ್ಥೆಗಳು ಬಹಳ ಮಹತ್ವದ ಸೇವೆಯನ್ನು ಸಲ್ಲಿಸಿರುವವೆಂಬುದು ನಿಃಸಂದಿಗ್ಧವಾಗಿದೆ. ಆಧುನಿಕ ವಿಚಾರಗಳ ಪ್ರಸಾರದಲ್ಲಿಯೂ ಅವು ಅಮೂಲ್ಯ ಕಾರ್ಯಮಾಡಿವೆ. ಹಿಂದುಸ್ತಾನದಲ್ಲಿ ಮಾತ್ರವಲ್ಲ ಪೂರ್ವರಾಷ್ಟ್ರಗಳಲ್ಲೆಲ್ಲ ಆ ಸಂಸ್ಥೆಗಳು ಈ ಕಾರ್ಯವನ್ನು ಮಾಡಿರುವವು.

«ಹಿಂದಿನಕಾಲದಲ್ಲಿ ಪಾದ್ರಿ ಸಂಸ್ಥೆಗಳು ಮಾಡಿದಕಾರ್ಯದ ಉದಾಹರಣೆ ನಮ್ಮ ಮುಂದಿರುವಾಗ ಭವಿಷ್ಯತ್ತಿನಲ್ಲಿಯಾದರೂ ಅವರ ಆ ಮಾನವ ಸೇವೆಯ ಕಾರ್ಯವನ್ನು ಅಷ್ಟೇ ಗೌರವ ಭಾವದಿಂದ ಏಕೆ ಪ್ರಶಂಸಿಸಬಾರದೊ ನನಗೆ ತಿಳಿಯದು. ಒಂದು ಪ್ರಶ್ನೆಯ ಬಗ್ಗೆ ಹಲವು ಸಲ ಅಡಚಣೆಗಳು ಮುಂದೆ ಬರುವವು. ಅದೆಂದರೆ ಧರ್ಮಾಂತರದ ಜಟಿಲ ಸಮಸ್ಯೆ. ಜಗತ್ತಿನಲ್ಲಿ ಮಹತ್ವದ ವಿಚಾರಕ್ರಾಂತಿಯಾಗಿದೆ. ಸಾಮೂಹಿಕ ಧರ್ಮಾಂತರ ಧರ್ಮಾಂತರವೆ ಅಲ್ಲೆಂ

ಕೇಂದ್ರ ಸಲಹೆ ಸಮಿತಿಯ ಸೂಚನೆಗಳು

ಹೊಸದಿಲ್ಲಿ ತಾ ೨೭—

ರಾಷ್ಟ್ರೀಯ ಯುದ್ಧ ಸಂಸ್ಥೆಗೆ ಸಹಾಯಕವಾಗುವ ರೀತಿಯಲ್ಲಿ ಆಯಾ ಪ್ರಾಂತಗಳು ಮತ್ತೂ ಸಂಸ್ಥಾನಗಳು ಮಕ್ಕಳ ಶೀಲ ಮತ್ತು ಧುರೀಣತ್ವದ ಶಕ್ತಿಯ ಅಭಿವೃದ್ಧಿಗಾಗಿ ಅವರಿಗೆ ಸಾಕಷ್ಟು ಸೌಕರ್ಯಗಳನ್ನೊದವಿಸಿಕೊಡುವದಕ್ಕಾಗಿ ಗುರುಕುಲಪದ್ಧತಿಯ ಸಾಲೆಗಳನ್ನು ಸಂಸ್ಥಾಪಿಸಬೇಕೆಂದು ರಾಷ್ಟ್ರೀಯ ಯುದ್ಧಸಂಸ್ಥೆಯ ಕಾರ್ಯಸಮಿತಿಯವರು ಪಟ್ಟ ಅಭಿಪ್ರಾಯವನ್ನು ಶಿಕ್ಷಣ ಕೇಂದ್ರ ಸಲಹೆ ಸಮಿತಿಯು ಸಮರ್ಥಿಸುತ್ತದೆ.

ರಾಷ್ಟ್ರೀಯ ಯುದ್ಧೋತ್ತರ ಶಿಕ್ಷಣ ಯೋಜನೆಯಲ್ಲಿ ನಿರ್ದಿಷ್ಟಪಡಿಸಿದ ಹೊಸ ಮಾದರಿಯ ಸಾಲೆಗಳಲ್ಲಿ ಸೈನ್ಯಾಧಿಕಾರಿಗಳು ಭೂ—ಜಲ—ವಾಯು ಪಡೆಗಳಿಗಾಗಿ ಅವಶ್ಯವೆಂದು ಹೇಳುವ ಧುರೀಣತ್ವ, ಶೀಲ, ಬುದ್ಧಿಮತ್ತೆ, ಧೈರ್ಯ ಮತ್ತೂ ಶಾರೀರಿಕ ಯೋಗ್ಯತೆ ಮುಂತಾದ್ದಕ್ಕೆ ಅವಶ್ಯವಾದ ಶಿಕ್ಷಣವನ್ನು ಕೊಡಲಾಗುವದೆಂದು ಸಮಿತಿಯು ಅಭಿಪ್ರಾಯ ಪಡುತ್ತದೆ.

ಸೈನ್ಯಾಧಿಕಾರಿಗಳ ಮನಸಿನಲ್ಲಿರುವಂಥ ಸಾಲೆಗಳನ್ನಾಗಿ ಮಾರ್ಪಡಿಸುವದರ ಅವಶ್ಯಕತೆಯತ್ತ ಸಮಿತಿಯವರು ಪ್ರಾಂತಿಕ ಅಧಿಕಾರಿಗಳ ಗಮನವನ್ನು ಎಳೆಯಬಯಸುತ್ತಾರೆ. —ಅ.ಪ್ರೆ.

ವನಸ್ಪತಿ ತುಪ್ಪದ ಮೋಸ

ವನಸ್ಪತಿ ತುಪ್ಪದ ಮಾರಾಟದ ಮೇಲೆ ಸರಕಾರದವರು ಏನಾದರೂ ನಿರ್ಬಂಧವನ್ನು ಹಾಕಬಯಸಿರುವರೇ ಎಂದು ಮೊನ್ನೆ ದಿನ ಪ್ರಾಂತಿಕ ಶಾಸನ ಸಭೆಯಲ್ಲಿ ಪ್ರಶ್ನೆ ಕೇಳಿದಾಗ ಮಧ್ಯಪ್ರಾಂತ ಮತ್ತು ವರ್‍ಹಾಡ ಸರಕಾರದ ಆರೋಗ್ಯ ಮಂತ್ರಿಗಳಾದ ಡಾ. ಹಾಸನ್‍ರು ಶುದ್ಧ ವನಸ್ಪತಿ ತುಪ್ಪದ ಮಾರಾಟವನ್ನು ನಿರ್ಬಂಧಿಸಲು ಇಲ್ಲವೆ ಅದರ ಧಾರಣೆ ಹೆಚ್ಚುವಂತೆ ಹೆಚ್ಚು ಕರ ಹೇರುವದು ಸಾರ್ವಜನಿಕ ಆರೋಗ್ಯ ದೃಷ್ಟಿಯಿಂದ ಹಿತಪ್ರದವಾಗಲಾರದೆಂದು ಸರಕಾರಕ್ಕೆ ಸಲಹೆ ಕೊಡಲಾಗಿದೆ ಎಂದು ಉತ್ತರಿಸಿದರು.

ಈ ವರದಿಯನ್ನೋದಿ ನನಗೆ ಅತ್ಯಂತ ಆಶ್ಚರ್ಯವೆನಿಸಿತು. ಕೆಲ ವಾರಗಳ ಹಿಂದೆಯೇ ಮಹಾತ್ಮಾ ಗಾಂಧಿಯವರು ಹರಿಜನದಲ್ಲಿ ಲೇಖ ಬರೆದು ವನಸ್ಪತಿ ತುಪ್ಪದ ಮಾರಾಟವನ್ನು ತೀವ್ರ ಶಬ್ದಗಳಲ್ಲಿ ನಿಷೇಧಿಸಿದ್ದಲ್ಲದೆ ಅದೊಂದು ಸಾರ್ವಜನಿಕರಿಗೆ ಆಗುತ್ತಿರುವ ದೊಡ್ಡ ಮೋಸವೆಂದು ಅಭಿಪ್ರಾಯ ಪಟ್ಟರು. ಶಾಸ್ತ್ರೀಯ ದೃಷ್ಟಿಯಿಂದ ವಿಚಾರ ಮಾಡಿದರೂ ಆರೋಗ್ಯಕ್ಕೆ ವನಸ್ಪತಿ ತುಪ್ಪ ಅತ್ಯಂತ ಘಾತಕವಾಗಿದೆಂದು ನಿಃಸಂದೇಹವಾಗಿ ಈಗ ಸಿದ್ಧವಾಗಿ ಬಿಟ್ಟದೆ. ಹೀಗಿರುವಾಗ ಆರೋಗ್ಯ ಮಂತ್ರಿಗಳಿಗೆ ಇದರ ಗಂಭೀರ ಸ್ವರೂಪದ ಅರಿವು ಉಂಟಾಗದಿರುವದು ಆಶ್ಚರ್ಯಕರವಾಗಿದೆ.

ಕಳೆದ ವರ್ಷ ಬೆಂಗಳೂರಿನಲ್ಲಿ ಸಾಯಿನ್ಸ ಕಾಂಗ್ರೆಸ ಸಪ್ತಾಹದ ಕಾಲಕ್ಕೆ ವನಸ್ಪತಿ ತುಪ್ಪದ ಸಂಬಂಧದಲ್ಲಿ ವಿಚಾರ ಸಂಕಿರಣದ ಪ್ರಸಿದ್ಧವಾದ ವರದಿಯ ಕೆಲ ಭಾಗವನ್ನು ಇಲ್ಲಿ ಉಲ್ಲೇಖಿಸುವದು ಅವಶ್ಯವೆನಿಸುತ್ತದೆ.

«ವನಸ್ಪತಿ ತುಪ್ಪದ ಪೌಷ್ಟಿಕ ಗುಣಾವಗುಣಗಳ ಪ್ರಶ್ನೆಯನ್ನು ಕೂಲಂಕಷವಾಗಿ ಚರ್ಚಿಸಲಾಯಿತು. ವನಸ್ಪತಿ ತುಪ್ಪದ ಪೌಷ್ಟಿಕತೆಯ ಬಗ್ಗೆ ಅಧಿಕೃತ ಮತ್ತು ವಿಶ್ವಾಸಾರ್ಹ ಘೋಷಣೆ ಹೊರಬೀಳುವ ವರೆಗೆ ಕನಿಷ್ಠ ಅದರ ಅನಪಾಯಕಾರಿತ್ವದ ಬಗ್ಗೆ ಗೊತ್ತಾಗುವ ವರೆಗೆ ಭಾರತೀಯರ ಆಹಾರ ಪದಾರ್ಥಗಳಲ್ಲಿ ಅದಕ್ಕೆ ವ್ಯಾಪಕವಾದ ಮತ್ತು ಅನಿರ್ಬಂಧ ಸ್ಥಾನವನ್ನು ಕೊಡುವದು ರಾಷ್ಟ್ರೀಯ ಆರೋಗ್ಯದ ದೃಷ್ಟಿಯಿಂದ ಘಾತಕವಾದುದೆಂದು ಎನಿಸುತ್ತದೆ. ಈ ಉದ್ಯೋಗದ ಅಭಿವೃದ್ಧಿ ಮತ್ತು ಪ್ರಗತಿ ಇಷ್ಟೊಂದು ಆಗಿದ್ದರೂ ಅದರ ಪೌಷ್ಟಿಕ ಮೂಲ್ಯದ ಬಗ್ಗೆ ಶುದ್ಧಿ ಸಂಗತಿಗಳು ಗೊತ್ತಾಗದಿದ್ದುದು ಆಶ್ಚರ್ಯಕರವೆಂದು ಮದ್ರಾಸಿನ ಪ್ರೊಫೆಸರ ದಾಮೋದರನ್‍ರವರು ಅಭಿಪ್ರಾಯ ಪಟ್ಟಿದ್ದು ಉಲ್ಲೇಖನೀಯವಾಗಿದೆ. ವನಸ್ಪತಿ ತುಪ್ಪದ ಬಗೆ ಹೆಚ್ಚು ಸಂಗತಿಗಳು ಗೊತ್ತಾದರೆ ತಮ್ಮ ಈ ಉದ್ಯೋಗದ ಮೇಲೆ ದುಷ್ಪರಿಣಾಮವಾಗುವದೆಂದು ಸಮರ್ಥ ವಿಶಿಷ್ಟ ಹಿತಸಂಬಂಧವುಳ್ಳವರು ಅವನ್ನೆಲ್ಲ ಮರೆಮಾಚಲು ಒಂದು ಬಗೆಯಿಂದ ಗುಪ್ತ ಕಾರಸ್ಥಾನ ನಡೆಸಿರುವರೆಂದು ಹೇಳಬಹುದು.

«ಇದರ ಪೌಷ್ಟಿಕ ಮೌಲ್ಯವನ್ನು ಕಂಡು ಹಿಡಿಯುವುದಕ್ಕಾಗಿ ದೇಶದಲ್ಲಿಯ ಕೆಲ ಶಾಸ್ತ್ರಿಗಳು ಪರಿಶ್ರಮಪಡುತಿರುವದು ನಿಜವಾಗಿ ಸುದೈವದ ಸಂಗತಿಯಾಗಿದೆ. ಡಾ. ವಿ. ಎನ್. ಪಟವರ್ಧನ (ಮುಂಬಯಿ) ಇವರು ಈ ವಿಚಾರ ಸಂಕಿರಣದ ಕಾಲಕ್ಕೆ ಭಾಷಣ ಮಾಡುತ್ತ ವನಸ್ಪತಿ ತುಪ್ಪದಿಂದ ಪ್ರಾಣಿಗಳ ಬೆಳವಣಿಗೆ ಮತ್ತು

—೧೧ನೇ ಪುಟಕ್ಕೆ

ಹಿಂದುಸ್ತಾನಕ್ಕೆ ಒಡನೆ ಸಾಮಂತ ಸ್ವರಾಜ್ಯ? —

ಬ್ರಿಟಿಶರು ೧೯೪೮ ರಲ್ಲಿ ಖಂಡಿತ ಹೊರಬೀಳುವರು —

ಹಿಂದುಸ್ತಾನದಲ್ಲಿ ಪ್ರಚಂಡ ರಾಜಕೀಯ ಚಟುವಟಿಕೆ

ಇದನ್ನು ಬರೆಯುತ್ತಿರುವಾಗ ಹಿಂದುಸ್ತಾನದ ಹೊಸ ಮತ್ತು ಕೊನೆಯ ವಾಯಿಸರಾಯರಾದ ಲಾರ್ಡ ಲುಯಿ ಮೌಂಟಬ್ಯಾಟನ್ನರು ಪರಿವಾರ ಸಮೇತರಾಗಿ ವಿಮಾನ ಮೂಲಕ ಹಿಂದುಸ್ತಾನಕ್ಕೆ ಹೊರಟಿರುವರು. ಈ ಸಂಚಿಕೆ ವಾಚಕರ ಕೈ ಸೇರುವ ಮೊದಲೇ ತಾ. ೨೨ ಕ್ಕೆ ಅವರು ಹಿಂದುಸ್ತಾನದಲ್ಲಿ ಬಂದಿಳಿದಿರುವರು ಮತ್ತು ವಾಯಿಸರಾಯ ಗದ್ದುಗೆಯಲ್ಲಿ ದೃಢವಾಗಿ ಆಸೀನರಾಗಿರುವರು. ಹೊಸ ವಾಯಿಸರಾಯರು ಹಿಂದುಸ್ತಾನ ಸೇರಿದೊಡನೆ ಇನ್ನು ೧೪ ತಿಂಗಳೊಳಗೆ ಹಿಂದುಸ್ತಾನದಿಂದ ಹೊರಟಿದ್ದು ಹೋಗುವ ಸನ್ನಾಹವನ್ನು ಹೇಗೆ ಪ್ರಾರಂಭಿಸುವರೆಂಬ ಬಗ್ಗೆ ದಿನದಿನಕ್ಕೆ ಊಹಾಪೋಹಗಳು ಬರುತ್ತಿವೆ. ನಿನ್ನಿನ ಸುದ್ದಿಯನ್ನು ಇಂದಿನ ಸುದ್ದಿ ಗಲ್ಲಗಳೆಯುತ್ತಿದೆ. ಕಳೆದ ವಾರ ವರದಿಯಾದ, ಅವರು ನಡುಗಾಲ ಸರಕಾರದ ರಾಜೀನಾಮೆಯನ್ನು ಕೇಳಿ ಲೀಗನ್ನು ನಿರುಪಾಯವಾಗಿ ಮಾಡುವರೆಂಬ, ಸುದ್ದಿ ನಿರಾಧಾರವೆಂದು ಈಗ ತಿಳಿದುಬಂದಿದೆ. ಅದರ ... ನದಲ್ಲಿ ಹೊಸ ಸುದ್ದಿಗಳು ಅವತರಿಸಿವೆ. ಕಾಮನ್ಸ ಸಭೆಯಲ್ಲಿ ನಡೆದ ಕೆಲ ಪ್ರಶ್ನೋತ್ತರಗಳ ಸಂದರ್ಭದಲ್ಲಿ ನಡುಗಾಲ ಸರಕಾರವನ್ನು ಸಾಮಂತ ರಾಜ್ಯದಂತೆ ನಡೆಸಿಕೊಳ್ಳಲಾಗುವದಿಲ್ಲೆಂದು ಭಾರತ ಮಂತ್ರಿಗಳು ಕೊಟ್ಟ ಉತ್ತರದಿಂದ ಕೆಲ ಉಗ್ರವಾದಿಗಳು ಬ್ರಿಟಿಶರು ಹಿಂದುಸ್ತಾನವನ್ನು ಬಿಟ್ಟು ಹೋಗುವ ವಿಷಯದಲ್ಲಿ ಪ್ರಾಮಾಣಿಕರಾಗಿಲ್ಲೆಂದು ಸಂಶಯಪಟ್ಟರು. ಆದರೆ ಇಂಥ ಸಂದೇಹ ನಿರಾಧಾರವಾಗಿದೆಯೆಂದು ಈಗ ಅಧಿಕೃತವಾಗಿ ತಿಳಿದು ಬಂದಿದೆ. ಏನೇ ಬಂದರೂ ೧೯೪೮ ಜೂನ ತಿಂಗಳೊಳಗೆ ಬ್ರಿಟಿಶರು ಈ ದೇಶವನ್ನು ಬಿಟ್ಟು ಹೋಗುವದು ಖಂಡಿತವೆಂದೂ ಅದಕ್ಕೆ ಪೂರ್ವಭಾವಿಯಾಗಿ ಮಾಡಬೇಕಾದುದನ್ನೆಲ್ಲ ಹೊಸ ವಾಯಿಸರಾಯರಿಗೆ ವಿವರವಾಗಿ ತಿಳಿಸಲಾಗಿದೆಯೆಂದೂ ಹೇಳಲಾಗಿದೆ. ಮೌಂಟಬ್ಯಾಟನ್ನರು ಬ್ರಿಟಿಶ ಸರಕಾರದ ಮನಸ್ಸಿನಲ್ಲೇನಿದೆ, ಅವರ ಉದ್ದೇಶವೇನೆಂಬುದನ್ನು ಚನ್ನಾಗಿ ಅರಿತುಕೊಂಡು ಹಿಂದುಸ್ತಾನಕ್ಕೆ ಬರುವರು.

ಕೆಲವು ಊಹೆಗಳು

ಹೊಸ ವಾಯಿಸರಾಯರು ಹಿಂದುಸ್ತಾನಕ್ಕೆ ಬಂದೊಡನೆ ಅಂಥ ಅಪೂರ್ವ ಕ್ರಮವನ್ನೇನೂ ಕೈಕೊಳ್ಳಲಿಕ್ಕಿಲ್ಲವೆಂದು ತೋರುತ್ತದೆ. ಆದರೆ ಅವರ ಮುಂದಿರುವ ಸಮಯ ಬಹಳ ಕಡಿಮೆ. ಅಧಿಕಾರವನ್ನು ವರ್ಗಾಯಿಸುವದಕ್ಕೆ ಸಂಬಂಧಿಸಿದ ಕೆಲಸ ರಾಶಿರಾಶಿ ಇವೆ. ಆದ್ದರಿಂದ ಅವರು ಸಮಯವನ್ನು ಕಳೆಯುವಂತಿಲ್ಲ. ಬ್ರಿಟಿಶ ಸರಕಾರ ಏಕೀಕೃತ ಹಿಂದುಸ್ತಾನಕ್ಕೆ ಅಧಿಕಾರ ಬಿಟ್ಟು ಕೊಡುವ ಸಲುವಾಗಿ ಮೊದಲು ಪ್ರಯತ್ನ ಮಾಡಿ ನೋಡುವದು. ಈಚೆಗಿನ ಕೆಲ ಘಟನೆಗಳಿಂದ ಸ್ಥಿರವಾದ ಕೇಂದ್ರ ಸರಕಾರವಿರುವದರ ಅವಶ್ಯಕತೆ ಬ್ರಿಟಿಶ ಸರಕಾರಕ್ಕೆ ಹೆಚ್ಚು ಮನವರಿಕೆಯಾಗಿದೆಯಂತೆ. ಸದ್ಯದ ನಡುಗಾಲ ಸರಕಾರವೂ ಅದರ ಪ್ರಾತಿನಿಧಿಕ ಸ್ವರೂಪವೂ ಅಂಥ ಸ್ಥಿರ ಪ್ರಬಲ ಸರಕಾರಕ್ಕೆ ಮಾದರಿಯಾಗಿಂಬೇಕೆಂದು ಬ್ರಿಟಿಶ ಸರಕಾರದ ವಿಚಾರ. ಆದಕ್ಕಾಗಿ ಮುಂದಿನ ೧೪ ತಿಂಗಳಲ್ಲಿ ಭಾರವಾದ ಹೊಣೆಗಾರಿಕೆಯನ್ನು ಹೊತ್ತು ಸಹಕಾರದಿಂದ ಕೆಲಸ ಮಾಡುವಂತೆ ಹಿಂದೀ ಮುಂದಾಳುಗಳ ಮನವೊಲಿಸುವದ್ದೇ ಮೌಂಟ ಬ್ಯಾಟನ್ನರ ಮೊದಲನೆ ಪ್ರಯತ್ನವಾಗುವದು. ಅಧಿಕಾರ ತ್ಯಾಗದ ಸಂಬಂಧದಲ್ಲಿ ಹಿಂದುಸ್ತಾನದಲ್ಲಿ ಸಂಭವಿಸಬಹುದಾದ ಪರಿಸ್ಥಿತಿಯ ಅನೇಕ ರೂಪಗಳನ್ನು ಬ್ರಿಟಿಶ ಸರಕಾರ ಮುಂಗಂಡಿದ್ದು ಪ್ರತಿಯೊಂದು ಸಂಭಾವ್ಯತೆಯನ್ನೂ ಎದುರಿಸಲು ಪ್ರತಿ ಪ್ರತ್ಯೇಕ ಮಾರ್ಗಗಳನ್ನು ಸಿದ್ಧಗೊಳಿಸಲಾಗಿದೆಯಂತೆ.

ಪಂಜಾಬದಲ್ಲಾದ ಘಟನೆಗಳಿಂದ ಬ್ರಿಟಿಶ ಸರಕಾರದ ಮೇಲೆ ಬಹಳ ಪರಿಣಾಮವಾಗಿದೆಯೆಂದು ನಂಬಲಾಗಿದೆ. ಬ್ರಿಟಿಶ ಸರಕಾರ. ಫೆಬ್ರುವರಿ ೨೦ ರ ಘೋಷಣೆಯಿಂದ—ಅದರಲ್ಲೂ ಪ್ರಾಂತಗಳಿಗೆ ಅಧಿಕಾರವನ್ನು ವರ್ಗಾಯಿಸುವ ಸಂಭಾವ್ಯತೆಯನ್ನು ಒಪ್ಪಿಕೊಂಡದ್ದರಿಂದ—ಹಿಂದುಸ್ತಾನದಲ್ಲಿ ಬ್ರಿಟಿಶ ಸರಕಾರದ ಎಣಿಕೆಗೆ ಬದ್ಧ ವಿರುದ್ಧ ಪರಿಣಾಮವಾಗಿದೆ. ಅವಸರವನ್ನು ಲಕ್ಷಿಸಿ ಬಂದಾಗುವ ಬದಲು ಅಧಿಕಾರವನ್ನು ಪಾಲು ಮಾಡಿಕೊಳ್ಳುವ ವಿಷಯದಲ್ಲಿ ಈಗಾಗಲೆ ಭಯಂಕರ ಕಚ್ಚಾಟಗಳು ಆರಂಭವಾಗಿವೆ. ಇದಲ್ಲದೆ ಆ ಘೋಷಣೆಯಿಂದ ಹಿಂದುಸ್ತಾನದಲ್ಲಿರುವ ಅಧಿಕಾರಿಗಳ ನಿಷ್ಠೆಯೂ ಸಡಿಲಾಗಿದೆ. ಅವರು ಹೊಣೆಯನ್ನು ಸರಿಯಾಗಿ ನಿರ್ವಹಿಸಲು ಮನಸಿಲ್ಲದವರಾಗಿರುವರು. ಕಾಮನ್ಸ ಸಭೆಯಲ್ಲಿ ನಡೆದ ಪ್ರಶ್ನೋತ್ತರಗಳನ್ನು ನೋಡಿದರೆ ಕೆಲ ಬ್ರಿಟಿಶ ರಾಜಕಾರಣಿಗಳು ಈ ಔದಾಸೀನ್ಯವನ್ನು ಹಿಂದುಸ್ತಾನದಲ್ಲಿರುವ ಬ್ರಿಟಿಶ ಸೈನ್ಯಕ್ಕೂ ಹಬ್ಬಿಸಲು ಬಗೆಯುತ್ತಿದಾರೆಂದು ಭಾವಿಸಬಹುದಾಗಿದೆ. ಬ್ರಿಟಿಶ ಸೈನ್ಯವನ್ನು ಹಿಂದೀ ಗಲಭೆಗಳ ದಮನಕ್ಕಾಗಿ ಉಪಯೋಗಿಸಿದ್ದೇಕೆಂದು ಕೇಳಲಾಯಿತು. ಹಿಂದುಸ್ತಾನದಲ್ಲಿ ಅವರಿದ್ದಷ್ಟು ದಿನ ಅಲ್ಲಿ ಶಾಂತಿ ಸ್ಥಾಪನೆಯ ಕಾರ್ಯದಲ್ಲಿ ನೆರವಾಗುವದು ಅವರ ಕರ್ತವ್ಯವೆಂದು ತಿಳಿಸಲಾಯಿತು. ಹಿಂದೀ ಅಧಿಕಾರಿಗಳಲ್ಲೂ ರಾಜಕೀಯ ಭಾವನೆಗಳು ಬೆಳೆದದ್ದು ಪಂಜಾಬ ಗಲಭೆಗಳಲ್ಲಿ ನಿದರ್ಶನಕ್ಕೆ ಬಂದಿವೆ. ಹಿಂದೀ ಸೈನ್ಯಕ್ಕೂ ಈ ವಿಕಾರ ಹಬ್ಬಿದರೆ ಪರಿಸ್ಥಿತಿ ಕೈಮೀರಿ ಹೋಗಬಹುದು. ಈ ಎಲ್ಲ ವಿಷಯಗಳನ್ನು ವಿಚಾರಮಾಡಿ ಹಿಂದುಸ್ತಾನಕ್ಕೆ ಬಂದ ಪಾರ್ಲಮೆಂಟು ಶಿಷ್ಟ ಮಂಡಲದಲ್ಲೊಬ್ಬರಾದ ಮೇಜರ ವ್ಯಾಟ ಹಿಂದುಸ್ತಾನದ ಅಧಿಕಾರವನ್ನು ಒಂದೇ ಕೇಂದ್ರ ಆಡಳಿತೆಗೆ ಒಪ್ಪಿಸುವದಾಗಿ ಜಾಹೀರುಪಡಿಸಬೇಕೆಂದು ಸೂಚಿಸಿದ್ದಾರೆ. ಈ ವಿಚಾರ ಅನೇಕ ಪಾರ್ಲಮೆಂಟ ಸದಸ್ಯರಿಗೆ ಸರಿತೋರಿದೆಯಂತೆ. ಹಿಂದುಸ್ತಾನವನ್ನು ಒಂದೇ ಕೇಂದ್ರ ಆಡಳಿತೆಗೊಪ್ಪಿಸುವದೇ ಯೋಗ್ಯವೆಂದೂ ವಿಭಜಿಸಿಕೊಳ್ಳುವದು ಬಿಡುವದು ಹಿಂದಿಯರಿಗೇ ಸೇರಿದ್ದೆಂದೂ ಅವರ ಹೇಳಿಕೆ. ಹಿಂದುಸ್ತಾನದಲ್ಲಿ ಐಕ್ಯಭಾವವನ್ನು ಬೆಳೆಸಲು ಇದೊಂದೆ ಉಪಾಯವೆಂದು ಅವರು ಸೂಚಿಸುತ್ತಿದ್ದಾರೆ. ಈ ಕಾರಣಕ್ಕಾಗಿ ಒಡನೆ ಹಿಂದುಸ್ತಾನಕ್ಕೆ ಸಾಮಂತ ಸ್ವರಾಜ್ಯ ಕೊಡಬೇಕೆಂದು ಅವರು ಒತ್ತಾಯಗೊಳಿಸಿದ್ದಾರೆ. ಈ ಬಗ್ಗೆ ಈಗಾಗಲೆ ನಿರ್ಣಯವಾಗಿದ್ದು, ಅಂಥ ಕಾಯದೆಯೊಂದನ್ನು ಬೇಗನೆ ಪಾರ್ಲಮೆಂಟಿನ ಮುಂದೆ ತರುವದಾಗಿಯೂ ಆ ವರೆಗೆ ಅನೌಪಚಾರಿಕವಾಗಿ ನಡುಗಾಲ ಸರಕಾರಕ್ಕೆ ಸಾಮಂತ ಮಂತ್ರಿಮಂಡಲದ ಸ್ಥಾನಮಾನವನ್ನೀಯಲಾಗುವದೆಂದೂ ಊಹಿಸಲಾಗಿದೆ. ಹೀಗೆ ಸಾಮಂತ ಸ್ವರಾಜ್ಯವನ್ನು ಒಡನೆ ಕೊಟ್ಟರೆ ಹಿಂದೀಯರಿಗೆ ಬ್ರಿಟಿಶರು ಹೋಗುವ ಮುನ್ನ ಕನಿಷ್ಠ ಒಂದು ವರ್ಷದ ಅನುಭವ ದೊರೆತು, ಬ್ರಿಟಿಶ ಸಾಮ್ರಾಜ್ಯದಲ್ಲಿ ಉಳಿಯುವದರಿಂದಾಗುವ ಹಿತ ಅವರಿಗೆ ಮನವರಿಕೆಯಾದೀತೆಂದು ಆಶಿಸಲಾಗಿದೆ. ಸಾಮ್ರಾಜ್ಯದಲ್ಲಿ ಉಳಿಯುವದರಿಂದ ಹಿಂದೀ ಐಕ್ಯವನ್ನು ಕಾಯ್ದುಕೊಳ್ಳುವದು ಸಾಧ್ಯವಾದರೆ ಹಿಂದೀ ಮುಂದಾಳುಗಳು ಅದಕ್ಕೊಪ್ಪಬಹುದೆಂದು ಬ್ರಿಟಿಶರು ನಿರೀಕ್ಷಿಸಿರಬಹುದು.

ಉಗ್ರ ಚಟುವಟಿಕೆ

ಇತ್ತ ಹಿಂದುಸ್ತಾನದ ರಾಜಕೀಯ ಮತ್ತು ಆಡಳಿತ ರಂಗದಲ್ಲಿ ಶುದ್ಧ ಕೋಲಾಹಲ ಪಸರಿಸಿದೆ. ಅದರ ನಡುವೆ ಪ್ರಚಂಡ ರಾಜಕೀಯ ಚಟುವಟಿಕೆಯೂ ನಡೆಯುತ್ತಿದೆ. ಪಂಜಾಬದಲ್ಲಿಯೂ ಅದಕ್ಕಿಂತಲೂ ಹೆಚ್ಚಾಗಿ ಗಡಿನಾಡಿನಲ್ಲಿಯೂ ನಡೆದ ಗಲಭೆಗಳು ಈ ರಾಜಕೀಯ ಚಟುವಟಿಕೆಯ ದ್ಯೋತಕವಾಗಿವೆ. ಪ್ರಾಂತಗಳಿಗೆ ಅಧಿಕಾರವನ್ನು ವರ್ಗಾಯಿಸಬಹುದೆಂದು ಬ್ರಿಟಿಶ ಸರಕಾರ ಸದುದ್ದೇಶದಿಂದಲೇ ಅದರೂ ಆಶೆ ತೋರಿಸಿದ್ದರಿಂದ ಪಾಕಿಸ್ತಾನಕ್ಕೆ ಸೇರಬೇಕಾದ ಪ್ರಾಂತಗಳಲ್ಲೆಲ್ಲ ಯೋಗ ... ಪ್ರಕಾರೀಣ ಅಧಿಕಾರ ... ಗದ್ದುಗೆಯಲ್ಲಿ ಕುಳಿತುಕೊಳ್ಳಬೇಕೆಂದು ಲೀಗು ವಿಚಾರ ಮಾಡಿದೆ. ಪಂಜಾಬದಲ್ಲಿ ನಾಗರಿಕ ಹಕ್ಕಿನ ಹೆಸರಲ್ಲಿ ಚಳವಳಿ ಹೂಡಿ ಸಮ್ಮಿಶ್ರ ಸರಕಾರವನ್ನು ಉರುಳಿಸಿದ ನಂತರ ಸೀಖ-ಹಿಂದೂ ವಿರೋಧದ ಮೂಲಕ ಲೀಗು ಗದ್ದುಗೆಯೇರಲಾರದ್ದರಿಂದಲೇ ಹಿಂದೂ ಅಲ್ಪಸಂಖ್ಯಾತ ಜಿಲ್ಲೆಗಳಲ್ಲಿ ಈ ಬಗೆಯ ಹತ್ಯಾಕಾಂಡ ನಡೆಯಿತು. ಆದರೆ ಅದರಿಂದೊದಗಿದ ಫಲ ಮಾತ್ರ ಲೀಗಿಗೆ ಅಪ್ರಿಯವಾಗಿಯೆ ಪರಿಣಮಿಸಿತು. ಪಂಜಾಬ ವಿಭಜನೆಯ ಪ್ರಬಲ ಚಳವಳಿಯೊಂದನ್ನು ಕಾಂಗ್ರೆಸ್ಸ ಪುರಸ್ಕರಿಸಿತು. ಬಂಗಾಲದ ವಿಭಜನೆಯ ಬೇಡಿಕೆಯೂ ಬೆಳೆಯುತ್ತಿದೆ. ಹಿಂದುಸ್ತಾನದ ವಿಭಜನೆಯನ್ನು ಬೇಡುವವರು ಈ ಹಿಂದೂ ಸೀಖ ವಿಭಜನವಾದಿಗಳ ಬೇಡಿಕೆಯನ್ನು ಹೇಗೆ ನಿರಾಕರಿಸುವರು? ಗಡಿನಾಡಿನಲ್ಲಿಯೂ ಈಗಿರುವ ಸರಕಾರವನ್ನು ಉರುಳಿಸಿ ಹೊಸ ಚುನಾವಣೆಗಳನ್ನು ನಡೆಸಬೇಕೆಂದೇ ಲೀಗು ಗಲಭೆಯಲ್ಲಿ ತೊಡಗಿದೆ. ಬಂಗಾಲ ಪಂಜಾಬಗಳ ವಿಭಜನ ಚಳವಳಿಯನ್ನು ನಿಲ್ಲಿಸಲು ಆ ಪ್ರಾಂತಗಳ ಸೀಖರಿಗೂ ಹಿಂದುಗಳಿಗೂ 'ಅಮಿಷ' ತೋರಲಾಗುತ್ತಿದೆ. ಬಂಗಾಲ ಮುಖ್ಯ ಮಂತ್ರಿಗಳಿಗಂತೂ ಸಮ್ಮಿಶ್ರ ಸರಕಾರ ಈಚೆಗೆ ಬಹಳ ಮೋಹಕವಾಗತೊಡಗಿದೆ. ಮಂತ್ರಿಗಳೊಬ್ಬರು ಅಖಂಡ ಬಂಗಾಲದ ಸಮೃದ್ಧ ಚಿತ್ರವನ್ನೂ ಅಲ್ಲಿ ಎಲ್ಲರಿಗೂ ನ್ಯಾಯ ಕೊಡುವ ಅಮೇರಿಕನ್ ಮಾದರಿಯ ಪ್ರಜಾತಂತ್ರವನ್ನೂ (ಇಸ್ಲಾಮಿ ರಾಜ್ಯವನ್ನಲ್ಲ!) ಪ್ರತಿಪಾದಿಸಿದರು. ಆದರೆ ಅತ್ತ ಆಸಾಮವನ್ನು ಮುಸ್ಲಿಮ ರಾಜ್ಯವಾಗಿ ಮಾಡಲು ದೊಡ್ಡ ಒಳಸಂಚೊಂದನ್ನು ಬಂಗಾಲ ಮಂತ್ರಿಗಳೇ ರಚಿಸುತ್ತಿರುವರೆಂದು ತಿಳಿದು ಬಂದಿದೆ. ಹಿಂದೂ ಸೀಖರು ಈ ಅಮಿಷಕ್ಕೆ ಬಲಿಬೀಳುವದು ಸಂದೇಹಕರ. ಅವರೆ ಕಾಂಗ್ರೆಸ್ಸಿನ ಬೆಂಬಲಿಗರಾದ ರಾಷ್ಟ್ರೀಯ ಮುಸ್ಲಿಮರೇ ಈ ವಿಭಜನೆಗಳನ್ನು ವಿರೋಧಿಸುತ್ತಿದ್ದಾರೆ. ಅದರಿಂದ ಕಾಂಗ್ರೆಸ್ಸಿನ ಸ್ಥಿತಿ ಕಠಿನವಾಗಿದೆ.

ಜಿನ್ನಾಸಾಹೆಬರು ಇನ್ನೂ ಬ್ರಿಟಿಶ ಘೋಷಣೆಯ ಬಗ್ಗೆ ತುಟಿ ತೆರೆದಿಲ್ಲ. ಹೊಸ ವಾಯಿಸರಾಯರು ಬಂದ ನಂತರವೇ ಅವರು ಕೊನೆಯ ನಿರ್ಣಯ ಮಾಡಬಹುದು. ಈಗಾಗಲೆ ಅವರು ದಿಲ್ಲಿಯಲ್ಲಿ ಹೋಗಿ ತಳವೂರಿದ್ದಾರೆ.

ಕರಭಾರಗಳನ್ನು ಕಡಿಮೆ ಮಾಡಲಾಯಿತು

ಕೇಂದ್ರ ಶಾಸನ ಸಭೆಯ ಕಾರ್ಯಕಲಾಪ

ನಿಯಂತ್ರಣಗಳ ಅವಶ್ಯಕತೆ

ಕೇಂದ್ರ ಶಾಸನ ಸಭೆಯಲ್ಲಿ ತಾ. ೧೪ ಕ್ಕೆ ನಿಯಂತ್ರಣಗಳ ಉಪಯುಕ್ತತೆಯ ಬಗ್ಗೆ ತುರುಸಿನ ಚರ್ಚೆ ನಡೆಯಿತು. ಮುಂಗಡ ಪತ್ರಿಕೆಯ ಬೇಡಿಕೆಗಳ ಚರ್ಚೆ ನಡೆದಾಗ ಪ್ರೊ. ರಂಗಾ ಅವರು ಆಹಾರೇತರ ವಸ್ತುಗಳ ನಿಯಂತ್ರಣವನ್ನು ಕಾಯ್ದುಕೊಂಡು ಹೋಗುವದರ ಬಗ್ಗೆ ಸರಕಾರದ ಧೋರಣವನ್ನು ವಿಚಾರಿಸಲು ಕಡಿತ ಸೂಚನೆ ಮಂಡಿಸಿದ್ದರು. ವೆಳ್ಳಂಗಿರಿ ಗೌಡ, ಡಾ. ಝಿಯಾ ಉದ್ದೀನ ಅಹಮ್ಮದ, ಲಕ್ಷ್ಮೀಕಾಂತ ಮೈತ್ರ, ಗಾಡಗೀಳ ಮೊದಲಾದವರು ನಿಯಂತ್ರಣಗಳಿಂದಾಗುವ ಅನಾನುಕೂಲತೆಯನ್ನು ಬಣ್ಣಿಸಿದರು. ಉತ್ತರ ಕೊಡುತ್ತ ಪೂರೈಕೆ ಮಂತ್ರಿ ರಾಜಾಜಿಯವರು ಅಧಿಕಾರಿಗಳ ಮತ್ತು ವ್ಯಾಪಾರಿಗಳ ಮೇಲಿನ ಆರೋಪ ಅತಿಶಯೋಕ್ತಿಪೂರ್ಣವಾಗಿವೆಯೆಂದೂ ಕೆಲವು ನಿಯಂತ್ರಣಗಳನ್ನು ಕಿತ್ತು ಹಾಕಿ ಅವುಗಳ ಪರಿಣಾಮವನ್ನು ನೋಡಿಕೊಂಡು ಮುಂದಿನ ನಿರ್ಣಯ ಮಾಡಬೇಕಾಗುವದೆಂದೂ ತಿಳಿಸಿದರು. ರಂಗಾ ಅವರು ತಮ್ಮ ಕಡಿತ ಸೂಚನೆ ಹಿಂತೆಗೆದುಕೊಂಡರು.

ಅತಿ ಪ್ರಸರಣ

ಸರಕುಗಳ ಬೆಲೆ ಹೆಚ್ಚುತ್ತಿರುವದನ್ನು ಚರ್ಚಿಸಲು ಮನು ಸುಬೇದಾರರು ಕಡಿತ ಸೂಚನೆ ಮಂಡಿಸಿ ಅತಿ ಪ್ರಸರಣವನ್ನು ತಡೆಯಬೇಕೆಂದರು. ಅರ್ಥಿಕ ಮಂತ್ರಿ ಲಿಯಾಕತರು ನಡುಗಾಲ ಸರಕಾರ ಅಧಿಕಾರಕ್ಕೆ ಬಂದ ನಂತರ ನೋಟುಗಳ ಚಲಾವಣೆ ಹೆಚ್ಚಿಲ್ಲವೆಂದು ತಿಳಿಸಿದರು. ಕಡಿತ ಹಿಂತೆಗೆದುಕೊಳ್ಳಲ್ಪಟ್ಟಿತು.

ವಿದೇಶಗಳಲ್ಲಿನ ಹಿಂದೀಯರು

ತಾ ೧೪ನೆ ದಿನ ಮನು ಸುಬೇದಾರರ ಪ್ರಶ್ನೆಗೆ ಉತ್ತರವೀಯುತ್ತ ಪಂಡಿತ ಜವಾಹರಲಾಲರು ವಿದೇಶಗಳಲ್ಲಿರುವ ಹಿಂದೀಯರ ಬಗ್ಗೆ ಹಿಂದುಸ್ತಾನ ಸರಕಾರದ ಧೋರಣೆಯನ್ನು ತಿಳಿಸಿದರು. ವಿದೇಶಗಳಲ್ಲಿ ಹಿಂದೀ ರಾಯಭಾರಿಗಳನ್ನೂ ವಕೀಲರನ್ನೂ ನೇಮಿಸುವ ಕೆಲಸ ಭರದಿಂದ ಸಾಗಿದೆಯೆಂದೂ ಅವರ ಮೂಲಕವೇ ವಿದೇಶಗಳಲ್ಲಿರುವ ಹಿಂದೀಯರ ಸಮಸ್ಯೆಗಳನ್ನು ಸಮಾಧಾನಕರವಾಗಿ ಬಿಡಿಸಬಂದೀತೆಂದೂ ಅವರು ಅಭಿಪ್ರಾಯಪಟ್ಟರು. ವಿದೇಶಗಳಲ್ಲಿ ರಾಯಭಾರ ಕಾರ್ಯಕ್ಕಾಗಿ ಅಧಿಕಾರಿಗಳನ್ನು ೧॥ ವರ್ಷ ಶಿಕ್ಷಣ ಕೊಟ್ಟು ತಯಾರಿಸಲಾಗುತ್ತಿದೆಯೆಂದೂ ತಿಳಿಸಲಾಯಿತು.

ದಕ್ಷಿಣ ಆಫ್ರಿಕಾ ಹಿಂದೀಯರು

ದಕ್ಷಿಣ ಆಫ್ರಿಕಾ ಹಿಂದೀಯರ ಪ್ರಶ್ನೆಯನ್ನು ಚರ್ಚಿಸಲು ಸೇಠ ಗೋವಿಂದ ದಾಸರು ಮಂಡಿಸಿದ ಕಡಿತಕ್ಕೆ ಉತ್ತರ ಕೊಡುತ್ತ ಜವಾಹರಲಾಲರು ಯುಕ್ತರಾಷ್ಟ್ರ ಸಂಸ್ಥೆ ಈ ಪ್ರಶ್ನೆಯನ್ನು ಬಗೆಹರಿಸಲು ದ. ಆಫ್ರಿಕಾ ಸರಕಾರವೇ ಮುಂದಾಗಬೇಕೆಂದು ಆದೇಶವಿತ್ತಿದ್ದರೂ ಅದಿನ್ನೂ ಯಾವ ಕ್ರಮವನ್ನೂ ಕೈಕೊಂಡಿಲ್ಲ. ಒಂದು ವೇಳೆ ನಾವೇ ಮುಂದಾಗಿ ವಿಚಾರವಿನಿಮಯ ಮಾಡಬೇಕೆಂದು ದ. ಆಫ್ರಿಕೆಯ ಅಭಿಪ್ರಾಯವಿದ್ದರೆ ಒಣ ಪ್ರತಿಷ್ಠೆಯನ್ನು ಹಚ್ಚಿಕೊಳ್ಳದೆ ನಾವೇ ಮುಂದೆ ಬರಲು ಸಿದ್ಧರಿದ್ದೇವೆಂದು ತಿಳಿಸಿದರು.

ಸಂರಕ್ಷಣ ವೆಚ್ಚ

ಯುದ್ಧಪೂರ್ವದಲ್ಲಿ ೪೬ ಕೋಟಿ ಇದ್ದ ಹಿಂದೀ ಸೈನ್ಯ ಖಾತೆಯ ವೆಚ್ಚ ಈಗ ೧೮೮ ಕೋಟಿಗೇರಿದ್ದೇಕೆಂದು ಚರ್ಚಿಸಲು ಶ್ರೀ ಪ್ರಕಾಶರು ಮಂಡಿಸಿದ ಕಡಿತಕ್ಕೆ ಉತ್ತರವಾಗಿ ಸಂರಕ್ಷಣ ಮಂತ್ರಿ ಬಲದೇವಸಿಂಗರು ಸೈನ್ಯ ವಿಸರ್ಜನೆಯನ್ನು ಆದಷ್ಟು ಬೇಗ ಮುಗಿಸಿ ಸೈನ್ಯದ ರಾಷ್ಟ್ರೀಕರಣ ಮಾಡಿ ಮಿತವ್ಯಯವನ್ನು ಪ್ರಾರಂಭಿಸಲಾಗುವದೆಂದರು.

ತಾ ೧೭ ಕ್ಕೆ ಸಂರಕ್ಷಣ ಕಾರ್ಯದರ್ಶಿ ಭಾಲಜಾರವರು ಸಂರಕ್ಷಣ ಖಾತೆಯವರು ಯುದ್ಧಕಾಲದಲ್ಲಿ ವಶಪಡಿಸಿಕೊಂಡ ಕಟ್ಟಡಗಳನ್ನು ಇನ್ನೂ ಕೆಲ ಕಾಲ ವಶದಲ್ಲಿಟ್ಟುಕೊಳ್ಳಲು ಅಧಿಕಾರ ಕೇಳುವ ಮಸೂದೆಯನ್ನು ಮುಂದಿಸಿ ಪಾಸು ಮಾಡಿಸಿಕೊಂಡರು.

ಆಹಾರ ಆಯಾತ

ತಾ ೧೮ ಕ್ಕೆ ಆಹಾರ ಕಾರ್ಯದರ್ಶಿ ಪಂಚಾಪಕೇಶಯವರು ಒಂದು ಪ್ರಶ್ನೆಗೆ ಉತ್ತರವಾಗಿ ಹಿಂದುಸ್ತಾನಕ್ಕೆ ವಿದೇಶಗಳಿಂದ ಬಂದ ಆಹಾರದ ವಿವರ ಕೊಟ್ಟರು. ೧೯೪೭ ರ ಮೊದಲ ೩ ತಿಂಗಳಲ್ಲಿ ೧೮೨೦೦೦ ಟನ್ ಗೋದಿ ೨೦೦೦೦ ಟನ್ ಹಿಟ್ಟು ೫೪೭೦೦ ಟನ್ ಗೋವಿನಜೋಳ, ೫೦೦೦ ಟನ್ ಸಣ್ಣ ಧಾನ್ಯ, ೩೩೦೦೦ ಟನ್ ಬಾರ್ಲಿ ೧೮೩೦೦೦ ಟನ್ ಮಿಲೋ ಮತ್ತು ೧೩೦೦೦ ಟನ್ ಅಕ್ಕಿ ಇಷ್ಟು ಪರದೇಶಗಳಿಂದ ಬರಲಿವೆಯೆಂದರು. ೧೯೪೭ ರಲ್ಲಿ ಆಹಾರ ಧಾನ್ಯಗಳಿಗೆ

—ಗಾಣೇ ಪುಟಕ್ಕೆ

ಅಂತರರಾಷ್ಟ್ರೀಯ

ಸಾಮ್ರಾಜ್ಯದ ಕೇಂದ್ರಾಂತರ ?

ಭೂಮಿಯ ಲೋಹಚುಂಬಕ ಧ್ರುವ (magnetic pole) ಕಳೆದ ೪೦ ವರ್ಷಗಳಿಂದ ೨೦೦ ಮೈಲು ಸರಿದಿದೆಯೆಂದು ಭೂಶಾಸ್ತ್ರಜ್ಞರು ಹೇಳುತ್ತಾರೆ. ಆದರೆ ಈ ವಾರ ಬಂದ ಒಂದು ಸುದ್ದಿ ಇದಕ್ಕಿಂತಲೂ ಒಂದು ಹಂತ ಹೆಚ್ಚು ಆಶ್ಚರ್ಯಜನಕವಾಗಿದೆ. ಬ್ರಿಟಿಶ ಸಾಮ್ರಾಜ್ಯದ ಕೇಂದ್ರವನ್ನು ಇಂಗ್ಲಂಡಿನಿಂದ ದಕ್ಷಿಣ ಅಫ್ರಿಕೆಯ ಗೋಂಡಾರಣ್ಯಮಯವಾದ ರೊಡೇಶಿಯಾ ಪ್ರಾಂತಕ್ಕೆ ವರ್ಗಾಯಿಸಬೇಕೆಂದು ಬ್ರಿಟಿಶ ಸರಕಾರ ಗಂಭೀರವಾಗಿ ವಿಚಾರಿಸುತ್ತಿದೆಯಂತೆ ! ಬ್ರಿಟನ್ನು ಮೊದಲಿನಂತೆ ಸುರಕ್ಷಿತವಾಗಿಲ್ಲವಾದುದರಿಂದ ಸಾಮ್ರಾಜ್ಯದ ಔದ್ಯೋಗಿಕ, ವೈಜ್ಞಾನಿಕ ಸಂಪತ್ತನ್ನು ದೂರದ ಸುರಕ್ಷಿತ ಸ್ಥಳದಲ್ಲಿ ಸ್ಥಾಪಿಸಿ ಅಭಿವೃದ್ಧಿಗೊಳಿಸಬೇಕಾಗಿದೆಯಂತೆ. ರೊಡೇಶಿಯಾದ ವಿಸ್ತಾರವಾದ ಅಕ್ಷತ ಪ್ರಕೃತಿ ಸಂಪತ್ತಿ ಸಾಮ್ರಾಜ್ಯದ ನಿಶ್ಶೇಷವಾಗುತ್ತಿರುವ ಸಾಮರ್ಥ್ಯಕ್ಕೆ ಕಾಯಕಲ್ಪವಾಗಬಹುದು. ಬ್ರಿಟಿಶ ರಾಜ-ರಾಣಿಯರ ದಕ್ಷಿಣ ಅಫ್ರಿಕಾ ಪ್ರವಾಸದ ಉದ್ದೇಶಗಳಲ್ಲಿ ಇದೂ ಒಂದಾಗಿರಬಹುದು. ಈ ಉದ್ಯೋಗಕ್ಕೆ ದಕ್ಷಿಣ ಅಫ್ರಿಕೆಯ ಬ್ರಿಟಿಶ ವಿರೋಧಿ ವರ್ಣದ್ವೇಷ ಮತ್ತು ರಾಷ್ಟ್ರೀಯರ ವಿರೋಧ ಬರಬಹುದಾದ್ದರಿಂದ ರಾಜಭಕ್ತಿಯನ್ನು ಪ್ರಚೋದಿಸಲು ಈ ಯಾತ್ರೆಯು ಏರ್ಪಾಡಾಗಿರಬಹುದು.

ಸಾಮ್ರಾಜ್ಯದ ಬದಲಿಸುತ್ತಿರುವ ಕೇಂದ್ರದ ದ್ಯೋತಕವಾಗಿ ಇನ್ನೂ ಕೆಲವು ಸಂಚಾಲನೆಗಳು ನಡೆದಿವೆ.

❋ ಸಾಮ್ರಾಜ್ಯ ಸಂರಕ್ಷಣೆಯ ಕೇಂದ್ರವನ್ನು ಆಸ್ಟ್ರೇಲಿಯಾಕ್ಕೆ ವರ್ಗಾಯಿಸುವ ಪ್ರಯತ್ನ ನಡೆದಿದೆ.

❋ ಸಂರಕ್ಷಣ ವಿಷಯಗಳಲ್ಲಿ ಆಂಗ್ಲೋ—ಅಮೇರಿಕನ್ನರಲ್ಲಿ ಪರಸ್ಪರ ಸಂಬಂಧ ವಿಶೇಷವಾಗಿ ಬೆಳೆಯುತ್ತಿದೆ. ಸಾಮ್ರಾಜ್ಯದ ಅನೇಕ ಆಯಕಟ್ಟಿನ ಸ್ಥಳಗಳಲ್ಲಿ ಈಗಾಗಲೆ ಅಮೇರಿಕನ್ ಯುದ್ಧ ಶಾಖೆಯವರು ಕೋಟೆಕೊತ್ತಲು ಕಟ್ಟುತ್ತಿದ್ದಾರೆ.

❋ ಹಿಂದುಸ್ತಾನವನ್ನು ಬ್ರಿಟಿಶ ಸಾಮ್ರಾಜ್ಯದಲ್ಲಿ ಉಳಿಸಿಕೊಳ್ಳುವ ಪ್ರಯತ್ನವನ್ನು ಬ್ರಿಟಿಶರ ಬದಲು ಆಸ್ಟ್ರೇಲಿಯನ್ ಮುಖ್ಯ ಮಂತ್ರಿ ಇವಾಟರು ನಡೆಸಿದ್ದಾರೆ. ಈ ಭಾಗದಲ್ಲಿ ಈಗಾಗಲೆ ಪಂ. ನೆಹರೂ ಅವರೊಡನೆ ಮಾತುಕತೆ ಪ್ರಾರಂಭವಾಗಿದೆಯೆಂದೊಪ್ಪಿಕೊಳ್ಳಲಾಗಿದೆ.

ದುರ್ದೈವಿ ಬ್ರಿಟನ್

ಕಡಲ ರಾಣಿ ಬ್ರಿಟೇನಿಯಾಳ ಮೇಲೆ ಪ್ರಕೃತಿಯ ಕೋಪಉರಿದೆದ್ದಿದೆಯೆಂದು ಕಾಣುತ್ತದೆ ನೀರು ಹೆಪ್ಪುಗಟ್ಟುವ ಚಳಿಯಿಂದ, ರಾಶಿಬಿದ್ದ ಹಿಮದಿಂದ ಕಲ್ಲಿದ್ದಲಿ ಬಿಕ್ಕಟ್ಟು ಹುಟ್ಟಿ ಅರ್ಧ ಇಂಗ್ಲಂಡು ಅಂಧಂತಮುಸ್ಸಿನಲ್ಲಿ ಮುಳುಗಿದ್ದು ಇನ್ನೂ ಪೂರ್ತಿ ಚೇತರಿಸಿಕೊಳ್ಳುವ ಮೊದಲೇ ಕಳೆದವಾರ

❋ ರಾಶಿ ಬಿದ್ದ ಹಿಮ ಕರಗಿ ಹೊಳೆಗಳಿಗೆಲ್ಲ ಮಹಾಪೂರ ಬಂದು, ರೇಲು ದಾರಿಗಳು ಮುಳುಗಿ ಪುನಃ ಅರ್ಧ ಇಂಗ್ಲಂಡಿನ ಸಂಬಂಧ ತಪ್ಪಿ ಹೋಯಿತು.

❋ ಅದು ಸಮಾಧಾನಗೊಳ್ಳುವ ಮೊದಲೇ ಅಟ್ಲಾಂಟಿಕ ಸಾಗರದಲ್ಲಿ ಹುಟ್ಟಿದ ಬಿರುಗಾಳಿಯೊಂದು ತಾಸಿಗೆ ೯೮ ಮೈಲು ವೇಗದಿಂದ ಬೀಸುತ್ತ ಗಿಡಗಳನ್ನು ಕೆಡಹಿತು, ತಂತಿ ಕಂಬಗಳನ್ನು ಹಾರಿಸಿತು, ಮನೆಗಳನ್ನು ಉರುಳಿಸಿ ಚಪ್ಪರಗಳನ್ನು ಎತ್ತಿ ಒಗೆಯಿತು. ಅನೇಕರು ಪ್ರಾಣವಿತ್ತಗಳನ್ನು ಕಳೆದುಕೊಂಡರು.

❋ ಬಿರುಗಾಳಿಯಿಂದ ಥೇಮ್ಸ ನದಿಯ ನೀರು ಉಕ್ಕೇರಿ ಬರತೊಡಗಿದೆ. ಕಳೆದ ನೂರು ವರ್ಷಗಳಲ್ಲಿ ಎಂದೂ ಏರದ ಮಟ್ಟಕ್ಕೆ ನೀರು ಬಂದಿದೆ ಹಗಲಿರುಳು ಈ ನೀರನ್ನು ಮೊಗೆದು ಹೊರಚೆಲ್ಲಲು ಸಾವಿರಾರು ಜನರು ದುಡಿಯುತ್ತಿದ್ದಾರೆ.

ಈ ವಿಷನ್ನ ಪರಿಸ್ಥಿತಿಯಲ್ಲಿ ಮುಖ್ಯ ಮಂತ್ರಿ ಕ್ಲೆಮೆಂಟ ಅಟ್ಲಿಯವರು ರಾಷ್ಟ್ರಕ್ಕೆ ಆಕಾಶವಾಣಿ ಭಾಷಣ ಮಾಡಿ ಬ್ರಿಟಿಶ ಧೀರತೆಯನ್ನು ಉತ್ತೇಜನಗೊಳಿಸುತ್ತ, "ಉಳಿಯಬೇಕಾದರೆ ದುಡಿಯಿರಿ" ಎಂದು ಸಂದೇಶವಿತ್ತರು. "ಇಂಗ್ಲಂಡಿನ ಕತೆ ಮುಗಿಯಿತೆಂದು ಅನೇಕರು ಹೇಳುತ್ತಾರೆ. ಹಿಂದೆಷ್ಟೊ ಸಲ ಮಾಡಿದಂತೆ ಈ ಬಾರಿಯೂ ಅದನ್ನು ಸುಳ್ಳು ಮಾಡೋಣ."

ರಾಜಕೀಯ ತಂಟೆ

ಶಾಂತಿಯಿಂದ ಸಾಮ್ಯವಾದ ಸ್ಥಾಪಿಸುವ ಹಣತೊಟ್ಟು ಅಧಿಕಾರಕ್ಕೆ ಬಂದ ಪ್ರಥಮ ಕೂಲಿಕಾರ ಸರಕಾರದ ಮೇಲೆ ಬಂದ ಈ ಪ್ರಕೃತಿ ಕೋಪದ ಪರಿಣಾಮವಾಗಿ ರಾಷ್ಟ್ರದ ಶಕ್ತಿಯನ್ನೆಲ್ಲ ಒಂದುಗೂಡಿಸಿ ಹೋರಾಡಬೇಕೆಂದು ಕಾನ್ಸರ್ವೇಟಿವರ ನೆಚ್ಚಿನ ಗೋಂಡ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸುವ ಸೂಚನೆಗಳು ಪುನಃ ಬರತೊಡಗಿವೆ. ಈ ಸಂಧಿಯಲ್ಲಿ ಅಧ್ಯಕ್ಷ ಟ್ರೂಮನ್ನರು ಮಾಡಿದ ಭಾಷಣಕ್ಕೆ ಬ್ರಿಟಿಶ ಸರಕಾರ ಮೆಚ್ಚಿಕೊಂಡ್ಡಿದೆಯೆಂದು ಪಾರ್ಲಮೆಂಟಿನ ಪ್ರಶ್ನೋತ್ತರಗಳಿಂದ ತಿಳಿದು ಬಂದರೂ ಅದರ ಪರಿಣಾಮ ಕೂಲಿಕಾರ ಪಾರ್ಲಮೆಂಟ ಸದಸ್ಯರ ಮೇಲೆ ಅಷ್ಟು ಒಳಿತಾಗಿಲ್ಲವೆಂದು ತೋರುತ್ತದೆ. ಬೆವಿನ್ನರ ವಿದೇಶ ಧೋರಣೆಯ ವಿರುದ್ಧ ದಂಗೆಯೆದ್ದ "ಬಂಡುಗಾರ" ಸದಸ್ಯರಲ್ಲನೇಕರು ಗ್ರೀಕ, ತುರ್ಕಿಗಳಿಗೆ ಟ್ರೂಮನ್ನರು ಕೊಡಬೇಕೆನ್ನುವ ಸಹಾಯವನ್ನು "ಆಗ್ನೇಯ ಯುರೋಪಿನ ಮೇಲೆ ದಾಳಿ" ಯೆಂದೇ ಬಹಿರಂಗವಾಗಿ ಕರೆದರು. ಯುಕ್ತ ರಾಷ್ಟ್ರ ಸಂಸ್ಥೆಯನ್ನು ಧಿಕ್ಕರಿಸಿ ತನ್ನ ಮನಬಂದಂತೆ ಟ್ರೂಮನ್ನರು ರಶಿಯಾದ ವಿರುದ್ಧ ಕ್ರಮವ್ಕೆ ತೆಗೆದುಕೊಳ್ಳುತ್ತಿರುವದರಿಂದ ಆ ಸಂಸ್ಥೆಯ ಗೌರವ ರಕ್ಷಣೆಗೆ ಬ್ರಿಟಿಶ ಸರಕಾರ ಏನುಮಾಡುವದೆಂದೂ ಕೇಳಲಾಯಿತು. ಈ ಉಗ್ರ ಪಕ್ಷದ ಸದಸ್ಯರು ರಾಷ್ಟ್ರೀಯ ಸರಕಾರ ಸ್ಥಾಪನೆಗೂ ಪ್ರಚಂಡ ವಿರೋಧವೊಡ್ಡುವದರಲ್ಲಿ ಸಂದೇಹವಿಲ್ಲ.

ಫ್ರೆಂಚ ಶಾಸನ ಸಭೆಯಲ್ಲಿ ಕುಸ್ತಿ

ಫ್ರೆಂಚ ಶಾಸನ ಸಭೆಯಲ್ಲಿ ಕಳೆದವಾರ ಕಮ್ಯುನಿಸ್ಟ ಸದಸ್ಯರಿಗೂ ರ‍್ಯಾಡಿಕಲ್ ಸದಸ್ಯರಿಗೂ ಆದ ಜಟಾಪಟಿ ಮುಷ್ಟಾಮುಷ್ಟಿಯಲ್ಲಿ ಪರ್ಯವಸಾನ ಹೊಂದಿದ್ದರಿಂದ ಅಧ್ಯಕ್ಷರು ಸಭೆಯನ್ನು ಒಮ್ಮೆ ಮುಂದೆ ಹಾಕಬೇಕಾಯಿತು. ಇನ್ನೊಮ್ಮೆ ಸದಸ್ಯರನ್ನು ಬಹಳ ಪರಿಶ್ರಮದಿಂದ ಸಮಾಧಾನಗೊಳಿಸಬೇಕಾದರೆ ಗಂಟಲಿಗೆ ಬಂತು.

ಇಂಡೋಚೀನದ ಚರ್ಚೆ ನಡೆದಿತ್ತು. ಕಮ್ಯುನಿಸ್ಟರು ಇಂಡೋಚೀನದ ಸ್ವಾತಂತ್ರ್ಯ ಚಳವಳಿಗಾರರಿಗೆ ಬೆಂಬಲವಿತ್ತರು. ರ‍್ಯಾಡಿಕಲ್ಲರೂ ಡಿಗಾಲೆಯ ಎಂ. ಆರ್. ಪಿ. ಪಕ್ಷದವರೂ ಕಮ್ಯುನಿಸ್ಟರನ್ನು ದೇಶದ್ರೋಹಿಗಳೆಂದರು. ಕಮ್ಯುನಿಸ್ಟ ಸದಸ್ಯೆಯೊಬ್ಬಳು ಬೈವರ ಕೆನ್ನೆಗೊಂದೇಟು ಬಿಗಿದಳು. ಕೈಗೆಕೈಹತ್ತಿ ಸಾಮಾನ್ಯ ಜಂಗೀ ಕುಸ್ತಿ ಆರಂಭವಾದ್ದರಿಂದ ಅಧ್ಯಕ್ಷರು ಸಭೆಯನ್ನು ನಿಲ್ಲಿಸಿದರು.

ಮರುದಿನ ಇನ್ನೊಬ್ಬ ಸದಸ್ಯರು ಇಂಡೋಚೀನದ ಅಧ್ಯಕ್ಷ ಹೋ-ಚಿ-ಮಿನ್ನರಿಗೆ ಸೋವಿಯೆಟ್ ರಶಿಯಾದ ಸಹಾಯವಿದೆಯೆಂದಾರೋಪಿಸಿದರು. ಅದರ ಪರಿಣಾಮವಾಗಿ ಎದ್ದ ವಾದದಲ್ಲಿ ಕಮ್ಯುನಿಸ್ಟ ಸದಸ್ಯರೂ ಮಂತ್ರಿಗಳೂ ಸಭೆಯಿಂದೆದ್ದು ಹೋದರು.

❋ ಇಂಡೋಚೀನದ ವೇಟನಾಮ ರಾಜ್ಯಕ್ಕೆ ಸ್ವಾಯತ್ತತೆ ಕೊಡುವದಾಗಿ ಇನ್ನೂ ಮುಖ್ಯ ಮಂತ್ರಿ ರಾಮಡೀರರು ಹೇಳುತ್ತಿದ್ದರೂ ಈಗ ಸ್ಥಾಪಿತವಾಗಿರುವ ಇಂಡೋಚೀನಿ ಸರಕಾರದೊಡನೆ ಮಾತುಕತೆ ನಡೆಸಲು ಅವರಿಗೆ ಮನಸಿಲ್ಲ.

❋ ಡಾ. ಹೋಚಿ ಮಿನ್ನರು ಫ್ರೆಂಚ ಮುಖ್ಯ ಮಂತ್ರಿಗೂ ತಮಗೂ ಇರುವ ಮತಭೇದ ಅತ್ಯಲ್ಪವಾದ್ದರಿಂದ ಈ ರಕ್ತಪಾತವನ್ನು ನಿಲ್ಲಿಸಿ ಸಂಧಾನ ನಡೆಸಬೇಕೆಂದು ಸಂದೇಶ ಕಳಿಸಿದ್ದರೂ ಅದನ್ನು ಅಲಕ್ಷಿಸಲಾಗಿದೆ.

❋ ಈ ವಿಷಯದಲ್ಲಿ ಕಮ್ಯುನಿಸ್ಟರಿಗೂ ಸಾಮ್ಯವಾದಿ ಮುಖ್ಯ ಮಂತ್ರಿಗೂ ಒದಗಿದ ಮತಭೇದದ ಫಲವಾಗಿ ಕಮ್ಯುನಿಸ್ಟರು ಸರಕಾರದಿಂದ ಹೊರಬಿದ್ದು ಹೋಗಬಹುದೆಂದು ಸಂಶಯ ಪಡಲಾಗಿದೆ.

❋ ಇಂಗ್ಲಂಡಿನೊಡನೆ ೫೦ವರ್ಷದ ಒಪ್ಪಂದ ಮಾಡಿಕೊಳ್ಳುವದೂ ಕಮ್ಯುನಿಸ್ಟರಿಗೆ ಮನಸಿಲ್ಲ. ಅವರು ಹೊರಬಿದ್ದು ಹೋದರೆ, ಅವರಿಗೆ ಸಂಪೂರ್ಣ ವಶವರ್ತಿಗಳಾಗಿರುವ ಕೂಲಿಕಾರರನ್ನು ಸಂತುಷ್ಟರಾಗಿಡುವದು ಸರಕಾರಕ್ಕೆ ಕಠಿನ ಹೋದೀತು.

❋ ಅಧ್ಯಕ್ಷ ಟ್ರೂಮನ್ನರ ಹೇಳಿಕೆಯೂ ಫ್ರೆಂಚ ಐಕ್ಯಕ್ಕೆ ಅನುಕೂಲವಾಗಿಲ್ಲ. ಫ್ರೆಂಚ ಕಮ್ಯುನಿಸ್ಟರು ಟ್ರೂಮನ್ನರ ಕಮ್ಯುನಿಸ್ಟ ವೈರಿ ಧೋರಣವನ್ನು ಸುಮ್ಮನೆ ಸಹಿಸಲಾರರು.

ವಿದೇಶ ಮಂತ್ರಿಗಳ ಸಭೆ

ಮಾರ್ಚ ೧೦ ರಿಂದ ಮಾಸ್ಕೋದಲ್ಲಿ ನಡೆಯುತ್ತಿರುವ ಚತುರ್‍ರಾಷ್ಟ್ರ ವಿದೇಶಿ ಮಂತ್ರಿಗಳ ಸಭೆ ಇನ್ನೂ ಪರಸ್ಪರ ನಿಂದೆಯ ಪ್ರಸ್ತಾವನಾಂಕವನ್ನು ದಾಟಿ ಹೋಗಿಲ್ಲ. ಕಳೆದ ವಾರ ವರದಿ ಮಾಡಿದಂತೆ, ಪ್ರಶಿಯಾದ ನಿರ್ನಾಮದ ನಿರ್ಣಯವೊಂದು ಹೊರತು ಮತ್ತೆ ನಡೆದುದೆಲ್ಲ ಹೊಟ್ಟೆಯ ಪಿತ್ತವನ್ನು ಹೊರಚೆಲ್ಲುವದೊಂದೆ.

❋ ಶಾಂತಸಾಗರ ಸೀಮೆಯಲ್ಲಿ ಆಂಗ್ಲೋ ಅಮೇರಿಕನ್ನರು ನಡೆಸುತ್ತಿರುವ ಸಂರಕ್ಷಣೋದ್ಯೋಗಗಳಿಂದಲೂ ಚೀನದಲ್ಲಿ ಕಮ್ಯುನಿಸ್ಟರಿಗೆದುರಾಗುತ್ತಿರುವ ಸೋಲಿನಿಂದಲೂ ಚಿಂತಿತರಾಗಿ ಚಿಯಾಂಗ ಕೈಶೇಕರಿಗೆ ಅಮೇರಿಕೆಯಿಂದ ದೊರಕುವ ಸಹಾಯಕ್ಕೆ ಅಡ್ಡಗಾಲು ಹಾಕುವ ಉದ್ದೇಶದಿಂದ ರಶಿಯನ್ ವಿದೇಶಮಂತ್ರಿ ಮೊಲಟೋವರು ಚೀನದ ಸಮಸ್ಯೆಯನ್ನು ವಿದೇಶ ಮಂತ್ರಿ ಸಭೆಯಲ್ಲಿ ಚರ್ಚಿಸಬೇಕೆಂದು ಸೂಚಿಸಿದರು. ಅಮೇರಿಕನ್ ವಿದೇಶ ಮಂತ್ರಿ ಜಾರ್ಜ ಮಾರ್ಶಲ್ಲರು ಮೊದಲು ಇದರ "ತತ್ವ" ವನ್ನು ಒಪ್ಪಿದರು. ಆದರೆ ಚೀನಿ ಸರಕಾರ ಚೀನದ ಅಂತರಿಕ ಪ್ರಶ್ನೆಯನ್ನು ವಿದೇಶ ಮಂತ್ರಿಗಳ ಸಭೆಯಲ್ಲಿ ಚರ್ಚಿಸುವದನ್ನು ಬಲವಾಗಿ ವಿರೋಧಿಸಿತು. ಚೀನದಲ್ಲೆಲ್ಲ ಈ ಸೂಚನೆಯನ್ನು ಪ್ರತಿಭಟಿಸುವ ಪ್ರದರ್ಶನಗಳಾದವು. ಆಂಗ್ಲೋ-ಅಮೇರಿಕನ್ನರಿಗೆ ಮಲಗಿದಲ್ಲಿ ಹಾಸಿಗೆ ಹಾಕಿಕೊಟ್ಟಂತಾಯಿತು. ಅವರು ಈ ವಿಷಯವನ್ನು ಚರ್ಚಿಸಲು ನಿರಾಕರಿಸಿ ತಮ್ಮ ಗೆಳೆಯ ಚಿಯಾಂಗರ "ಅಂತರಿಕ" ಹುಳುಕು ಬೆಳಕಿಗೆ ಬರದಂತೆ ಮಾಡಿದರು. ಈ ವಿಷಯದಲ್ಲಿ ಚತುರ್‍ರಾಷ್ಟ್ರಗಳಲ್ಲಿ ಪತ್ರವ್ಯವಹಾರ ಮಾತ್ರ ನಡೆಯುವದು.

❋ ಮೊಲಟೋವರು ಆಂಗ್ಲೋ-ಅಮೇರಿಕನ್ ಭಾಗದ ಜರ್ಮನಿಯಲ್ಲಿ "ನಿರ್ನಾಜೀಕರಣ" ಕಾರ್ಯಕ್ರಮ ಸರಿಯಾಗಿ ನಡೆದಿಲ್ಲವೆಂದು ಆರೋಪಿಸಿದರು. ಬೆವಿನ್ನರು ರಶಿಯನ್ ವಿಭಾಗದಲ್ಲಿ ಪ್ರಮುಖರಾದ ೪೦ ನಾಜಿಗಳು ದೊಡ್ಡ ಹುದ್ದೆಗಳಲ್ಲಿರುವರೆಂದು ಪ್ರತ್ಯಾರೋಪಿಸಿದರು.

❋ ಪಾಟ್ಸಡ್ಯಾಂ ಕರಾರಿನಂತೆ ಜರ್ಮನಿಯ ಆರ್ಥಿಕ ಐಕ್ಯವನ್ನು ಸಾಧಿಸದಂತಾಗಲು ರಶಿಯನ್ನರೇ ಕಾರಣರೆಂದು ಆಂಗ್ಲೋ ಅಮೇರಿಕನ್ನರು ದೂರಿದರು. ಆಂಗ್ಲೋ—ಅಮೇರಿಕನ್ ವಿಭಾಗಗಳನ್ನು ಒಂದುಗೂಡಿಸಿದ್ದೂ ಫ್ರೆಂಚರು ತಮ್ಮ ಆಕ್ರಮಣ ವಿಭಾಗವನ್ನು (ಸಾರ್) ಜರ್ಮನಿಯಿಂದ ಬೇರ್ಪಡಿಸಿದ್ದೂ ರೂಹ್ರದ ಕಲ್ಲಿದ್ದಲಿ ಮತ್ತು ಉಕ್ಕಿನ ಉದ್ಯೋಗವನ್ನು ಬ್ರಿಟಿಶರು ಸೆಳೆದುಕೊಂಡದ್ದೂ ಪಾಟ್ಸಡ್ಯಾಂ ಕರಾರಿಗೆ ವಿರುದ್ಧವಾಗಿದ್ದು ಅವನ್ನೆಲ್ಲ ರದ್ದುಗೊಳಿಸಬೇಕೆಂದು ಮೊಲಟೋವರು ಕೇಳಿದರು. ಜರ್ಮನಿಯ ಪಶ್ಚಿಮ ಗಡಿಯ ನಿರ್ಣಯವಾದ ಹೊರತು ತಾವು ಆರ್ಥಿಕ ಐಕ್ಯಕ್ಕೊಪ್ಪುವದಿಲ್ಲೆಂದರು ಫ್ರೆಂಚ ವಿದೇಶ ಮಂತ್ರಿ ಬಿಡಾಲರು. ತಮಗೆ ಬರಬೇಕಾದ ೨೫ ಲಕ್ಷ ಡಾಲರ ಪರಿಹಾರಧನ ಬಂದಿಲ್ಲವೆಂದು ಮೊಲಟೋವರು ದೂರಿದರು. ತಮ್ಮ ರಾಷ್ಟ್ರಗಳು ಜರ್ಮನಿಯ ಹೊಟ್ಟೆ ಹೊರೆದು ರಶಿಯಾಕ್ಕೆ ಪರಿಹಾರ ಕೊಡಲಾರವೆಂದರು ಬೆವಿನ್, ಮಾರ್ಶಲ್ಲರು. ಜರ್ಮನಿಯ ಔದ್ಯೋಗಿಕ ಮಟ್ಟವನ್ನು ಏರಿಸದೆ ಪರಿಹಾರ ಕೊಡುವದಸಾಧ್ಯವೆಂದು ಅವರು ಸಾರಿದರು.

❋ ರಶಿಯನ್ನರು ಜರ್ಮನ್ ಕಾರಖಾನೆಗಳ ನ್ನೊಯ್ಯುತ್ತಿದ್ದುದು, ಜರ್ಮನ್ ಹಡಗುಪಡೆಯನ್ನು ನಾಶಗೊಳಿಸದಿರುವದು ಇತ್ಯಾದಿಗಳೂ ಹೊರಬಂದವು.

❋ ಈ ನಡುವೆ ಹಂಗೆರಿಯಲ್ಲಿ ಚಿಲ್ಲರೆ ಜಮೀನ್ದಾರ ಪಕ್ಷದ ಕಾರ್ಯದರ್ಶಿಯನ್ನು ರಶಿಯನ್ ಆಕ್ರಮಣ ಸೇನೆಯವರು ಆಕ್ರಮಿಸಿದ್ದು ಲಂಡನ ವಾಶಿಂಗಟನ್—ಮಾಸ್ಕೋಗಳ ನಡುವೆ ತೀಕ್ಷ್ಣ ಪತ್ರವ್ಯವಹಾರದ ವಸ್ತುವಾಗಿದೆ. ಇಬ್ಬರೂ ಪರಸ್ಪರರನ್ನು ಹಂಗರಿಯ ಅಂತರಿಕ ವಿಷಯಗಳಲ್ಲಿ ಕೈಹಾಕುವರೆಂದು ಆರೋಪಿಸುತ್ತಿದ್ದಾರೆ.

ಒಳಗೆ ನಡೆದಿದೆ ಪ್ರಬಲ ರಾಷ್ಟ್ರಗಳ ತಿಕ್ಕಾಟ.

ಪಾಲಿಸ್ತಾನದಲ್ಲಿ ದಂಡಿನ ಕಾಯದೆ

ಬ್ರಿಟಿಶ ಸೈನಿಕರು ಇಳಿದುಕೊಂಡಿದ್ದ ಹಾಟೆಲೊಂದನ್ನು ಮದ್ದುಗುಂಡಿನ ಮೂಲಕ ಯಹೂದ್ಯರು ಹಾರಿಸಿಬಿಟ್ಟದ್ದರಿಂದಾದ ಪ್ರಾಣಹಾನಿಯಿಂದ ಉದ್ರಿಕ್ತರಾಗಿ ಬ್ರಿಟಿಶರು ಪಾಲಿಸ್ತಾನದ ಯಹೂದ್ಯ ವಿಭಾಗದಲ್ಲಿ ದಂಡಿನ ಕಾಯದೆಯನ್ನು ಸಾರಿ ಈಗ ಮೂರು ವಾರಗಳಾದವು. ಆದರೆ ಇನ್ನೂ ಯಹೂದ್ಯ ಕ್ರಾಂತಿಕಾರರ ಅತ್ಯಾಚಾರ ಸಾಗುತ್ತಲೇ ಇದೆ. ಅವರ ಈಚೆಗಿನ ಸಾಹಸಗಳಲ್ಲಿ ಬ್ರಿಟಿಶ ಮಿಲಿಟರಿ ಶಿಬಿರದಲ್ಲಿ ನುಗ್ಗಿ ಒಬ್ಬ ಸೈನಿಕನನ್ನು ಕೊಂದದ್ದೂ ಬ್ರಿಟಿಶರಿಗೆ ಕೆಲ ಕ್ರಾಂತಿಕಾರರ ಗುಟ್ಟುಗಳನ್ನು ಅರುಹಿ ಅವರ ಬಂಧನಕ್ಕೆ ಕಾರಣನಾದ ಒಬ್ಬ ಯಹೂದ್ಯ ಯುವಕನನ್ನು ಅಪಹರಿಸಿ ಗಲ್ಲಿಗೆ ಹಾಕಿದ್ದೂ ಸೇರಿವೆ. "ಬಂಧಿಸಲ್ಪಟ್ಟ ನಮ್ಮ ಬಂಧುಗಳ ಗತಿ ಹೀಗೆಯೆ ಆಗುವದೆಂದು ನಮಗೆ ಗೊತ್ತು. ಆದಕ್ಕಾಗಿ ದ್ರೋಹ ಬಗೆದ ಯಹೂದ್ಯಂಗೆ ಉದಾಹರಣೆಯಾಗಲೆಂದು ಈ ಯುವಕನನ್ನು ಗಲ್ಲಿಗೇರಿಸಿದ್ದೇವೆ. ಎಂದವರು ಪ್ರಸಿದ್ಧಗೊಳಿಸಿದ್ದಾರೆ. ಆದರೂ ಅನೇಕ ಕ್ರಾಂತಿಕಾರರು ಸಿಕ್ಕಿಬಿದ್ದಿರುವದರಿಂದ ಬೇಗನೆ ದಂಡಿನ ಕಾಯದೆಯನ್ನು ಹಿಂತೆಗೆದುಕೊಳ್ಳಬಹುದೆಂದು ನಂಬಲಾಗಿದೆ.

ಪಾಲಿಸ್ತಾನ ಪ್ರಶ್ನೆ ಯುಕ್ತರಾಷ್ಟ್ರ ಸಂಸ್ಥೆಯ ಮುಂದೆ ಬರುವ ದಿನ ಹತ್ತಿರಬಂದತೆ ಅಮೇರಿಕೆಯಲ್ಲಿ ಯಹೂದ್ಯರ ಪ್ರಚಾರ ಭರದಿಂದ ಸಾಗುತ್ತಿದೆ, ಆದರೆ ಅರಬರಿಗೆ ತಮ್ಮ ಪಕ್ಷದ ಸಮರ್ಥನೆಯ ಅವಕಾಶವಿಲ್ಲ. ಬದಲಿಗೆ ಅವರ ಸಂಸ್ಥೆಗೆ ಇಲ್ಲದ ತೊಂದರೆ ಕೊಡಲಾಗುತ್ತಿದೆ. ಅರಬ ಸಂಸ್ಥೆಯ ಕಾರ್ಯಾಲಯವನ್ನು ಅಮೇರಿಕನ್ ಅಧಿಕಾರಿಗಳು ಝಡತಿ ಮಾಡಿದ್ದರಿಂದ ಅರಬರಾಷ್ಟ್ರಗಳು ಪ್ರತಿಭಟಿಸಿವೆ.

ತುಣುಕುಗಳು

ನೋಬೆಲ ಶಾಂತಿ ಪಾರಿತೋಷಕ್ಕೆ ಈ ಬಾರಿ ಸೂಚಿಸಲ್ಪಟ್ಟ ಹೆಸರುಗಳಲ್ಲಿ ಮಹಾತ್ಮಾ ಗಾಂಧಿಯವರದೂ ಇದೆಯೆಂದು ನೋಬೆಲ ಪಾರಿತೋಷಕ ಸಮಿತಿ ಪ್ರಸಿದ್ಧಿಸಿದೆ.

* * *

ಪರಾಗುವೆಯಲ್ಲಿ (ದ. ಅಮೇರಿಕೆ) ಈಗ ಅನೇಕ ವರ್ಷಗಳಿಂದ ಸರ್ವಾಧಿಕಾರಿಯಾಗಿ ಮೆರೆಯುತ್ತಿದ್ದ ಮಾರ್ನಿಗೋನ ಸರಕಾರದ ವಿರುದ್ಧ ರೋಮೆಲ್ಲನೆಂಬ ಸೇನಾ ನಾಯಕನು ದಂಗೆಯೆದ್ದಿದ್ದಾನೆ. ಅವನಿಗೆ ಸಾಕಷ್ಟು ವಿಜಯ ಸಿಕ್ಕಿವೆಯೆಂದು ತಿಳಿಯುತ್ತದೆ. ಪ್ರಜಾತಂತ್ರಾತ್ಮಕ ಘಟನಾತ್ಮಕ ಆಡಳಿತೆಯನ್ನು ಸ್ಥಾಪಿಸುವ ಸಲುವಾಗಿ ಘಟನಾ ಸಮಿತಿಯನ್ನು ಕರೆಯುವದು ಅವನ ಧ್ಯೇಯಗಳಲ್ಲೊಂದು ಈಗ ಮಾರ್ನಿಗೋನೂ ದಂಗೆ ನಿಂತಾಕ್ಷಣ ಘಟನಾ ಸಮಿತಿ ಕರೆಯುವೆನೆಂದು ಆಶ್ವಾಸನ ಕೊಟ್ಟಿದ್ದಾನೆ.

ಜೀವನ ಮತ್ತು ವಿಜ್ಞಾನ

ಜೇನುತುಪ್ಪ

ವಿಜ್ಞಾನಿಗಳು ಹಾಗೂ ಆಹಾರ ತಜ್ಞರು ಇತ್ತೀಚೆಗೆ ಜೇನುತುಪ್ಪದ ಅನೇಕ ಹೊಸ ಉಪಯೋಗಗಳನ್ನು ಕಂಡುಹಿಡಿದು ಮನುಷ್ಯನ ಆರೋಗ್ಯವನ್ನು ಕಾಪಾಡುವುದಕ್ಕೆ ಬಾಲ್ಯದಿಂದ ಮೊದಲುಗೊಂಡು ವೃದ್ಧಾಪ್ಯದವರೆಗೂ ಇದರ ಉಪಯೋಗವು ಅವಶ್ಯಕವೆಂದು ಪ್ರಯೋಗಗಳಿಂದ ಸಿದ್ಧಿಸಿ ತೋರಿಸಿದ್ದಾರೆ.

ಜೇನು ತುಪ್ಪವು, ಎಲ್ಲ ಸಾದಾ ತರದ ಸಕ್ಕರೆಗಳ ಒಂದು ಮಿಶ್ರಣವಾಗಿದೆ. ಅಮೇರಿಕೆಯ ಪ್ರೊ. ಎಚ್. ಎ. ಶುಟಿ (Prof. H. A. Schuette) ಎಂಬವರು ಇದರ ವಿಷಯಕ್ಕೆ ಸಂಶೋಧನೆ ನಡೆಯಿಸಿ, ಇದರಲ್ಲಿ, ತಾಮ್ರ (Copper), ಕಬ್ಬಿಣ (Iron), ಮೆಂಗನೀಜ್ (Manganese) ಮತ್ತು ಅನೇಕ ಪೋಷಕ ವಸ್ತುಗಳು (Nutritive Minerals) ಕೂಡಿಕೊಂಡಿವೆಯೆಂದು ತೋರಿಸಿಕೊಟ್ಟಿದ್ದಾರೆ. ಕಬ್ಬಿಣ ಒಂದನ್ನು ಬಿಟ್ಟು ಉಳಿದೆಲ್ಲ ವಸ್ತುಗಳು ಎಲುವುಗಳ ಬೆಳವಣಿಗೆಯಲ್ಲಿಯೂ ಕಬ್ಬಿಣವು 'ಹೇಮೊಗ್ಲೋಬಿನ್' (Hoemoglobin)ದ ತಯಾರಿಯಲ್ಲಿಯೂ ಉಪಯೋಗವಾಗುತ್ತವೆ.

ಜೇನು ತುಪ್ಪವನ್ನು ಅನೇಕ ಔಷಧಗಳಲ್ಲಿ ಉಪಯೋಗಿಸುವುದಲ್ಲದೆ, ಶಸ್ತ್ರವೈದ್ಯದ ವಸ್ತುಗಳಲ್ಲಿಯೂ ಸುಟ್ಟಗಾಯವನ್ನು ಮಾಯಿಸುವುದರಲ್ಲಿಯೂ ಫೇಸ್‌ಕ್ರೀಮ್ಸಿನ (Face creams) ತಯಾರಿಯಲ್ಲಿಯೂ ಮತ್ತು ಪಚನ ಶಕ್ತಿಯನ್ನು ಹೆಚ್ಚಿಸಿ ಅಶಕ್ತತೆಯನ್ನು ದೂರು ಮಾಡುವುದರಲ್ಲಿಯೂ ಉಪಯೋಗಿಸುತ್ತಾರೆ. ಇದಲ್ಲದೆ, ಹಾಲು ಮತ್ತು ಜೇನು ತುಪ್ಪದಿಂದ ಕೂಡಿದ ಮಿಶ್ರಣವು, ಆರೋಗ್ಯ ದೃಷ್ಟಿಯಿಂದ ಹೆಚ್ಚು ಲಾಭದಾಯಕವಾಗಿದ್ದು, ಗಂಟಲ ಬೇನೆ (Husky throat) ಹಾಗೂ ಹಂಗಾಮಿ ಜ್ವರವನ್ನು ಕಡಿಮೆ ಮಾಡುವುದರಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಕಂಡುಬಂದಿದೆ.

ಒಟ್ಟಿನಲ್ಲಿ ಹೇಳುವದಾದರೆ, ಜೇನುತುಪ್ಪವು

೧ ಒಂದು ಹಗುರಾದ ಆಹಾರವಾಗಿದೆ.

೨ ಬೇಗನೆ ಜೀರ್ಣವಾಗುತ್ತದೆ.

೩ ಅತಿಬೇಗನೆ ಶಕ್ತಿಯ ರೂಪದಲ್ಲಿ ಪರಿವರ್ತನೆಯಾಗುತ್ತದೆ.

೪ ಕೊನೆಯದಾಗಿ ಇದೊಂದು ಉತ್ತಮ ತರದ ಭೇದಿಯ ಔಷಧವಾಗಿದೆ.

ಡಿ. ಡಿ. ಟಿ. D. D. T.

ಎಲ್ಲಕ್ಕೂ ಮೊದಲು ಡಿ, ಡಿ. ಟಿ. ಯು ೭೦ ವರ್ಷಗಳ ಪೂರ್ವದಲ್ಲಿ ಜರ್ಮನಿಯ ಒಬ್ಬ ರಸಾಯನ ಶಾಸ್ತ್ರಜ್ಞನಿಂದ ಸ್ಟ್ರಾಸ್‌ಬರ್ಗ್ (Stras bourg)ದಲ್ಲಿ ತಯಾರಿಸಲ್ಪಟ್ಟಿತು. ನಂತರ ೧೯೩೯ ರಲ್ಲಿ ಪಾಲ್ ಮುಲರ್ (Paul mueller) ಎಂಬ ವೈಜ್ಞಾನಿಕನು ಇದರಲ್ಲಿ ಕ್ರಿಮಿ ಕೀಟಕಗಳನ್ನು ನಾಶಮಾಡತಕ್ಕ ಗುಣಗಳಿವೆಂದು ಕಂಡು ಹಿಡಿದನು.

ಇದರ ರಾಸಾಯನಿಕ ಹೆಸರು 'ಡಾಯಕ್ಲೋರೋ-ಡಾಯಿಫಿನಿಲ್—ಟ್ರಾಯಿ ಕ್ಲೋರೋ ಈಥೇನ್' (Dichloro-—diphenyl—trichloro Ethane) ಇದನ್ನು ತಯಾರಿಸಲಿಕ್ಕೆ ಬೇಕಾದ ವಸ್ತುಗಳು ಕ್ಲೋರಿನ್ (Chlorine)ಮದ್ಯಸಾರ (Alchol) ಮತ್ತು ಬೆಂಜೀನ್ (Benzene)ಗಳು ಇವುಗಳಿಂದ ಇದನ್ನು ತಯಾರಿಸಬೇಕಾದರೆ ಮೊದಲು ಕ್ಲೋರಾಲ್ (Chloral) ಮತ್ತು ಕ್ಲೋರೋ ಬೆಂಜೀನ್ (Chloro benzene) ತಯಾರಿಸುತ್ತಾರೆ. ಆ ಮೇಲೆ ಈ ಎರಡೂ ಸಂಯುಕ್ತಗಳನ್ನು ಗಂಧಕಾಮ್ಲದ ಸಾನ್ನಿಧ್ಯದಲ್ಲಿ ಘಸೀಭವಿಸಿ, ಈ ಮಿಶ್ರಣವನ್ನು ನೀರಿನಲ್ಲಿ ಹಚಿಸುವುದರಿಂದ ಡಿ. ಡಿ. ಟಿ. ಯು ತಯಾರಾಗುತ್ತದೆ.

ಡಿ. ಡಿ. ಟಿ. ಯಲ್ಲಿ ಬಹುತರವಾಗಿ ಎಲ್ಲ ತರದ ಕ್ರಿಮಿ ಕೀಟಕಗಳನ್ನು ನಾಶಮಾಡುವ ಗುಣವಿದ್ದ ಮೂಲಕ ಇದನ್ನು ಅನೇಕ ವ್ಯಾಧಿಗಳನ್ನು ದೂರುಮಾಡುವದರಲ್ಲಿಯೂ ಹಾಗೂ ಒಕ್ಕಲತನದಲ್ಲಿಯೂ ಸುಲಭವಾಗಿ ಉಪಯೋಗಿಸಬಹುದಾಗಿದೆ. ಇದು ನೀರಿನಲ್ಲಿ ಕರಗುವದಿಲ್ಲ ಅಲ್ಲದೆ ಇದರ ಮೇಲೆ ಬೆಳಕಿನ ಯಾವ ತರದ ಪರಿಣಾಮ ಉಂಟಾಗುವದಿಲ್ಲ. ಇದರಲ್ಲಿ ಕಟುತರ ವಾಸನೆಇಲ್ಲದ ಮೂಲಕ, ಬೆಂಜೀನ್ ಹೆಕ್ಸಾಕ್ಲೋರಾಯಿಡ್ (BenzeneHexa chloride)ದ ಬದಲಾಗಿ ಇದೇ ಹೆಚ್ಚಾಗಿ ಉಪಯೋಗವಾಗುತ್ತಲಿದೆ. ಕ್ರಮವಾದ ರೀತಿಯಲ್ಲಿ ಉಪಯೋಗಿಸಿದಲ್ಲಿ, ಡಿ. ಡಿ. ಟಿ. ಯು ಮನುಷ್ಯನಿಗೂ ಸಾಕುಪ್ರಾಣಿಗಳಿಗೂ ಕೋಳಿ ಮತ್ತು ಮೀನಗಳಿಗೂ ವಿಷಕಾರಿಯಾಗಿ ಪರಿಣಮಿಸುವದಿಲ್ಲ.

ಇತ್ತೀಚೆಗೆ ಡಿ. ಡಿ. ಟಿ. ಯು ಮಲೇರಿಯಾ ದೂರುಮಾಡುವುದಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗವಾಗುತ್ತಿದ್ದುದರಿಂದ, ಮಲೇರಿಯಾ ತಜ್ಞರಿಗೆ ಇದೊಂದು ಹೊಸ ಆಯುಧ ಸಿಕ್ಕಹಾಗೆ ಆಗಿದೆ. ಇದಲ್ಲದೆ ಡಿ. ಡಿ. ಟಿ. ಹಾಗೂ ಸೀಮೆಎಣ್ಣೆಯಿಂದ ಕೂಡಿದ ಮಿಶ್ರಣವು ಸೊಳ್ಳೆ, ತಗಣಿ ಹಾಗೂ ಅನೇಕ ಕ್ರಿಮಿ ಕೀಟಕಗಳನ್ನು ನಾಶಮಾಡುವುದರಲ್ಲಿ ಉಪಯೋಗವಾಗುತ್ತಿದೆ. ಎಂದ ಮೇಲೆ ಇದರ ಮಹತ್ವ ಎಷ್ಟಿದೆ ಎಂಬುದನ್ನು ಪ್ರತಿಯೊಬ್ಬರೂ ಊಹಿಸಬಹುದಾಗಿದೆ.

ವೆಂಕೋಬಾಚಾರ್ಯ ಉಪಾಧ್ಯಾಯ
ಎಂ ಎಸ್ ಸಿ ಹೈದರಾಬಾದ (ದ.)

ಸಾಗರೋತ್ತರ ಸುದ್ದಿ ಸಂಸ್ಥೆ

ಶ್ರೀ ಬಿ. ಜಿ. ಕುಲಕರ್ಣಿ, ಬಿ. ಎ. (ಆನರ್ಸ)

ನಡುಗಾಲ ಸರಕಾರದ ನೇತೃತ್ವದಲ್ಲಿ ಹಿಂದುಸ್ಥಾನವು ಅಂತರರಾಷ್ಟ್ರೀಯ ರಾಜಕಾರಣದಲ್ಲಿ ತನಗೊಂದು ಮಹತ್ವದ ಹಾಗೂ ಮಾನದ ಸ್ಥಾನವನ್ನು ದೊರಕಿಸಿಕೊಳ್ಳುತ್ತಲಿದೆ. ಹಿಂದೀ ಸಂಸ್ಕೃತಿಯು ಇಷ್ಟು ಉಚ್ಚವಾಗಿದ್ದರೂ ಅದರ ಭೌಗೋಲಿಕ ಸ್ಥಾನವು ಮಹತ್ವದ್ದಾಗಿದ್ದರೂ ಅದರಲ್ಲಿ ಠಾಕೂರರಂಥ ಕವಿಗಳು, ರಾಮನ್ನರಂಥ ವಿಜ್ಞಾನಿಗಳು ಪ್ರತಿಬುದ್ಧನಂತಿರುವ ಮಹಾತ್ಮರು ಜನಿಸಿದರೂ ಜಗತ್ತಿನಲ್ಲಿ ಹಿಂದೀಯರಿಗೆ ಮಾನವಿರಲಿಲ್ಲ. ಅಮೇರಿಕೆಯಲ್ಲಿ ಹಿಂದೀಯರೆಂದರೆ ನಿಗ್ರೋಗಳೆಂದೇ ಭಾವಿಸಲಾಗುತಿತ್ತು. ಆಫ್ರಿಕೆಯಲ್ಲಿ ನಾಯಿಗಳನ್ನೂ ಹಿಂದೀಯರನ್ನೂ ಒಂದೇ ವರ್ಗಕ್ಕೆ ಸೇರಿಸಿದ್ದರು. ಅತಿಪ್ರಾಚ್ಯ ದೇಶಗಳಲ್ಲಿ ಹಿಂದೀಯರನ್ನು ಇಂಗ್ಲೀಷರ ಗುಲಾಮರೆಂದೇ ಕಾಣುತ್ತಿದ್ದರು ಹೊರತು ತಮ್ಮ ಧರ್ಮದ ಮಾತೃಭೂಮಿಯ ಮಕ್ಕಳೆಂದು ನೋಡುತ್ತಿರಲಿಲ್ಲ.

ಇದಕ್ಕೆ ಕಾರಣವುಂಟು. ನಮ್ಮನ್ನಾಳುವವರು ತಮ್ಮ ಬೇಳೆ ಬೇಯಿಸಿಕೊಳ್ಳುವವರ ಸಲುವಾಗಿ ಪರದೇಶಗಳಲ್ಲಿ ನಮ್ಮ ವಿರುದ್ಧ ಪ್ರಚಾರ ಸಾಗಿಸಿದರು. ಹಿಂದೀಯರನ್ನು ಅಲ್ಲಗಳೆಯುವ ಹಿಂದೀ ಸಮಾಜದಲ್ಲಿಯ ದೋಷಗಳನ್ನಷ್ಟೇ ಎತ್ತಿತೋರಿಸುವ ಎಷ್ಟೋ "ಗಟರ ಇನ್ಸಪೆಕ್ಟರರ" ವರದಿಗಳು ಪ್ರಸಿದ್ಧವಾದವು. ಇದರ ಫಲವಾಗಿ ಹಿಂದೀಯರು ವಿದೇಶಿಯರ ಕಣ್ಣಲ್ಲಿ ಆಕಾಶದಲ್ಲಿ ಹಗ್ಗವನ್ನು ನಿಲ್ಲಿಸಿ ಅದರ ಮೇಲೆ ಹತ್ತುವ ಮಾಟಗಾರರಾದರು ಹೊರತು ಸುಸಂಸ್ಕೃತ ಮಾನವರಾಗಲಿಲ್ಲ. ಈ ಅಪಪ್ರಚಾರದ ಕೆಲಸವನ್ನು ಅತ್ಯಂತ ಯಶಸ್ವಿಯಾಗಿ ತೆರೆಯ ಮರೆಗೆ ನಿಂತುಕೊಂಡು ಮಾಡಿದವರು ವಿದೇಶಿ ಸುದ್ದಿ ಸಂಸ್ಥೆಯವರು. ಈ ಸಂಸ್ಥೆಗಳಲ್ಲಿ ಮುಖ್ಯವಾದುದೆಂದರೆ ಇಂಗ್ಲಂಡದಲ್ಲಿ ಜರ್ಮನನೊಬ್ಬನಿಂದ ಸ್ಥಾಪಿತವಾದ ಹಾಗೂ ಮುಂದೆ (೧೮೫೧) ಇಂಗ್ಲಂಡದ ಕೈಗೊಂಬೆಯಾದ ರಾಯ್ಟರ ಸಂಸ್ಥೆ. ಈ ಸಂಸ್ಥೆಗಳು ಹಿಂದುಸ್ಥಾನದ ಸುದ್ದಿಗಳಿಗೆ ವಿಕೃತ ಸ್ವರೂಪ ಕೊಟ್ಟು ಅವುಗಳನ್ನು ಪರದೇಶಗಳಿಗೆ ಪೂರೈಸಿದವು. ಹಿಂದುಸ್ಥಾನಕ್ಕೆ ಅದರ ರಾಜಕೀಯ ಮುನ್ನಡೆಗೆ ಉಪಯೋಗವಾಗದಂಥ ವಿದೇಶಿ ಸುದ್ದಿಗಳನ್ನಷ್ಟೇ ಒದಗಿಸಿಕೊಟ್ಟವು. ಇದರಿಂದ ಹಿಂದೀಯರ ನಿಜವಾದ ಬೆಲೆಯು, ಅವರ ಆಕಾಂಕ್ಷೆಗಳು, ಯತ್ನಪ್ರಯತ್ನಗಳು ವಿದೇಶಿಯರಿಗೆ ತಿಳಿಯಲಿಲ್ಲ. ಜಗತ್ತಿನಲ್ಲಿ ನಡೆದ ಸಂಗತಿಗಳು ವಿಶೇಷವಾಗಿ ಸ್ವಾತಂತ್ರ್ಯ ಹೋರಾಟಗಳ ಸುದ್ದಿಗಳು ಸಂಸ್ಥೆಗಳಲ್ಲಿ ಸೋಸಿ ಬರುತ್ತಿದ್ದವಾದ್ದರಿಂದ ನಮ್ಮ ವಿಕಾಸವು ಕುಂಠಿತವಾಯಿತು. ಒಂದೇ ತತ್ವಕ್ಕಾಗಿ ಹೋರಾಡುವ ನಮ್ಮ ನೆರೆಹೊರೆಯ ರಾಷ್ಟ್ರಗಳೊಡನೆ ಕೂಡ ನಮ್ಮ ಸ್ನೇಹ ಸಂಬಂಧ ಬೆಳೆಯಲಿಲ್ಲ.

ನಡುಗಾಲ ಸರಕಾರದ ಸ್ಥಾಪನೆಯಾದೊಡನೆ ಪರಿಸ್ಥಿತಿಯು ಬದಲಿಸುತ್ತಿದೆ. ನಮ್ಮ ವಿದೇಶೀ ಸಂಬಂಧಗಳಿಗೆ ಹೊಸ ಕಳೆ ಬಂದಿದೆ. ನಮ್ಮ ರಾಯಭಾರಿಗಳು ಬೇರೆ ಬೇರೆ ದೇಶಗಳಿಗೆ ಹೋಗುತ್ತಲಿದ್ದಾರೆ. ಇಂದಿನಿಂದಲೆ ದಿಲ್ಲಿಯಲ್ಲಿ ಆಂತರ ಏಶಿಯಾ ಪರಿಷತ್ತು ನೆರೆದು ಹಿಂದುಸ್ಥಾನಹಾಗೂ ಏಶಿಯಾದಇತರ ರಾಷ್ಟ್ರಗಳ ಸ್ನೇಹಕ್ಕೆ ಹೊಸ ಒಪ್ಪು ಹಾಕುವ ಬಗ್ಗೆ ಚರ್ಚೆ ನಡೆಸಿದೆ ನಾವು ಸ್ವಾತಂತ್ರ್ಯದ ಮಹಾದ್ವಾರದಲ್ಲಿದ್ದೇವೆ. ನಮ್ಮ ಹೊಸ ಸ್ಥಾನವನ್ನು ಕಾಯ್ದುಕೊಳ್ಳಬೇಕಾದರೆ ನಾವು ಪರದೇಶದ ವೃತ್ತಾಂತಗಳನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ನಾವು ನಡೆಸಿದ ಕಾರ್ಯವು ಪರದೇಶಗಳಿಗೆ ತಿಳಿಯಬೇಕು. ಈ ಕಾರ್ಯಕ್ಕಾಗಿ ನಾವು ವಿದೇಶೀ ಸುದ್ದಿ ಸಂಸ್ಥೆಗಳನ್ನು ನಂಬಲಾಗದು. ಹಿಂದಿನ ಕೊಳಚೆಯನ್ನು ತೆಗೆದು ಅದರ ಸ್ಥಳದಲ್ಲಿ ಒಂದು ಉಪವನ ನಿರ್ಮಿಸುವದು ಅವಶ್ಯವಿದೆ. ಇದಕ್ಕಾಗಿ ನೂರಕ್ಕೆ ನೂರರಷ್ಟು ನಮ್ಮದೇ ನಮ್ಮದಾದ ಸಾಗರೋತ್ತರ ಸುದ್ದಿಸಂಸ್ಥೆಯು ಅವಶ್ಯವಿದೆ.

ಆನಂದದ ಸುದ್ದಿ. ಕೆಲವು ದಿನಗಳ ಹಿಂದೆ ಲಂಡನ್ನದಲ್ಲಿ ಕೆಲವು ಉತ್ಸಾಹಿ ತರುಣ ಪತ್ರಕಾರರು ಇಂತಹದೊಂದು ಸುದ್ದಿ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಅದರ ಹೆಸರು "ಇಂಡಿಯನ್ ಪ್ರೆಸ್ ಅಸೋಸಿಯೇಶನ್" ಹಿಂದೀ ಸುದ್ದಿ ಸಂಸ್ಥೆ. ಈ ಸಂಸ್ಥೆಯ ಮುಖ್ಯ ಕಚೇರಿಯು ಮುಂಬಯಿಯಲ್ಲಿದ್ದು, ಸದ್ಯಕ್ಕೆ ಲಂಡನ್ನ, ಪ್ಯಾರಿಸ, ಮತ್ತು ನ್ಯೂಯಾರ್ಕಗಳಲ್ಲಿ ಅದರ ಶಾಖೆಗಳಿವೆ. ಯುರೋಪ ಅಮೇರಿಕಾ ಮತ್ತು ಅತಿ ಪ್ರಾಚ್ಯದ ಪ್ರತಿಯೊಂದು ದೇಶದ ರಾಜಧಾನಿಯಲ್ಲಿಯೂ ಸಂಸ್ಥೆಯ ಶಾಖೆಗಳು ಸ್ಥಾಪಿಸಲ್ಪಡುವವು. ಸುದ್ದಿಗಳು ಹಿಂದೀ ಕಣ್ಣುಗಳಿಂದ ಸಂಗ್ರಹಿಸಲ್ಪಟ್ಟು, ಹಿಂದೀ ಲೆಕ್ಕಣಿಕೆಗಳಿಂದಲೇ ಬರೆಯಲ್ಪಡುವವು. ಪೂರ್ವದ ಸುದ್ದಿಗಳು ಕಲಕತ್ತೆಯಲ್ಲಿಯೂ ಪಶ್ಚಿಮದ ಸುದ್ದಿಗಳು ಮುಂಬಯಿಯಲ್ಲಿಯೂ ಸಂಗ್ರಹಿಸಲ್ಪಡುವವು. ಅಲ್ಲಿಂದ ಅವುಗಳನ್ನು ವೃತ್ತಪತ್ರಗಳಿಗೆ ಕಳಿಸಲಾಗುವದು. ವಿದೇಶೀ ಶಾಖೆಗಳ ಮುಖಾಂತರ ವಿದೇಶದ ಪತ್ರಿಕೆಗಳಿಗೆ ಹಿಂದೀಸುದ್ದಿಗಳನ್ನು ಪೂರೈಸಲಾಗುವದು.

ಸದ್ಯಕ್ಕೆ ಟೆಲಿಪ್ರಿಂಟರ ಸೌಕರ್ಯವು ಒಂದೇ ಸುದ್ದಿ ಸಂಸ್ಥೆಯ (ರಾಯ್ಟರ) ಸೊತ್ತಾದುದರಿಂದ ಸುದ್ದಿಗಳನ್ನು ತಂತಿಯಿಂದ ಕಳಿಸಲಾಗುವದು. ಮುಂದೆ ಟೆಲಿಪ್ರಿಂಟರ ಇಲ್ಲವೆ ಆಕಾಶವಾಣಿಯ ಮೂಲಕ ಇವುಗಳನ್ನು ಪೂರೈಸಲಾಗುವದು. ದೇಶೀಭಾಷೆಗಳ ಪತ್ರಿಕೆಗಳಿಗೆ ಅದೇ ಭಾಷೆಯಲ್ಲಿ ಸುದ್ದಿಗಳನ್ನು ಕೊಡುವ ಯೋಜನೆಯ ವಿಚಾರವೂ ನಡೆದಿದೆ. ಈ ಸಂಸ್ಥೆಯ ಸುದ್ದಿಗಳು ಈಗಾಗಲೇ ಲೋಕಪ್ರಿಯವಾಗಿ ಇಂಗ್ಲೀಷ ಮರಾಠಿ ಪತ್ರಿಕೆಗಳಲ್ಲಿ ಪ್ರಸಿದ್ಧವಾಗುತ್ತಿವೆ ಸಂಯುಕ್ತ ಕರ್ನಾಟಕದಲ್ಲಿಯೂ ಕೆಲವು ಪ್ರಕಟವಾಗಿವೆ. ಸಂಸ್ಥೆಗೆ ಪ್ರಸಿದ್ಧ ಪತ್ರಕಾರರ ನೆರವು ಸಂಪಾದಕರ ಬೆಂಬಲವು ದೊರಕಿವೆ. ಸ್ವತಃ ಜವಾಹರಲಾಲರೇ ಅದನ್ನು ತೊಟ್ಟಿಲದಲ್ಲಿ ಹಾಕಿ ತೂಗಿದ್ದಾರೆ.

ಇಂಡಿಯನ್ ಪ್ರೆಸ್ ಅಸೋಸಿಯೇಶನ್‌ದ ಮೂಲಸ್ತಂಭರಾದ ಶ್ರೀ ಶ್ರೀಧರ ಶೇಲಕರರು ಬೆಳಗಾಂವಿಯವರು, ಒಂದು ದೃಷ್ಟಿಯಿಂದ ಕನ್ನಡಿಗರು, ಇವರು ಮುಂಬಯಿ ವಿಶ್ವವಿದ್ಯಾಲಯದ ಮ್ಯಾಟ್ರಿಕ್ ಪರೀಕ್ಷೆಗೆ ಬೆಸತ್ತು ಬ್ಯಾರಿಷ್ಟರರಾಗಲು ಲಂಡನ್ನಿಗೆ ಹೋದರು. ಆದರೆ ಹಿಂದಿನ ಆರ್ಥಿಕ ಬೆಂಬಲವು ಒಮ್ಮೆಲೇ ಕಳಚಿದ್ದರಿಂದ ಇಂಗ್ಲಂಡದಲ್ಲಿಯೇ ಜೀವನೋಪಾಯವನ್ನು ಹುಡುಕುವ ಪ್ರಸಂಗವು ಇವರ ಮೇಲೆ ಬಂದಿತು. ಡೇಲಿ ಹೆರಾಲ್ಡ ಪತ್ರಿಕೆಯ ಮುದ್ರಣಾಲಯದಲ್ಲಿ ಯಂತ್ರ ಸ್ವಚ್ಛ ಮಾಡುವವನ ಕೆಲಸದಿಂದ ಮೇಲಕ್ಕೇರುತ್ತ ಬಂದು ಈಗ ಅವರು ಲಂಡನ್ನಿನ ಸುಪ್ರಸಿದ್ಧ ಪತ್ರಕಾರರಲ್ಲೊಬ್ಬರಾಗಿದ್ದಾರೆ. ಇವರು ಇಂಗ್ಲಂಡದಲ್ಲಿ ಅನುಭವಿಸಿದ ಕಷ್ಟ ನಷ್ಟಗಳು ಅಷ್ಟಿಷ್ಟಲ್ಲ. ಅವುಗಳನ್ನು ಅವರೇ ಬರೆಯಲಿರುವ "ಫ್ಲೀಟ್ ಸ್ಟ್ರೀಟದಲ್ಲಿ 'ನಾ ಕಳೆದ ಹಿಂತರ್ಷ' ಎಂಬ ಪುಸ್ತಕದಲ್ಲಿ ಓದಬಹುದು.

ವೇಪ್ರಿನ್

ರಿಜಿಸ್ಟರ್ಡ

ಇದರ ಲೇಪನದಿಂದ ಕಜ್ಜಿ ಘಾಯ ಪ್ರಾಣ ಹಿಸಬು ನಾರಹುಣ್ಣು ಕರಪಾಕ ಮೂಲವ್ಯಾಧಿ ಮೆಟ್ಟಿನ ಘಾಯ ಮುದ್ದಣ (Pimples) ಸುಟ್ಟ ಘಾಯ, ಕತ್ತಿ ಘಾಯ, ಕೊಡಪಾಳ ಗಜಕರ್ಣ ಮಾಯವಾಗುವವು. ಇದು ಸುರಿಯುತ್ತಿರುವ ರಕ್ತವನ್ನು ನಿಲ್ಲಿಸಿ ನೋವನ್ನು ನಿವಾರಿಸುವದು. ಇದಲ್ಲದೆ ಇಂದ್ರಜಾಲದೋಷಾದಿಯಲ್ಲಿ ಜೀವಿನ ವಿಷವನ್ನು ಬಹಿರ್ಗತ ಪಡಿಸುವದು ನಿಮ್ಮಲ್ಲಿ ಒಂದು ಬಾಟ್ಲಿ ಇದ್ದಲ್ಲಿ ಒಬ್ಬ ವೈದ್ಯರೇ ಇದ್ದಂತಾಗುವದು. ಕ್ರಯ ಬಹು ಸುಲಭ.

೧/೪ ಔನ್ಸ ಬಾಟ್ಲು ೧ ಕ್ಕೆ ೦-೮-೦
೧/೨ ಔನ್ಸ ಬಾಟ್ಲು ೧ ಕ್ಕೆ ೦-೧೪-೦

ಕ್ಯಾಪ್‌ಸಿನಾಲ್

ನೆಗಡಿ ಮತ್ತು ಕೆಮ್ಮನ್ನು ಉಪೇಕ್ಷಿಸಬೇಡಿರಿ

ಇದನ್ನು ತಡೆಗಟ್ಟದೆ ಇದ್ದಲ್ಲಿ ಶ್ವಾಸಕೋಶಗಳ ವ್ಯಾಧಿಗೆ ಅವಕಾಶವಾಗುವದು. ಕ್ಯಾಪ್‌ಸಿನಾಲ್ ಸೇವಿಸಲು ಕೆಮ್ಮು ಶೀತ ಇನ್‌ಫ್ಲುಯಂಜ ಉಬ್ಬಸ ನಾಶವಾಗುವದು. ಪ್ರತಿಯೊಂದು ಹೊತ್ತಿನ ಔಷಧದಲ್ಲೂ ಗುಣವುಂಟು.

೬ ಬಿಲ್ಲೆ ಪ್ಯಾಕೆಟ್ ೧ ಕ್ಕೆ ೪ ಆಣೆ.

ಹ್ರಾಲೇರಿನ

ಆಮಶಂಕೆ ಭೇದಿಗೆ ದಿವ್ಯೌಷಧ

ಹೊಲೇರಿನ ಸೇವನೆಯಿಂದ ಅಜೀರ್ಣ ಭೇದಿ, ಆಮ ಅಥವಾ ರಕ್ತಯುಕ್ತ ಭೇದ ಹೊಟ್ಟೆ ನೋವು ವಾಂತಿ ತತ್ಸಂಬಂಧವಾದ ಜ್ವರ ಅನುಕ್ರಮವಾಗಿ ನಿವಾರಣೆಯಾಗುವವು. ಉಗ್ರ ಪರಿಸ್ಥಿತಿ ಹತೋಟಿಗೆ ಬರುವದರಲ್ಲಿ ಸಂದೇಹವಿಲ್ಲ.

೬ ಬಿಲ್ಲೆ ಪ್ಯಾಕೆಟ್ ೧ ಕ್ಕೆ ೪ ಆಣೆ.

ಎಲ್ಲಾ ಕಡೆಗಳಲ್ಲೂ ದೊರೆಯುತ್ತೆ

ಡಿಸ್ಟ್ರಿಬ್ಯೂಟರರು:

ಆರ್. ಕೆ. ಕಬ್ಬೂರ ಆ್ಯಂಡ ಸನ್ಸ
ಹುಬ್ಬಳ್ಳಿ

ಸ್ಟಾಕಿಸ್ಟರು:

ಧಾರವಾಡ ಫಾರ್ಮಸಿ, ಧಾರವಾಡ
ದುರ್ಗಾವಿಲಾಸ ಸ್ಟೋರ್ಸ, ಗದಗ
ಮುಸರ್‍ಸ್ ಜತ್ತಿ ಅ್ಯಂಡ ಸನ್ಸ, ವಿಜಾಪೂರ
ಲಕ್ಷ್ಮೀ ಸ್ಟೋರ್ಸ, ಬಾಗಲಕೋಟೆ.
ಟಿ. ಪಿ. ವೀರಭದ್ರಪ್ಪ, ಹೊಸಪೇಟೆ
ಶಿರ್ಶಿ ಡ್ರಗ್ ಸ್ಟೋರ್ಸ, ಶಿರ್ಶಿ
ದೇವಪ್ಪಾ ನಾಯ್ಕ & ಸನ್ಸ್, ಕುಮಟಾ
ವೆಂಕಟೇಶ ಫಾರ್ಮಸಿ, ರಾಣೆಬೆನ್ನೂರ
ಮುಜುಮದಾರ ಅ್ಯಂಡ ಕಸಬೇಕರ ಬ್ರದರ್ಸ್,
ಕಾರವಾರ
ಶಾರ್ಪ ಮತ್ತು ಬಿ. ಜನರಲ್ ಮರ್ಚಂಟ್ಸ
ಬಳ್ಳಾರಿ.
ದಿ ಯುನೈಟೆಡ್ ಕರ್ಮಲ ಏಜನ್ಸೀಜ ಶಹಾಪುರ
ಬೆಳಗಾವಿ